ಈ ಯೋಜನೆಯು 1992-93ರಿಂದ ಪ್ರಾರಂಭದ ಹಂತದಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಕಾರ್ಯಚಟುವಟಿಕೆಗಳನ್ನು ಹಮ್ಮಿಕ್ಕೊಳ್ಳಲಾಗಿದ್ದು 1995-96ರಿಂದ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಯಲ್ಲೂ ಕೂಡ ಯೋಜನೆಯ ಅನುಷ್ಠಾನ ಪ್ರಾರಂಭವಾಗಿದೆ.

ಪಶ್ಚಿಮ ಘಟ್ಟ ಅರಣ್ಯೀಕರಣ ಯೋಜನೆಯನ್ನು ಅನುಷ್ಠಾನಗೊಳಿಸಲು ಕೆಲೊಂಬೋ ಯೋಜನೆ ಅಡಿಯಲ್ಲಿ ಇದುವರೆವಿಗೂ 75 ಜನ ಅಧಿಕಾರಿಗಳನ್ನು ವಿದೇಶ ತರಬೇತಿಗೆ ಕಳುಹಿಸಿಕೊಡಲಾಗಿದೆ. ಈ ಯೋಜನ ದಾಖಲಾತಿಯಲ್ಲಿ ಮಂಜೂರಾದ ನಿಗದಿಪಡಿಸಿದ ಪ್ರಮಾಣದಲ್ಲಿ ಅಗತ್ಯವಾಗಿ ಬೇಕಾದಂತಹ ವಾಹನಗಳನ್ನು ಮಾತ್ರ ಖರೀದಿಸಲಾಗಿದೆ. ಯೋಜನೆಯ ಬಹುಭಾಗ ಹಣವನ್ನು ಜಂಟಿ ಅರಣ್ಯ ಯೋಜನೆ ಮತ್ತು ನಿರ್ವಹಣಾ ಮೂಲಕ ಅರಣ್ಯ ಸಂರಕ್ಷಣೆ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳಿಗೆ ಖರ್ಚು ಮಾಡುತ್ತಿದ್ದು, ಇದರಿಂದ ಸ್ಥಳೀಯ ಜನರ ಅರಣ್ಯ ಉತ್ಪನ್ನದ ಬೇಡಿಕೆಗಳನ್ನು ಪೂರೈಸಲು ಸಾಕಷ್ಟು ನೆಡುತೋಪುಗಳನ್ನು ಸೃಷ್ಟಿಸಲು (ASSETS) ಅನುಕೂಲವಾಗಿದೆ. ಯೋಜನೆಯನ್ನು ಸಮರ್ಥ ರೀತಿಯಲ್ಲಿ ಅನುಷ್ಠಾನಗೊಳಿಸಲು ಅರಣ್ಯ ಇಲಾಖೆಯ ವಿವಿಧ ಹಂತದಲ್ಲಿ ಸೂಕ್ತ ವ್ಯವಸ್ಥೆಯನ್ನು ಮಾಡಲಾಗಿದೆ. ಹಾಗೂ ಯೋಜನೆಯ ಹಣವನ್ನು ಯೋಗ್ಯ ರೀತಿಯಲ್ಲಿ ಬಳಕೆ ಮಾಡಿದ ಬಗ್ಗೆ ಮತ್ತು ಯೋಜನೆಯ ಉದ್ದೇಶಗಳನ್ನು ಸಫಲವಾಗಿ ಯಶಸ್ವಿಯಾಗಿ ಅನುಷ್ಠಾನಗೊಳಿಸುತ್ತಿರುವುದನ್ನು ಆಗಿಂದಾಗ್ಗೆ ಮೌಲ್ಯ ಮಾಪನ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಲು ವ್ಯವಸ್ಥೆ ಮಾಡಲಾಗಿರವುದರಿಂದ ಲೋಪದೋಷಗಳಿಗೆ ಅವಕಾಶವಿಲ್ಲದಂತೆ ಕ್ರಮ ತೆಗೆದುಕೊಳ್ಳಲಾಗಿದೆ.

ಮಂತ್ರಿಗಳ ಹೇಳಿಕೆ ಏಷ್ಯನ್ ಪವರ್ ಲಿಫ್ಟಿಂಗ್ ಚಾಂಪಿಯನ್‌ಷಿಪ್‌ಗೆ ಹಣ ಬಿಡುಗಡೆ.

ಶ್ರೀ ಅಜಯ ಕುಮಾರ್ ಸರ್‌ನಾಯಕ್ (ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಯೋಗೀಶ್ ಭಟ್‌ರವರು ಗಮನ ಸೆಳೆದು ಮಂಗಳೂರಿನಲ್ಲಿ ಏಷ್ಯನ್ ಪವರ್ ಲಿಫ್ಟಿಂಗ್ ಚಾಂಪಿಯನ್‌ಶಿಪ್‌ಗೆ ಹಣ ಬಿಡುಗಡೆ ಮಾಡಬೇಕೆಂದು ಹೇಳಿದ್ದರು. ಈಗಾಗಲೇ ಸರ್ಕಾರ 2 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದೆ.

ವಿತ್ತೀಯ ಕಾರ್ಯಕಲಾಪಗಳು

(1995-96ನೇ ಸಾಲಿನ ಬೇಡಿಕೆಗಳ ಮೇಲೆ ಚರ್ಚೆ ಮತ್ತು ಮತಕ್ಕೆ ಹಾಕುವುದು.)

ಉಪಾಧ್ಯಕ್ಷರು : ನಮ್ಮ ಕಲಾಪದ ಪ್ರಕಾರ ನಿನ್ನೆ ಈ ಚರ್ಚೆ ಮುಕ್ತಾಯವಾಗ ಬೇಕಿತ್ತು. ನಿನ್ನೆ ಇದಕ್ಕೆ ಉತ್ತರ ಸಹ ಮುಗಿಸಬೇಕಾಗಿತ್ತು. ಇವತ್ತು 3 ಗಂಟೆಯೊಳಗೆ ಮುಗಿಸಿ 3 ಗಂಟೆಯ ನಂತರ ಮಂತ್ರಿಗಳು ಉತ್ತರ ಕೊಡುತ್ತಾರೆ. ಆದ್ದರಿಂದ ಎಲ್ಲಾ ಮಾನ್ಯ ಸದಸ್ಯರು ಸಹಕಾರ ನೀಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

+ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೆ, ತಮ್ಮ ಕಛೇರಿಯಿಂದ ನಾನು ದಾಖಲೆ ತೆಗೆದುಕೊಂಡಿದ್ದೇನೆ. ಬಿಜೆಪಿಗೆ ಇದುವರೆಗೆ 150 ನಿಮಿಷ ನಾವು ತೆಗೆದಕೊಂಡಿದ್ದೇವೆ. ಕಾಂಗ್ರೆಸ್(ಐ)ನವರು 209 ನಿಮಿಷ ತೆಗೆದುಕೊಂಡಿದ್ದಾರೆ. ನನ್ನ ಸಮಸ್ಯೆಯಿದೆ, 40 ಜನ ಶಾಸಕರನ್ನು ಜೊತೆಗೆ ತೆಗೆದುಕೊಂಡು ನಾನು ಕೆಲಸ ಮಾಡ ಬೇಕಾಗಿದೆ. ನಮ್ಮ ನೋವನ್ನು ನಿಮ್ಮ ಹತ್ತಿರ ಹೇಳದೆ ಇನ್ನು ಯಾರ ಹತ್ತಿರ ಹೇಳಿಕೊಳ್ಳಲಿ. ಕೆಸಿಪಿಯವರು 54ನಿಮಿಷ ಮಾತನಾಡಿದ್ದಾರೆ. ವಾಟಾಳ್‌ನಾಗರಾಜ್‌ರವರು 180 ನಿಮಿಷ ಮಾತನಾಡಿದ್ದಾರೆ. ನಮ್ಮ 40 ಜನ ಶಾಸಕರಲ್ಲಿ ಇನ್ನು 10-12ಜನ ಶಾಸಕರು ಮಾತನಾಡಲಿಕ್ಕೆ ಹೆಸರು

ಕೊಟ್ಟಿದ್ದಾರೆ. ನಮಗೆ ಎಷ್ಟು ಸಮಯ ಕೊಡುತ್ತೀರಿ, ಒಟ್ಟೊಬ್ಬರು ಎಷ್ಟು ನಿಮಿಷ ಮಾತನಾಡಬಹುದು ನೀವು ಕೊಟ್ಟ ಸಮಯವನ್ನು ನಾವು ಹಂಚಿಕೊಳ್ಳುತ್ತೇವೆ. ಮಾತನಾಡುವವರು 8 ಜನ ಇದ್ದರೆ ನೀವು 50-60 ನಿಮಿಷ ಅವಕಾಶ ಕೊಟ್ಟರೆ ನಾವು ಒಂದು ಐದೈದು ನಿಮಿಷ ಹಂಚಿಕೊಳ್ಳುತ್ತೇವೆ. ನೀವು ಮಾತನಾಡಬೇಡಿ ಅಂದರೆ ಸಭೆಯಿಂದ ಹೊರಗೆ ಇರುತ್ತೇವೆ. ನೀವು ನಮಗೆ ಸಮಯ ಕೊಡುವುದಾದರೆ, ಅಧಿಕೃತ ವಿರೋಧಪಕ್ಷಕ್ಕೆ ಎಷ್ಟು ಸಮಯ ನಿಗದಿ ಮಾಡಿದ್ದೀರಿ? ಅದನ್ನು ಹೇಳಿದರೆ ನಾವು ಯಾರ್ಯಾರು ಎಷ್ಟೆಷ್ಟು ನಿಮಿಷ ಮಾತನಾಡಬಹುದೆಂದು ಸಮಯ ಹಂಚಿಕೊಂಡು ಮಾತನಾಡುತ್ತೇವೆ. ಇಷ್ಟನ್ನು ನಾನು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ. ಇಲ್ಲದಿದ್ದರೆ ನಾವು ಯಾರೂ ಮಾತನಾಡುವುದಿಲ್ಲ, ನಿನ್ನೆ ದಿವಸ ನಾನು ಹೇಳಿದ್ದೇನೆ. ವಿರೋಧ ಪಕ್ಷಕ್ಕೆ ವಿಶೇಷವಾದ ಸವಲತ್ತುಗಳೇನು ಬೇಡ. ನ್ಯಾಯಬದ್ಧವಾಗಿ ತಾವೇನು ಸಮಯ ನಿಗದಿ ಮಾಡುತ್ತೀರಿ ಆ ಸಮಯವನ್ನು ಹೊಂದಿಸಿಕೊಂಡು ಎಷ್ಟು ಜನ ಮಾತನಾಡಬಹುದೆಂದು ನಾವು ಸಮಯ ಹಂಚಿಕೊಳ್ಳುತ್ತೇವೆ.

+ ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಉಪಾಧ್ಯಕ್ಷರೆ, ನಾನು ನಿನ್ನೆ ನನ್ನ ಭಾಷಣ ಪ್ರಾರಂಭ ಮಾಡಿದೆ. ನಾನು ವಿದ್ಯೆಯನ್ನು ಈ ಸಮಾಜದ ಮೆದುಳು ಎಂದು ಹೇಳಿ, ಈ ಮೆದುಳು ಕೆಲಸ ಮಾಡುವುದನ್ನು ನಿಲ್ಲಿಸಿದೆಯೆಂದು ಹೇಳಿ ಅಲ್ಲಿಗೆ ನನ್ನ ಭಾಷಣ ಮುಗಿಸಿದ್ದೆ. ಸಮಾಜದ ಮೆದುಳು ಅಂದರೆ ವಿದ್ಯೆ ಅದು ನನ್ನ ಅಸ್ತಿತ್ವ ಮತ್ತು ಪ್ರಾಶಸ್ತ್ಯವನ್ನು ಕಳೆದುಕೊಂಡಿರತಕ್ಕ ಕಾರಣಕ್ಕೋಸ್ಕರ ಇಡೀ ಸಮಾಜ ಇವತ್ತು ಅಸ್ತವ್ಯಸ್ಥವಾಗಿದೆ. ಇವತ್ತು ಈ ಸಮಾಜ ಏನು ನಿಜವಾದ ಸಮಸ್ಯೆಗಳನ್ನು ಎದುರಿಸುತ್ತಿದೆ ಅಂತಹ ಸಮಸ್ಯೆಗಳಿಗೆ ಪೂರಕವಾಗಿರತಕ್ಕ ವಿದ್ಯೆಯನ್ನು ನಾವು ವಿದ್ಯಾರ್ಥಿಗಳಿಗೆ ಕೊಡುತ್ತಿಲ್ಲ. ನಾವು ಯಾವ ರೀತಿಯ ವಿದ್ಯಾರ್ಥಿಗಳ ಮೆದುಳನ್ನು ತಯಾರು ಮಾಡುತ್ತಿದ್ದೇವೆಂದರೆ, ವಿಕೃತ ಮನಸ್ಸುಗಳನ್ನು ಮತ್ತು ಅಸ್ವಸ್ತ ಮೆದುಳನ್ನು ತಯಾರು ಮಾಡುತ್ತಿದ್ದೇವೆ.

ಆ ವಿಕೃತ ಮನಸ್ಸುಗಳು ಮತ್ತು ಅಸ್ವಸ್ಥ ಮೆದುಳು ಈ ಸಮಾಜಕ್ಕೆ ಪ್ರಯೋಜನವಾಗುವುದರ ಬದಲು ಅಪಾಯಕಾರಿ ಬೆಳವಣಿಕೆಯಾಗತಕ್ಕದ್ದು ಆ ಅಪಾಯವನ್ನು ನಾವು ಇವತ್ತು ಸಮಾಜದಲ್ಲಿ ನೋಡುತ್ತಿದ್ದೇವೆ. ಹಾಗಾಗಿ ಈ ಸರ್ಕಾರ ವಿದ್ಯಾಭ್ಯಾಸದ ರೂಪರೇಷೆಗಳನ್ನು ವಿದ್ಯಾಭ್ಯಾಸದ ವಿಧಾನವನ್ನು ರೂಪಿಸತಕ್ಕ, ಮುಖ್ಯವಾಗಿ ಪಠ್ಯಪುಸ್ತಕಗಳಲ್ಲಿ ಅದನ್ನು ಅಳವಡಿಸತಕ್ಕ ಸಿಲಬಸ್ ಏನಿದೆ ಕಂಟೆಂಟ್ಸ್ ಆಫ್ ದಿ ಲೆಸೆನ್ಸ್ ಅದರಲ್ಲಿ ಮೂಲಭೂತವಾದಂತಹ ಸಮಗ್ರವಾದಂತಹ ಬದಲಾವಣೆ ಭಾರದೆ ನಾವು ಇವತ್ತು ನಮ್ಮ ಸಮಾಜದ ಅತ್ಯಮೂಲ್ಯ ಆಸ್ತಿಯಾಗಿರತಕ್ಕ ವಿದ್ಯಾರ್ಥಿಗಳನ್ನು ನಾವು ಒಂದು ದೇಶದ ಸತ್ಪ್ರಜೆಗಳಾಗಿ ಆರೋಗ್ಯಕರವಾದ ರೀತಿಯಲ್ಲಿ ಬೆಳವಣಿಗೆ ಮಾಡಿಸುವುದಕ್ಕೆ ಖಂಡಿತಾ ಸಾಧ್ಯವಿಲ್ಲ. ಅದರ ಪರಿಣಾಮದ ಬಗ್ಗೆ ನಿನ್ನೆ ನಾನು ಒಂದು ಉದಾಹರಣೆ ಹೇಳಿದೆ. ಪಠ್ಯಪುಸ್ತಕದಲ್ಲಿ ಪಾಠಗಳು ಹೇಗಿರುತ್ತವೆಂದರೆ. ಇವನು ಚಮ್ಮಾರ ಇವನ ಕೆಲಸ ಚಪ್ಪಲಿ ಹೊಲೆಯುವುದು. ಇವನು ಯಾವಾಗಲೂ ಊರ ಹೊರಗೆ ವಾಸ ಮಾಡುತ್ತಾನೆ. ಇದು ಏನನ್ನು ತೋರಿಸುತ್ತದೆಂದು ನಾನು ಉದಾಹರಣೆಗೆ ಹೇಳಿದೆ. ಇಂತಹದ್ದು ಹಲವಾರು ನಮ್ಮ ಪಠ್ಯಪುಸ್ತಕಗಳಲ್ಲಿ ಅಪ್ರಸ್ತುತವಾದಂತಹ ಮತ್ತು ಇರ್‌ರಿಲೆವೆಂಟ್ ಆದಂಥ ಪಠ್ಯಪುಸ್ತಕಗಳ, ಕ್ರಮವನ್ನು ಇವತ್ತು ನಮ್ಮ ವಿದ್ಯಾಭ್ಯಾಸದಲ್ಲಿ ಅಳವಡಿಸಿದ್ದಾರೆ. ಅದು ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಉನ್ನತ ಶಿಕ್ಷಣದವರೆಗೂ ನಮ್ಮ ಇಡೀ ಸಿಲಬಸ್‌ನಲ್ಲಿರತಕ್ಕ ಕಂಟೆಂಟ್ಸ್ ನಮ್ಮ ದೇಶದ ಪ್ರಸ್ತುತ ಸಮಸ್ಯೆಗಳಿಗೆ ಸ್ಪಂಧಿಸದೆ ಇರತಕ್ಕ ರೀತಿಯಲ್ಲಿರುವ ಕಾರಣ ಇವತ್ತು ನಮ್ಮ ಇಡೀ ವಿದ್ಯಾರ್ಥಿ ಸಮುದಾಯ ಏನಿದೆ ಆ ವಿದ್ಯಾರ್ಥಿ ಸಮುದಾಯದಲ್ಲಿ ಮೊದಲನೆಯದಾಗಿ ಬೇಜವಾಬ್ದಾರಿತನ ಪಲಾಯನ ವಾದ, ಸಿರಿಕತನ ಇವತ್ತು ಬೆಳೆಸಿ ಸಮಾಜಕ್ಕೆ

ಪ್ರಯೋಜನವಾಗುವ ಬದಲು ಸಮಾಜಕ್ಕೆ ಘಾತುಕವಾದ ಶಕ್ತಿಗಳನ್ನು ಬೆಳೆಸುವಂತಹದನ್ನು ನಾವು ಇವತ್ತು ಕಾಣುತ್ತಿದ್ದೇವೆ. ನಾನು ಇನ್ನೊಂದು ವಿಷಯವನ್ನು ನಿನ್ನೆ ಸ್ಪಷ್ಟವಾಗಿ ಹೇಳಿದ್ದೇನೆ. "non-committed teachers tackling a mass of unwilling students" ಎಂದು

ವಿದ್ಯೆಯನ್ನು ಪಡೆಯಲಿಕ್ಕೆ ಆಸಕ್ತಿ ಇಲ್ಲದ ವಿದ್ಯಾರ್ಥಿಗಳನ್ನು ಇವತ್ತು ವಿಪರೀತವಾಗಿ ಬೆಳೆಸುತ್ತಿದ್ದೇವೆ. ಅದಕ್ಕೆ ಎರಡು ಮುಖ್ಯವಾದ ಕಾರಣಗಳು ಇವೆ ಒಂದು ಈ ವಿದ್ಯೆಯಲ್ಲಿ ಅವರು ಆಸಕ್ತಿಯನ್ನು ಕಳೆದುಕೊಂಡಿದ್ದಾರೆ. ಅವರಿಗೆ ಒಂದು ಸ್ಪಷ್ಟವಾದ ಅಭಿಪ್ರಾಯ ಬಂದು ಬಿಟ್ಟಿದೆ. ನಾನು ಇವತ್ತು ಓದಿದರೂ ಕೂಡ ಈ ವಿದ್ಯಾಭ್ಯಾಸದಿಂದ ನನಗೆ ವೈಯಕ್ತಿಕವಾಗಿ ಏನೂ ಪ್ರಯೋಜನವಿಲ್ಲ ಎಂದು ಅಂದರೆ the total education is meant for profit motivation for a particular individual. The aim of education has become like that.

12.00 ನೂನ್

ಹಾಗಾಗಿ ಇವತ್ತು ವಿದ್ಯಾರ್ಥಿ ಏನಾಗಿದ್ದಾನೆ ಎಂದರೆ he is not willing to study, but he is prepared to read. ಅವನು ಅಭ್ಯಾಸ ಮಾಡುವುದಕ್ಕೆ ತಯಾರಿಲ್ಲ, ಆದರೆ ಓದುವುದಕ್ಕೆ ತಯಾರಾಗಿದ್ದಾನೆ. ಏತಕ್ಕೆ ಓದು ಓದು ಎನ್ನತಕ್ಕಂಥಾದ್ದು ಬದುಕಿಗೋಸ್ಕರ ಎಂದು ಹೇಳಿ, ಅಷ್ಟೇ ಹೊರತು ಆ ಓದು ಎನ್ನತಕ್ಕಂಥಾದ್ದು ಸಮಾಜಕ್ಕೆ ಅನುಗುಣವಾಗಿರಬೇಕು ಎನ್ನತಕ್ಕಂಥಾದನ್ನು ಅಭ್ಯಾಸ ಮಾಡತಕ್ಕಂಥ ಸ್ಥಿತಿಯಲ್ಲಿ ಅವನು ಇವತ್ತು ಇಲ್ಲ, ಪ್ರಾಮಾಣಿಕವಾದಂಥ ಓದಿನ ಬಗ್ಗೆ ಗಮನ ಕೊಡತಕ್ಕಂಥ ಪರಿಸ್ಥಿತಿಯಲ್ಲಿ ವಿದ್ಯಾರ್ಥಿಗಳು ಇಲ್ಲದೇ ಇರುವುದಕ್ಕೆ ಇವತ್ತು ಇಡೀ ಸಮಾಜದ ಪರಿಸರ, ಆ ಪರಿಸರದಲ್ಲಿ ಇರತಕ್ಕಂಥ ಅಂಶಗಳ ಬಗ್ಗೆ ಗಮನ ಕೊಡತಕ್ಕಂಥ ಸಿಲಬಸ್ ಇಲ್ಲ, ಇದು ಅನ್‌ವಿಲ್ಲಿಂಗ್ ಸ್ಟೂಡೆಂಟ್ಸ್ ಏಕೆ ಅನ್‌ವಿಲೆಂಗ್ ಆಗಿದ್ದಾರೆ, ಅವರು ಏನನ್ನು ಓದುತ್ತಾರೆ ಪುಸ್ತಕದಲ್ಲಿ, ಅವರು ಜೀವನಕ್ಕೆ, ಅವರು ಜೀವನದ ಬದುಕಿನಲ್ಲಿ ಕಾಲಿಟ್ಟಾಗ ಅದಕ್ಕೆ ಯಾವುದೇ ಸಂಬಂಧ ಇಲ್ಲ ಇವತ್ತು ಅಂತಹ ಇರ್ರಿಲೆವೆಂಟ್ ಆದಂತಹ ಪರಿಸ್ಥಿತಿ ಇರತಕ್ಕಂಥ ಸಂದರ್ಭದಲ್ಲಿ ಒಬ್ಬ ವಿದ್ಯಾರ್ಥಿಗೆ ವಿದ್ಯಾಭ್ಯಾಸದಲ್ಲಿ ಆಸಕ್ತಿಯನ್ನು ಹುಟ್ಟಿಸುವಂಥ ಯಾವುದೇ ರೀತಿಯಾದಂಥ ಸಿಲಬಸ್ ಇವತ್ತು ಇಲ್ಲ, ಆದ್ದರಿಂದ ಸರ್ಕಾರ ಮತ್ತು ವಿದ್ಯಾ ಇಲಾಖೆ ಶಿಕ್ಷಣದ ಬಗ್ಗೆ ಕಾರ್ಯಕ್ರಮಗಳನ್ನು ರೂಪಿಸತಕ್ಕಂಥ ಪ್ರೋಗ್ರಾಂ ಹಾಕಿಕೊಳ್ಳುತ್ತೇವೆ ಎಂದು ಹೇಳತಕ್ಕಂಥ ಜನರನ್ನು ನಾನು ಮನವಿ ಮಾಡುತ್ತಿದ್ದೇನೆ, apply your brain because that brain is paralysed. The brain of the society is only education, nothing else. Unless we rectify education, the stroke which gone to the brain cannot be rectified.

ಯಾವುದೇ ಒಂದು ಸಮಾಜಕ್ಕೆ ಇವತ್ತು ವಿದ್ಯೆ ಎಷ್ಟು ಪ್ರಾಮುಖ್ಯತೆ ಇದೆ? ಸನ್ಮಾನ್ಯ ಅಧ್ಯಕ್ಷರೇ, ನಾನು ನಿಮ್ಮಲ್ಲಿ ಮನವಿ ಮಾಡುತ್ತಿದ್ದೇನೆ, ಹಿರಿಯರು ಇದ್ದೀರಿ ನೀವು, ನಾನು ಹೇಳುತ್ತಿದ್ದೇನೆ, LKG, UKG, nursery, you must ban immediately. ಏಕೆ ಎಂದು ನಾನು ಹೇಳುತ್ತೇನೆ, ನಿಮಗೆ ವಿಜ್ಞಾನಿಗಳು ಹೇಳಿದ್ದಾರೆ, ಮನಶಾಸ್ತ್ರಜ್ಞರು ಇವತ್ತು ಸಾಬೀತುಪಡಿಸಿದ್ದಾರೆ. ಆ ಎಳೆಯ ಮಕ್ಕಳು ಏನಿದ್ದಾರೆ. ಅವರ ತಲೆ ಬ್ರೈನ್ ಏನಿದ್ದೆ, ಇದು ವೈಜ್ಞಾನಿಕವಾಗಿ ನಿರೂಪಣೆಯಾಗಿರತಕ್ಕಂಥಾದ್ದು. ಸಣ್ಣ ಎಳೆಯ ಮೆದುಳುಗಳ ಮೇಲೆ ಹೆಚ್ಚಿನ ಭಾರವನ್ನು ಹಾಕಿದರೆ ಆ ಮೆದುಳು ಅಸ್ವಸ್ಥವಾಗುತ್ತದೆ, ಅಸ್ತವ್ಯಸ್ತ ಆಗುತ್ತದೆ. ಇವತ್ತು ಏನಾಗಿದೆ ಪರಿಸ್ಥಿತಿ. ಇವತ್ತು ಸಂಸ್ಕೃತಿ, ನಾಗರೀಕತೆ, ಬದಲಾವಣೆಯ ಹೆಸರಿನಲ್ಲಿ ಒಂದು ವರ್ಷ, ಎರಡು ವರ್ಷದ ಮಕ್ಕಳನ್ನು ನರ್ಸರಿ ಸ್ಕೂಲ್, ಎಲ್.ಕೆ.ಜಿ, ಯು.ಕೆ.ಜಿ. ಗೆ ಕರೆದುಕೊಂಡು ಹೋಗಿ ಅವರ ತಲೆ

ಮೇಲೆ ಇಷ್ಟು ಪುಸ್ತಕ ಹಾಕಿ ಅದನ್ನೆಲ್ಲಾ ಬರೆದು, ಅಲ್ಲಿ ಅವರು ಬರೆಯುವುದು ಸಾಕಾಗದೇ, ಮನೆಗೆ ಕಳುಹಿಸಿ ತಂದೆತಾಯಿಗಳಿಬ್ಬರೂ ಕುಳಿತುಕೊಂಡು ಹೋಂವರ್ಕ್ ಮಾಡಿದರೂ ಕೂಡ ಮುಗಿಯದಷ್ಟು ಕೆಲಸ ಕೊಟ್ಟಿರುತ್ತಾರೆ ಆ ಸಣ್ಣ ಮಕ್ಕಳಿಗೆ ವಿಜ್ಞಾನ ಮನಶಾಸ್ತ್ರಜ್ಞರು ಏನು ಪ್ರತಿಪಾದನೆ ಮಾಡಿದ್ದಾರೆ ಎಂದು ನಾನು ವಿವರಿಸಿ ಹೇಳಬೇಕಾಗಿಲ್ಲ. ಹಿಂದಿನ ಕಾಲದಲ್ಲಿ ಶಾಲೆ ಅಡ್ಮಿಷನ್‌ಗೆ ಏಕೆ ಐದು ವರ್ಷದ ತನಕ ಲಿಮಿಟೇಷನ್ ಇತ್ತು ಎನ್ನುವುದನ್ನು ನಾವು ಆಲೋಚನೆ ಮಾಡಬೇಕು. ಇದನ್ನು ಹಿಂದಿನ ಹಿರಿಯರು ಮಾಡಿದ್ದರು, ಅಂದರೆ ಆ ವಯಸ್ಸು ಆಗುವವರೆಗೂ ಕೂಡ ಆ ಮೆದುಳಿಗೆ ಯಾವುದೇ ಹೆಚ್ಚಿನ ಒತ್ತಡವನ್ನು ತಡೆಯತಕ್ಕಂಥ ಶಕ್ತಿ ಇರುವುದಿಲ್ಲ. ಅದರ ಮೇಲೆ ಹೆಚ್ಚಿನ ಒತ್ತಡ ಹಾಕಿದರೆ ಆ ಮೆದುಳು ಪರಿಪಕ್ವವಾಗಿ ಬೆಳಿಯುವುದಕ್ಕೆ ಸಾಧ್ಯವಿಲ್ಲ. ಪರಿಪಕ್ವವಾಗಿ ಬೆಳೆಯದಂತಹ ಮೆದುಳು ಯಾವತ್ತು ಆರೋಗ್ಯಕರವಾಗಿ ಇರುವುದಕ್ಕೆ ಸಾಧ್ಯವಿಲ್ಲ. ಅದಕ್ಕೋಸ್ಕರ ಐದು ವರ್ಷದ ಮಿತಿಯನ್ನು ಹಾಕಿದ್ದರು. ಆದರೆ ಇವತ್ತು ಏನಾಗಿದೆಯೆಂದರೆ ನಾಗರೀಕತೆಯ ಹೆಸರಿನಲ್ಲಿ ಹೊಸತನದ ಹೆಸರಿನಲ್ಲಿ ಆ ಎಳೆಯ ಕಂದಮ್ಮಗಳನ್ನು ಕರೆದುಕೊಂಡು ಹೋಗಿ ಆ ನರ್ಸರಿ, ಎಲ್‌ಕೆಜಿ, ಯುಕೆಜಿ ಎಂದು ಹಾಕಿ ಅವುಗಳಿಗೆ ಏನೂ ವ್ಯವಸ್ಥೆ ಇಲ್ಲದೆ ಇರತಕ್ಕಂಥ ಸಂದರ್ಭದಲ್ಲಿ ಆ ಮಕ್ಕಳ ಮೆದುಳಿಗೆ ಕೆಲಸ ಕೊಡತಕ್ಕಂಥ ಪಾಪದ ಕೆಲಸವನ್ನು ನಾವು ಇವತ್ತು ಮಾಡುತ್ತಿದ್ದೇವೆ. ಅದರ ಪರಿಣಾಮ ಇವತ್ತು ನಾವು ನೋಡುತ್ತಿದ್ದೇವೆ.

ನೀವು ಮಕ್ಕಳನ್ನು ಕಾನ್ವೆಂಟ್ ಸ್ಕೂಲ್‌ಗಳಲ್ಲಿ ಸೇರಿಸುತ್ತೀರಿ, ಇಂಗ್ಲೀಷ್ ಸ್ಕೂಲ್‌ಗಳಲ್ಲಿ ಇವತ್ತು ಏನಾಗಿದ್ದಾರೆ ಆ ಮಕ್ಕಳು. ಅವರು ಯಾವ ದಿಕ್ಕಿನಲ್ಲಿ ಆಲೋಚನೆ ಮಾಡುತ್ತಿದ್ದಾರೆ, ಅವರ ಮೆದುಳಿಗೆ ಏನು ಕೊಟ್ಟಿದ್ದೇವೆ. ಎಷ್ಟು ಒತ್ತಡ ಹಾಕಿದ್ದೇವೆ ಎನ್ನುವುದನ್ನು ಗಮನಿಸಬೇಕು. ಇದಕ್ಕೆ ತಜ್ಞರನ್ನು ನೇಮಿಸಿ ಆ ಎಲ್‌ಕೆಜಿ, ಯುಕೆಜಿ, ನರ್ಸರಿಯನ್ನು ತಕ್ಷಣ ನಿಷೇಧ ಮಾಡಬೇಕು, ಅನ್ನುವುದು ನನ್ನ ಸ್ಪಷ್ಟ ಅಭಿಪ್ರಾಯ. ಇದು ಒಂದು ಕಡೆಯಾದರೆ ಇನ್ನೊಂದು ಕಡೆ ಪ್ರಾಥಮಿಕ ಶಿಕ್ಷಣ ಎನ್ನತಕ್ಕಂಥಾದ್ದು, ಇಡೀ ಸಮಾಜದ ಒಟ್ಟು ವಿದ್ಯಾಭ್ಯಾಸಕ್ಕೆ ಅಡಿಪಾಯ. ಆ ಪ್ರಾಥಮಿಕ ಶಿಕ್ಷಣದ ಬಗ್ಗೆ ನಮ್ಮಲ್ಲಿರತಕ್ಕಂಥ ಕಲ್ಪನೆ ಇದು. ನಾನು ಪ್ರಾಥಮಿಕ ಶಿಕ್ಷಣದ ಕಂಟೆಂಟ್ ಬಗ್ಗೆ ಆಗಲೇ ಹೇಳಿದ್ದೇನೆ. ಮತ್ತೇ ನಾನು ಅದನ್ನು ಹೇಳುವುದಿಲ್ಲ. ಅದರ ವ್ಯವಸ್ಥೆ ಏನು ಇವತ್ತು? ಇಲ್ಲಿ ಇವತ್ತು ನಿಮ್ಮ ಅಂಕಿ ಅಂಶಗಳು ಹೇಳುತ್ತವೆ. ಶಾಲೆಗೆ ಎಷ್ಟು ಮಕ್ಕಳು ಸೇರುತ್ತಾರೆ, ಎಷ್ಟು ಜನ ಬಿಡುತ್ತಾರೆ ಎಂದು. 50 ಪರ್ಸೆಂಟ್ ಎಬೌವ್ ಡ್ರಾಪ್‌ಔಟ್ ಎನ್ನುವ ಲೆಕ್ಕ ನೀವು ಹೇಳಿದ್ದೀರಿ,

1992-93ರಲ್ಲಿ 26.49, 1993-94ರಲ್ಲಿ 27.76, 1994ರಲ್ಲಿ 27.86 ಅದೇ 5 ರಿಂದ ಏಳನೆ ಕ್ಲಾಸಿಗೆ ಹೋಗತಕ್ಕಂಥ ಸಂದರ್ಭ ಬಂದಾಗ 26 ಇದ್ದದ್ದು 12.35 ಪರ್ಸೆಂಟ್ ಆಗುತ್ತದೆ. 27 ಇದ್ದದ್ದು 13.65 ಆಗುತ್ತದೆ, 27 ಇದ್ದದ್ದು ಇಲ್ಲಿಗೆ ಬರುವಾಗ 13.34 ಆಗುತ್ತದೆ. ಏಕೆ ಈ ಡ್ರಾಪ್ ಔಟ್ಸ್. ಹಾಗಾದರೆ ಈ ಪ್ರಾಥಿಮಿಕ ಶಿಕ್ಷಣದ ಗುರಿ ಏನು? ಈ ಪ್ರಾಥಮಿಕ ಶಿಕ್ಷಣದಲ್ಲಿ ಏಕೆ ಡ್ರಾಪ್‌ಔಟ್ಸ್ ಆಗುತ್ತದೆ ಎಂದು ಹೇಳಿದರೆ, ಪ್ರಾಥಮಿಕ ಶಿಕ್ಷಣದ ವ್ಯವಸ್ಥೆಯೇ ಸರಿಯಿಲ್ಲ, ನೀವು ಯಾವುದೇ ಹಳ್ಳಿಗೆ ಹೋದರೆ ಅಲ್ಲಿ ಇರತಕ್ಕ ಸ್ಕೂಲ್ ಕಟ್ಟಡವನ್ನು ನೋಡಬೇಕು. ಸ್ವಾಮಿ, ನೀವು ಇವತ್ತು ಹೋಗಿ ಆ ಸ್ಕೂಲ್ ಕಟ್ಟಡಗಳನ್ನು ಅಲ್ಲಿ ನೋಡಬೇಕು, ಆ ಹಳ್ಳಿಗಳಲ್ಲಿ ಇರತಕ್ಕಂಥ ಸ್ಕೂಲ್ ಕಟ್ಟಡಗಳಲ್ಲಿ ದನ, ಎಮ್ಮೆಗಳನ್ನು ಕಟ್ಟಿಹಾಕುತ್ತಾರೆ, ರೇಷ್ಮೆ ಬೆಳೆಸುತ್ತಾರೆ. ಅದು ಯಾವುದೇ ಮಕ್ಕಳು ಹೋಗಿ ಅಲ್ಲಿ ಕುಳಿತುಕೊಳ್ಳುವಂತಹ ಪರಿಸ್ಥಿತಿಯಲ್ಲಿ ಇಲ್ಲ. ಆ ಕಟ್ಟಡಗಳನ್ನು ನೀವು ನಿರ್ವಹಣೆ ಮಾಡತಕ್ಕಂಥದ್ದಕ್ಕೆ ಯಾವುದೇ ರೀತಿಯಾದಂತಹ ವ್ಯವಸ್ಥೆ ಇಲ್ಲ. ಎರಡನೆಯದು ಸ್ಕೂಲ್ ಬಿಲ್ಡಿಂಗ್ ಇದ್ದರೆ, ಮೇಸ್ಟರು ಇರುವುದಿಲ್ಲ. ಮೇಸ್ಟರು ಇದ್ದರೆ ಬಿಲ್ಡಿಂಗ್ ಇಲ್ಲ. ಮೇಸ್ಟರು,

ಬಿಲ್ಡಿಂಗ್ ಇದ್ದರೆ ಅಲ್ಲಿಗೆ ಮಕ್ಕಳು ಬರುವುದಿಲ್ಲ. ಈ ತರಹದ ವ್ಯವಸ್ಥೆ ಇದೆ. ಇವತ್ತು ಪ್ರಾಥಮಿಕ ಶಿಕ್ಷಣಕ್ಕೆ ವಿದ್ಯಾಭ್ಯಾಸವನ್ನು ಕೊಡುವುದಕ್ಕೆ ನೀವು ಟಿಸಿಹೆಚ್ ಟ್ರೈನಿಂಗ್ ಸ್ಕೂಲ್‌ಗಳನ್ನು ಮಾಡಿದ್ದೀರಿ. ನಮಗೆ ಸರ್ಕಾರ ಕೊಟ್ಟಿರತಕ್ಕಂಥ ಅಂಕಿ ಅಂಶಗಳ ಪ್ರಕಾರವೇ ಒಂದು ಲಕ್ಷ ಜನ ಟಿಸಿಹೆಚ್ ಪಡೆದಿರತಕ್ಕಂಥ ವಿದ್ಯಾರ್ಥಿಗಳು ನಿರುದ್ಯೋಗಿಗಳಾಗಿ ಈ ರಾಜ್ಯದಲ್ಲಿ ಇದ್ದಾರೆ. ಅವರಿಗೆ ಕೆಲಸ ಇಲ್ಲ. ಇನ್ನೊಂದು ಕಡೆ ವಿಚಿತ್ರವಾದಂತಹ ವಾದ ನಿಮ್ಮದು ಏನಿದೆ ಎಂದರೆ ಕರ್ನಾಟಕ ರಾಜ್ಯದಲ್ಲಿ ಶೇಕಡ 50ರಷ್ಟು ಶಾಲೆಗಳಿಗೆ ಉಪಾಧ್ಯಾಯರ ಕೊರತೆ ಇದೆ. ಇದು ಎಷ್ಟು ವಿಪರ್ಯಾಸ ಎನ್ನುವುದನ್ನು ಸರ್ಕಾರ ಗಮನಿಸಬೇಕಾಗುತ್ತದೆ. ಏಕೆ ಈ ವಿಪರ್ಯಾಸ? ಈ ವಿಪರ್ಯಾಸ ಇರತಕ್ಕಂಥಾದ್ದು ಏಕೆಂದರೆ the government has no plan.

ಅದಕ್ಕೆ ಪರ್ಸ್ಪೆಕ್ಟಿವ್ ಪ್ಲಾನ್ ಇಲ್ಲ. ಅಂದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಒಂದು ವರ್ಷಕ್ಕೆ ಎಷ್ಟು ಜನ ಶಿಕ್ಷಕರು ಇದ್ದಾರೆ, ಎಷ್ಟು ಜನ ನಿವೃತ್ತಿಯಾಗುತ್ತಾರೆ, ಎಷ್ಟು ಶಾಲೆಗಳನ್ನು ಪ್ರಾರಂಭ ಮಾಡುತ್ತೇವೆ, ಆ ಶಾಲೆಗಳಿಗೆ ಎಷ್ಟು ಜನ ಉಪಾಧ್ಯಾಯರು ಬೇಕಾಗಿದೆ ಎಂದು ಯೋಜನೆ ನಿಮ್ಮ ಹತ್ತಿರ ಇಲ್ಲ. you are just producing like goods ina factory. ಫ್ಯಾಕ್ಟರಿಯಲ್ಲಿ ಗೂಡ್ಸ್‌ನ್ನು ತಯಾರುಮಾಡುವ ರೀತಿಯಲ್ಲಿ ಟೀಚರ್ಸ್‌ನ್ನು ನೀವು ತಯಾರು ಮಾಡುತ್ತಿದ್ದೀರಿ. ತಯಾರು ಮಾಡಿ, ಸಂತೋಷ ನಮಗೆ ಅದರಲ್ಲಿ ಅಬ್ಜೆಕ್ಷನ್ ಏನೂ ಇಲ್ಲ. ಆದರೆ ಆ ತಯಾರು ಮಾಡಿದಂತಹ ಟೀಚರ್ಸ್ ಅನ್ನು ನೀವು ಉಪಯೋಗ ಮಾಡುತ್ತಿದ್ದೀರೋ? ಇಲ್ಲ ಅದರ ಬದಲು ಏನಾಗಿದೆ ಎಂದರೆ ಇವತ್ತು ನಿರುದ್ಯೋಗಿ ಶಿಕ್ಷಕರಾಗಿದ್ದಾರೆ. ನಿನ್ನೆ ಮಾನ್ಯ ಪುಟ್ಟಣ್ಣಯ್ಯನವರು ಹೇಳುತ್ತಿದ್ದರು, ಅಪ್ಪ, ಮಗ, ಮೊಮ್ಮಗ, ಮೂರು ಜನ ಕೂಡ ಇವತ್ತು ಇಂಟರ್‌ವ್ಯೂಗೆ ಹಾಕಿಕೊಂಡಿದ್ದಾರೆ. ಆ ಪರಿಸ್ಥಿತಿಯನ್ನು ಇವತ್ತು ತಂದು ಇಟ್ಟಿದ್ದೀರಿ, ಏಕೆ ಆ ಪರಿಸ್ಥಿತಿಯನ್ನು ತಂದಿಟ್ಟಿರತಕ್ಕಂಥಾದ್ದು. ನಿಮಗೆ ಒಂದು ನಿರ್ದಿಷ್ಟವಾದಂತಹ ಯೋಜನೆ ಇಲ್ಲ. ಒಂದು ವರ್ಷಕ್ಕ ಎಷ್ಟು ಟೀಚರ್ಸ್ ಬೇಕು. ಎಷ್ಟು ಟಿಸಿಹೆಚ್ ಕಾಲೇಜುಗಳು ಬೇಕು? ಎಷ್ಟು ವಿದ್ಯಾರ್ಥಿಗಳು ಇದ್ದಾರೆ, ಎಷ್ಟು ಶಾಲೆಗಳನ್ನು ತೆಗೆಯುತ್ತಿದ್ದೇವೆ. ಅದಕ್ಕೆ ಅವಶ್ಯಕವಾಗಿರತಕ್ಕಂಥ ಉಪಾಧ್ಯಾಯರು ಎಷ್ಟು ಎಂಬ ಯೋಜನೆ ನಿಮ್ಮ ಹತ್ತಿರ ಇಲ್ಲ. ಸನ್ಮಾನ್ಯ ಅಧ್ಯಕ್ಷರೆ, ಆ ಶಾಲೆಗಳನ್ನು ನೀವು ಮೇನೇಜ್ ಮಾಡತಕ್ಕಂಥಾದ್ದು, ಮಿಡ್ಲ್ ಸ್ಕೂಲ್‌ಗೆ ಒಬ್ಬ ಪ್ಯೂನ್ ಇಲ್ಲ. ಎಲ್ಲಾ ಸ್ಕೂಲ್‌ಗಳಲ್ಲಿ ಹೆಡ್ ಮಾಸ್ಟರ್, ಮಾಸ್ಟರ್ ಅವರೇ ಪ್ಯೂನ್ ಕೆಲಸ ಮಾಡಬೇಕು. ಬೀಗ ತೆಗೆಯುವವರು ಇಲ್ಲ, ಬೀಗ ಹಾಕುವವರು ಇಲ್ಲ. ಬೀಗ ಹಾಕುವುದಿಲ್ಲ, ರಾತ್ರಿ ಹಳ್ಳಿಗಳಲ್ಲಿ ಇರತಕ್ಕಂಥ ಶಾಲೆಗಳಲ್ಲಿ, ಪಟ್ಟಣಗಳಲ್ಲಿ ಇರತಕ್ಕಂಥ ಶಾಲೆಗಳಲ್ಲಿ ಏನೇನೋ ನಡೆಯುತ್ತಿರುತ್ತದೆ. ನೀವು ಬೆಳಿಗ್ಗೆ ಹೋಗಿ ನೋಡಬೇಕು, ಸನ್ಮಾನ್ಯ ಉಪಾಧ್ಯಕ್ಷರೆ, ನನ್ನ ಕ್ಷೇತ್ರವಾದ ಬಾಗೇಪಲ್ಲಿಯಲ್ಲಿ ಮೇಸ್ಟರುಗಳೆಲ್ಲಾ ಬೆಳಿಗ್ಗೆ ಬಂದು ಟೌನ್‌ನಲ್ಲಿ ಇರತಕ್ಕಂಥ ಶಾಲೆಗೆ ನನ್ನನ್ನು ಕರೆದುಕೊಂಡು ಹೋದರು, ನಾವು ನೋಡಿದರೆ ಆಶ್ಚರ್ಯ ಏನು ಗೊತ್ತಾ ಸ್ಕೂಲ್ ಬಿಲ್ಡಿಂಗ್‌ನಲ್ಲಿ ಇಸ್ಪೀಟ್ ಎಲೆಗಳು. ವಿಸ್ಕಿ ಬಾಟಲ್, ಇವೆಲ್ಲಾವೂ ಬಿಟ್ಟು ನಿರೋಧ. ಇವು ಸ್ಕೂಲ್ ರೂಂಗಳಲ್ಲಿ ಇರುತ್ತದೆ.

ಏನಾಗಿದೆ ನಮಗೆ ಇವತ್ತು. ನಾವು ವಿದ್ಯಾಭ್ಯಾಸ ಕೊಡುತ್ತಿರತಕ್ಕಂಥಾದ್ದು ಇದೇ ಏನು? ಅದರ ಜೊತೆಗೆ ಟೀಚರ್ಸ್, ನಾನು ನಿನ್ನೆ ಹೇಳಿದೆ, ನಾನ್ ಕಮಿಟೆಡ್ ಟೀಚರ್ಸ್ ಎಂದು ಹೇಳಿ. They are not committed, but they are trying to get salary. They have no basic commitment because it has become a business. The most lucrative business today is, education without capital. ಹಾಗಾಗಿ ಇವತ್ತು ಅವರಿಗೆ ಕಮಿಟ್‌ಮೆಂಟ್ ಇಲ್ಲ. ಅದರ ಜೊತೆಗೆ ಅವರ ವ್ಯವಸ್ಥೆಗಳು ಏನು

ಸ್ವಾಮಿ? ಇವತ್ತು ನೀವು ಒಬ್ಬ ಐಎಎಸ್ ಅಧಿಕಾರಿಗೆ ಒಂದು ತಿಂಗಳಿಗೆ ಕನಿಷ್ಠ ಎಂದರೆ ಸರ್ಕಾರ ಕೊಡತಕ್ಕಂಥ ಲೆಕ್ಕದ ಪ್ರಕಾರವೇ, 15 ರಿಂದ 20 ಸಾವಿರ ರೂಪಾಯಿ ಖರ್ಚು ಮಾಡುತ್ತೀರಿ. ಆದರೆ ಅಧಿಕಾರಿಯನ್ನು ತಯಾರು ಮಾಡಿದಂತಹ ಒಬ್ಬ ಉಪಾಧ್ಯಾಯರಿಗೆ ನೀವು ಕೊಡುತ್ತಿರತಕ್ಕಂಥ ಸಂಬಳ ಎಷ್ಟು? ಪ್ರೈಮರಿ ಉಪಾಧ್ಯಯರಿಗೆ ಕೊಡತಕ್ಕಂಥ ಸಂಬಳ ಬೇಸಿಕ್‌ಸ್ಯಾಲರಿ 1450 ರೂಪಾಯಿಗಳು. ಹೈಸ್ಕೂಲ್ ಉಪಾಧ್ಯಾಯರಿಗೆ ಎಷ್ಟು ಸಂಬಳ ಕೊಡುತ್ತೀರಿ ನೀವು? ನಿಮ್ಮ ಐಎಎಸ್ ಅಧಿಕಾರಿಗಳಿಗೆ ಎಷ್ಟು ಅಧಿಕಾರ ಕೊಡುತ್ತೀರಿ ನೀವು? ಟೆಕ್ನೊಕ್ರಾಟ್ಸ್‌ಗೆ ಎಷ್ಟು ಸಂಬಳ ಕೊಡುತ್ತೀರಿ ನೀವು? ಅವರಿಗೆ ಏನೇನು ಸವಲತ್ತುಗಳನ್ನು ಕೊಡುತ್ತಿದ್ದೀರಿ ನೀವು. ಆದರೆ ಈ ದೇಶದ ಪ್ರಾಥಮಿಕ ಮೆದುಳುಗಳನ್ನು ಸೃಷ್ಟಿ ಮಾಡತಕ್ಕಂಥ ಆ ಉಪಾಧ್ಯಾಯರ ಬಗ್ಗೆ ನಿಮಗಿರತಕ್ಕಂಥ ದೃಷ್ಟಿ ಏನು? ಹಾಗಾಗಿ ಇವತ್ತು ಏನಾಗಿದೆಯೆಂದರೆ ಅವರು ಇವತ್ತು ಉಪಾಧ್ಯಾಯರಾಗಿ ಮಾತ್ರವೇ ಉಳಿದಿಲ್ಲ. ಇದು ಸೆಪ್ಟೆಂಬರ್ ತಿಂಗಳು. ಸೆಪ್ಟೆಂಬರ್ 5ನೇ ತಾರೀಖು, ಡಾ॥ ಸರ್ವೆಪಲ್ಲಿ ರಾಧಾಕೃಷ್ಣನ್ ಅವರು a great teacher of this country; we are celebrating his birthday as teacher's day throughout the country. What our great teacher told us? Unless and untill a teacher remains as a teacher, he cannot teach. But, unfortunately, no teacher remains as a teacher. No teacher remains purely as a teacher. Except teaching he is doing all sorts of things.

ಸನ್ಮಾನ್ಯ ಸಭಾಧ್ಯಕ್ಷರೇ, ಇವತ್ತು ಉಪಾಧ್ಯಾಯರು ಆ ಸ್ಥಿತಿಗೆ ಏಕೆ ಬಂದಿದ್ದಾರೆ? ಅದಕ್ಕೆ ನಾವು ಕೂಡ ಕಾರಣರಾಗುತ್ತೇವೆ. ವರ್ಗಾವರ್ಗಿ ಬಗ್ಗೆ ಸಾಕಷ್ಟು ಮಾತನಾಡಿದ್ದೇವೆ. ಕೆಲವು ಅಧಿಕಾರಿಗಳ ಬಗ್ಗೆ ನೀವು ತನಿಖೆ ನಡೆಸುತ್ತಿದ್ದೀರಿ. ತನಿಖೆ ಬೇಡ ಎಂದು ನಾನು ಹೇಳುವುದಿಲ್ಲ. ಆ ಅಧಿಕಾರಿಗಳನ್ನು ತಪ್ಪುದಾರಿಗೆ ಹಿಡಿಸಿದವರು ಯಾರು? ನಾವು. ಈ ಮಾಸ್ತರನನ್ನು ಇಲ್ಲಿಂದ ಟ್ರಾನ್ಸಫರ್ ಮಾಡಿ ಅಲ್ಲಿ ಹಾಕಿ. ಅಲ್ಲಿ ಹಾಕಿ ಒಂದು ತಿಂಗಳಾದ ಮೇಲೆ ಅಲ್ಲಿ ಬೇಡ, ಇಲ್ಲಿ ಹಾಕಿ ಎಂದು ಹೇಳುವುದು. ಮತ್ತೆ ಇಲ್ಲಿಂದ ಅಲ್ಲಿ ತೆಗೆದುಹಾಕಿ. ಮತ್ತೆ ಅಲ್ಲಿ ಬೇಡ, ಇವನು ನನಗೆ ಏನೋ ವಿರೋಧ ಮಾಡಿದ್ದಾನೆ, ಆದ್ದರಿಂದ ಇವನನ್ನು ಇಲ್ಲಿ ಹಾಕಿ. ಇದೆಲ್ಲವನ್ನೂ ಸೃಷ್ಟಿಮಾಡಿ ಇವತ್ತಿನದಿವಸ ಉಪಾಧ್ಯಾಯರನ್ನು ಉಪಾಧ್ಯಾಯರನ್ನಾಗಿ ಉಳಿಸಿಕೊಳ್ಳುವುದಕ್ಕೆ ನಮಗೆ ಸಾಧ್ಯವಾಗಿಲ್ಲ. They never have a commitment and they do not have a commitment at all. That is the question.

ಆದ್ದರಿಂದ ಇವತ್ತು ಮೂಲತಃ ಪ್ರಾಥಮಿಕ ಶಿಕ್ಷಣವನ್ನು ಸರಿಪಡಿಸಬೇಕಾದರೆ The Government should have a perspective planning, other wise it cannot be setright. ಅದನ್ನು ಸೆಟ್‌ರೈಟ್ ಮಾಡಬೇಕಾದರೆ ನಾನು ಸರ್ಕಾರಕ್ಕೆ ಸಲಹೆ ಮಾಡತಕ್ಕದ್ದು ಏನೆಂದರೆ, ಉಪಾಧ್ಯಾಯರ ಸ್ಥಿತಿಗತಿಗಳನ್ನು ಉತ್ತಮಪಡಿಸುವುದಕ್ಕೆ ನೀವು ಒಂದು ನಿರ್ದಿಷ್ಟವಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಹಾಗೆಯೇ ಪ್ರತಿಯೊಂದು ಪ್ರಾಥಮಿಕಶಾಲೆಗೆ ಉಪಾಧ್ಯಾಯರು ಕಡ್ಡಾಯವಾಗಿ ಇರಬೇಕು, ಇದರ ಜೊತೆಗೆ ಆ ಉಪಾಧ್ಯಾಯರು ಕಡ್ಡಾಯವಾಗಿ ಆ ಹಳ್ಳಿಯಲ್ಲೇ ಇರಬೇಕು. ಅವರಿಗೆ ಇರಲಿಕ್ಕೆ ವ್ಯವಸ್ಥೆ ಎಂದರೆ ಮನೆ ಅಥವಾ ಕ್ವಾಟರ್ಸ್‌ನ್ನು ನಿರ್ಮಾಣ ಮಾಡಿಕೊಡಬೇಕು. ಪ್ರತಿಯೊಂದು ಏಳು ಸೆಕ್ಷನ್‌ಗಳು ಇರತಕ್ಕಂಥ ಶಾಲೆಗೆ ಕಡ್ಡಾಯವಾಗಿ ಒಬ್ಬರು ದೈಹಿಕ ಶಿಕ್ಷಣ ಮತ್ತು ಪೀವನ್ ಕಡ್ಡಾಯವಾಗಿ ಇರಬೇಕು. ದೈಹಿಕ ಶಿಕ್ಷಕರ ಬಗ್ಗೆ ನನ್ನ ಮಿತ್ರರು ನಿನ್ನೆ ಮಾತನಾಡುವಾಗ ಬಹಳ ಚೆನ್ನಾಗಿ ಹೇಳಿದ್ದಾರೆ. ಅದು ಇಲ್ಲದಿದ್ದರೆ ಈ ದೇಶದಲ್ಲಿ ಏನೂ ನಡೆಯುವುದಿಲ್ಲ. ಎಲ್.ಕೆ.ಜಿ., ಯು.ಕೆ.ಜಿ.ಯನ್ನು ಬ್ಯಾನ್ ಮಾಡಿ ಸಣ್ಣಮಕ್ಕಳ ಬೌದ್ಧಿಕ ಬೆಳವಣಿಗೆಗೆ ಏನಾದರೂ ಕಾರ್ಯಕ್ರಮವನ್ನು

ಮಾಡಿ. ಅವರ ತಲೆಮೇಲೆ ಹೆಚ್ಚು ಭಾರವನ್ನು ಹೊರುವ ಬದಲು ಇದನ್ನು ಮೊದಲು ಮಾಡಿ. ಅವರ ಶರೀರವನ್ನು ಉತ್ತಮಪಡಿಸಲಿಕ್ಕೆ ಕಾರ್ಯಕ್ರಮ ಹಾಕಿಕೊಳ್ಳಿ. ಏಕೆಂದರೆ ಕ್ರೀಡೆಗಳ ಬಗ್ಗೆ ನಮ್ಮಲ್ಲಿ ಒಂದು ಕಾರ್ಯಕ್ರಮ ಇಲ್ಲ. ಇದರ ಬಗ್ಗೆ ನಿನ್ನ ಮಿತ್ರರು ಮಾತನಾಡಿದ್ದಾರೆ ಮತ್ತು ನಾನು ಪುನಃ ಮಾತನಾಡುವುದಕ್ಕೆ ಹೋಗುವುದಿಲ್ಲ. ಆದ್ದರಿಂದ ಪ್ರಾಥಮಿಕ ಶಿಕ್ಷಣವನ್ನು ನೀವು ಪರಿಣಾಮಕಾರಿಗೊಳಿಸಬೇಕಾದರೆ ಒಂದು ವೈಜ್ಞಾನಿಕವಾದಂಥ ದೃಷ್ಟಿ ಇರಬೇಕು. ಸಿಲಬಸ್ ಬಗ್ಗೆ, ಉಪಾಧ್ಯಾಯರ ಬಗ್ಗೆ, ಶಾಲೆಗಳ ಬಗ್ಗೆ ಮತ್ತು ಬಿಲ್ಡಿಂಗ್ಸ್ ಪ್ರತಿಯೊಂದರ ಬಗ್ಗೆ ಒಂದು ನಿರ್ಧಿಷ್ಟವಾದಂಥ ಚಿಂತನೆಯನ್ನು ನೀವು ಪ್ರಾಥಮಿಕ ಶಿಕ್ಷಣವನ್ನು ಸರಿಪಡಿಸುವುದಕ್ಕೆ ಮಾಡಿಲ್ಲ. ಇನ್ನು ಪ್ರಾಥಮಿಕ ಶಿಕ್ಷಣಕ್ಕೆ ಎಷ್ಟು ಖರ್ಚು ಮಾಡುತ್ತಿದ್ದೀರಿ? 1500 ಕೋಟಿ ರೂಪಾಯಿಗಳು ಪ್ರಾಥಮಿಕ ಶಿಕ್ಷಣಕ್ಕಾಗಿ ಖರ್ಚಾಗುತ್ತಿದೆ. ಒಟ್ಟು ಶಿಕ್ಷಣಕ್ಕೆ ಎಷ್ಟು ಖರ್ಚು ಮಾಡುತ್ತಿದ್ದೀರಿ? ಪ್ರಾಥಮಿಕ ಮತ್ತು ಹೈಯರ್ ಸೆಕೆಂಡರಿ ಶಿಕ್ಷಣ ಸೇರಿ ಒಟ್ಟು1746 ಕೋಟಿ ರೂಪಾಯಿಗಳು. ಇಷ್ಟು ಹಣ ಬಜೆಟ್‌ನಲ್ಲಿದೆ. ಆದರೆ ಇವತ್ತು ನಿಮ್ಮ ದೃಷ್ಟಿ ಏನಾಗಿದೆ ಎಂದರೆ, ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡತಕ್ಕಂಥಾದ್ದು ಇದು ನಾನ್‌ಪ್ರೊಡಕ್ಟೀವ್, ಅನ್‌ಪ್ರೊಡಕ್ಟಿವ್ ಎನ್ನತಕ್ಕಂಥಾದ್ದು ನಿಮ್ಮ ತಲೆಯಲ್ಲಿ ಬಂದಿದೆ. ಆದರೆ ನೀವು ಒಂದು ಆಲೋಚನೆ ಮಾಡಬೇಕು. ವಿದ್ಯೆಯನ್ನು ಕೊಡದೇ ಇರತಕ್ಕಂಥ ಸಮಾಜ ಯಾವುದೇ ರೀತಿಯಲ್ಲಿ ಅಭಿವೃದ್ಧಿಯಾಗುವುದಿಲ್ಲ. ಮತ್ತು ಅದರ ಲಾಭವನ್ನು ಪಡೆಯುವುದಕ್ಕೆ ಸಾಧ್ಯವೂ ಇಲ್ಲ. ಯಾವುದೇ ದೇಶ ಮೂಲತಃ ಅಭಿವೃದ್ಧಿಯಾಗಬೇಕಾದರೆ education is a fundamental criteria.

ವಿದ್ಯಾಭ್ಯಾಸ ಇದ್ದರೇ ದೇಶಕ್ಕೆ ಉತ್ಪಾದನೆಯಾಗತಕ್ಕಂಥಾದ್ದು ಮತ್ತು ಲಾಭ ಬರತಕ್ಕಂಥಾದ್ದು. ಸೈಂಟಿಸ್ಟ್‌ಗಳು ಇಲ್ಲದಿದ್ದರೆ ನಿಮಗೆ ಲಾಭ ಬರುತ್ತದೆಯೇ ಟೆಕ್ನೋಕ್ರಾಟ್ಸ್ ಇಲ್ಲದಿದ್ದರೆ ನಿಮಗೆ ಲಾಭ ಬರುತ್ತದೆಯೇನು? ಇವರನ್ನೆಲ್ಲಾ ತಯಾರು ಮಾಡುವುದು ಈ ವಿದ್ಯಾಭ್ಯಾಸ ಅಲ್ಲವೇನು? ಅನ್‌ಪ್ರೊಡಕ್ಟೀವ್ ಎಂದು ತಿಳಿದುಕೊಂಡು ಅದನ್ನು ಖಾಸಗೀಕರಣ ಮಾಡಿಬಿಡಿ, ಸರ್ಕಾರ ನಷ್ಟ ಅನುಭವಿಸುತ್ತಿದೆ, ನಾವು ವಿದ್ಯಾಭ್ಯಾಸ ಕೊಡುವುದು ಬೇಡ ಎಂದು ಮಾಡಿಬಿಡಿ. ಇದು ಬದಲಾವಣೆಯಾಗಬೇಕು. ಈ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯವಾಗಿ, ಉಚಿತವಾಗಿ, ವೈಜ್ಞಾನಿಕವಾಗಿ, ಸರಿಯಾದ ದೃಷ್ಟಿಯಲ್ಲಿ ನಾವು ಸರಿಪಡಿಸದೇ ಹೋದರೆ ವಿದ್ಯಾಭ್ಯಾಸವನ್ನು ನಾವು ಖಂಡಿತವಾಗಿಯೂ ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇನ್ನು, ಉನ್ನತ ಶಿಕ್ಷಣದ ಬಗ್ಗೆ ಸಂಪೂರ್ಣವಾಗಿ ನಿಮಗೆ ಕಾಳಜಿ ಇಲ್ಲ. ಇದರಲ್ಲಿ ಬರುವಂಥ ಸಿಲಬಸ್, ವಿವರಗಳಿಗೆ ನಾನು ಹೋಗುವುದಿಲ್ಲ. ಇವತ್ತು ಉನ್ನತ ಶಿಕ್ಷಣದಲ್ಲಿ ಇರುವಂಥಕ ಸಿಲ್ಲಬಸ್ ನೋಡಿದರೆ 20 ವರ್ಷಗಳ ಹಿಂದೆ ಚರಿತ್ರೆಯಲ್ಲಿ ನಾವು ಏನು ಓದುತ್ತಿದ್ದೆವೋ ಅದನ್ನೇ ಈಗಲೂ ಇನ್ನೊಂದು ಡಿಫರೆಂಟ್ ಫೇಸ್‌ನಲ್ಲಿ ಓದುತ್ತಿದ್ದೇವೆ. 20 ವರ್ಷಗಳ ಹಿಂದೆ ಅರ್ಥಶಾಸ್ತ್ರವನ್ನು ಏನು ಓದುತ್ತಿದ್ದೆವು, ಆಡಂಸ್ಮಿತ್, ಮಾರ್ಷಲ್, ಕೀನ್ಸ್, ರಾಬಿನ್-ಅದನ್ನೇ ಬಿಟ್ಟರೆ ಬೇರೆ ಇಲ್ಲ. ಇವರನ್ನು ಬಿಟ್ಟರೆ ಬೇರೆ ಅರ್ಥಶಾಸ್ತ್ರ ಅರ್ಥಶಾಸ್ತ್ರಜ್ಞರು ಈ ಜಗತ್ತಿನಲ್ಲಿ ಇದ್ದಾರೆ ಎಂಬುದು ನಮ್ಮ ತಲೆಗೆ ಹೋಗಿಲ್ಲ. They are totally prejudiced about our history; they are not telling facts.

ಪಂಡಿತ್ ಜೈಸ್ವಾಲ್ ಹೇಳಿದ ಕೊಟೇಶನ್ ಅನ್ನು ಚಾಚೂತಪ್ಪದೆ ಇವತ್ತಿಗೂ ಮಕ್ಕಳಿಗೆ ಹೇಳಿಕೊಡುತ್ತಿದ್ದೇವೆ. what is the implication? ಜನನಿ ಜನ್ಮಭೂಮಿಶ್ಚ, ಸ್ವರ್ಗಾದಪಿ ಗರೀಯಸಿ, ಎಂದು ಹೇಳಿ ಫಸ್ಟ್ ಸ್ಲೋಗನ್ ಕಾಯಿನ್ ಮಾಡಿದ್ದೇ ಈ ಜೈಸ್ವಾಲ್ ಅವರು. what is the effect of it today? what is the history? How we are interpreting? The same old history we are studying. But, there are lot of changes taking place on this earth. we are untouched about those

developments in the history. ಆದರೆ ಚರಿತ್ರೆ ಬಗ್ಗೆ ಪೂರ್ವಾಗ್ರಹಪೀಡಿತ ಅಭಿಪ್ರಾಯ, ತಪ್ಪುಕಲ್ಪನೆ, ತಪ್ಪು ಮಾಹಿತಿಯನ್ನು ಕೊಡುವುದರಲ್ಲಿ ಭಾರಿ ನಿಸ್ಸೀಮರು. ಇದರ ಪರಿಣಾಮವವನ್ನು ಈ ದೇಶ ನೋಡುತ್ತಿದೆ. ಆದರೆ ವಿಜ್ಞಾನದಲ್ಲಿ ಹಲವಾರು ಬದಲಾವಣೆಯಾಗಿದೆ. ತಮಗೆ ಗೊತ್ತಿದೆ ಆಫ್ರಿಕಾದಲ್ಲಿ ಲೇಸರೇ ಟಾರ್ಚ್‌ನ್ನು ಉಪಯೋಗ ಮಾಡಿದರು. Laser torch is a latest development in the science, but how we are utilising it? ಆಫ್ರಿಕಾದಲ್ಲಿ ಗೆರಿಲ್ಲಾಗಳನ್ನು ಫೈಂಡ್‌ಔಟ್ ಮಾಡುವುದಕ್ಕೆ ಲೇಸರ್ ಟಾರ್ಚ್‌ನ್ನು ಉಪಯೋಗ ಮಾಡಿದರು, ಆದರೆ ಆ ಲೇಸರ್ ಟಾರ್ಚ್‌ನ highest method of scientific technology ಅನ್ನು ಇವತ್ತು ನಾವು ಉಪಯೋಗಿಸುವುದಕ್ಕೆ ತಯಾರಿಲ್ಲ. ಹೀಗಾಗಿ ಇವತ್ತು ಉನ್ನತ ಶಿಕ್ಷಣ ಉನ್ನತ ಮಟ್ಟದ ಜನಕ್ಕೆ ಆಗಿದೆ. what has become education today? any soceity's demand is, ಪ್ರಶ್ನೇ ಏನಾಗಿದೆ ಎಂದರೆ education has become a privilege of a person. It has not become a right sofar. ಯಾವುದೇ ಸಮಾಜದಲ್ಲಿ Education must be a right of an individual but today what is happening/ It has become a privilege of a person. Therefore, it is only for privileged persons. Technical education is meant for privileged persons. who are they? who are having money to purchase seats by paying lakhs of rupees. Today technical and higher education is going for them. ಇವತ್ತು ತಾಂತ್ರಿಕ ವಿದ್ಯಾಭ್ಯಾಸದ ಪ್ರಶ್ನೆಗೆ ಬಂದರೆ, - doctors and engineers we should bow our head in shame. We are not finding places for medical colleges. we are purchasing. But what about needs of the doctors today? What is the demand of the society for the doctors? ನಮ್ಮ ಮಿತ್ರರು ಹಲವಾರು ಪ್ರಶ್ನೆಗಳನ್ನು ಹೇಳುತ್ತಿದ್ದಾರೆ. ನಮ್ಮ ಆಸ್ಪತ್ರೆಯಲ್ಲಿ ಡಾಕ್ಟರ್‌ಗಳು ಇಲ್ಲ, ನಮ್ಮ ಆಸ್ಪತ್ರೆಯಲ್ಲಿ ನರ್ಸ್‌ಗಳು ಇಲ್ಲ, ಎಂದು. We are producing thousands and thousands of doctors, but at the same time we don't have a doctor in our hospitals. What is the planning for that? when a hospital does not have a doctor, but you are producing thousands and thousands of doctors bu making money and you are not utilising their capacity. what about engineers? ನೀರಾವರಿ ಯೋಜನೆಗಳು ಇಲ್ಲ.

ಮೋರಿಗಳು, ರೋಡ್‌ಗಳು ಇಲ್ಲ, ಸಾವಿರಾರು ಇಂಜಿನಿಯರುಗಳನ್ನು ನಾವು ತಯಾರು ಮಾಡುತ್ತಿದ್ದೇವೆ. ಅವರನ್ನು ನೀವು ಉಪಯೋಗಿಸಿಕೊಳ್ಳುತ್ತಿದ್ದೀರೋ? ಸರ್ಕಾರಕ್ಕೆ ಗೊತ್ತಿದೆ. ಒಬ್ಬ ಡಾಕ್ಟರ್‌ನ್ನು ಸರ್ಕಾರ ತಯಾರು ಮಾಡಿ ಆಚೆಗೆ ಬಿಡಬೇಕಾದರೆ ಸರ್ಕಾರವೇ ಹಣ ಖರ್ಚು ಮಾಡತಕ್ಕಂಥಾದ್ದು ಎಷ್ಟು ಎಂದರೆ, ಒಬ್ಬರಿಗೆ 2ಲಕ್ಷ 80 ಸಾವಿರ ರೂಪಾಯಿಗಳು. The Government has to spend Rs. 2.80 lakhs on a single doctor. That is, to produce a doctor, the Government has to spend Rs. 2.80 lakhs. and that too it is peoples money and not your money or anybody's money.

ಆ ಜನರ ಹಣದಿಂದ ಡಾಕ್ಟರ್ ಆಗುವಂಥ ಮನುಷ್ಯ ಇವತ್ತು ಆ ಜನರಿಗೆ ಸಿಗುತ್ತಿಲ್ಲ. ಅವನು ಎಲ್ಲಿಗೆ ಹೋಗುತ್ತಿದ್ದಾನೆ? ನಮ್ಮ ರಸ್ತೆಗಳಿಗೆ, ಮೋರಿಗಳನ್ನು ಕಟ್ಟುವವರು ಇಲ್ಲ. ನೀರಾವರಿ ಯೋಜನೆಗಳನ್ನು ಪೂರೈಸುವುದಕ್ಕೆ ಇಂಜಿನಿಯರುಗಳು ಇಲ್ಲ. ಇಂಜಿನಿಯರುಗಳನ್ನು ತಯಾರು ಮಾಡುತ್ತಿದ್ದೇವೆ. ಅವರು ಎಲ್ಲಿಗೆ ಹೋಗಿದ್ದಾರೆ? you know the very good old slogan. That is, brain drain. All brains are going

away from this country in the pretext that they are not getting very good opportunity. They are going away from this country.

ನಮ್ಮ ಸಮಾಜದ ಜನರ ಲಕ್ಷಾಂತರ, ಕೋಟ್ಯಾಂತರ ಹಣವನ್ನು ಖರ್ಚು ಮಾಡಿ ಡಾಕ್ಟರ್, ಇಂಜಿನಿಯರುಗಳನ್ನು ಮಾಡಿದರೆ ಅವರಿಗೆ ಖಾಯಿಲೆ ಬಂದರೆ ಡಾಕ್ಟರ್ ಇಲ್ಲ, ಊರಿಗೆ ರೋಡ್ ಇಲ್ಲ. ಹಳ್ಳಿಯ ಜನರಿಗೆ ರೋಗ ಬಂದರೆ ನೀವು ಏನು ಕೊಡುತ್ತಿದ್ದೀರಿ? ಬೇವಿನಸೊಪ್ಪು, ನಿಂಬೆಹಣ್ಣು ಕೊಡುತ್ತೀರಿ, ಮಂತ್ರ ಹಾಕಿಸಿಕೊಳ್ಳಿ ಎಂದು. ಅವರಿಗೆ ಡಾಕ್ಟರ್‌ಗಳು ಇಲ್ಲ. ಡಾಕ್ಟರ್ ಇದ್ದರೆ ಆಸ್ಪತ್ರೆ ಇಲ್ಲ, ಆಸ್ಪತ್ರೆ ಇದ್ದರೆ ಔಷಧಿ ಇಲ್ಲ. ನಮಗೆ ಎಷ್ಟು ಜನ ಡಾಕ್ಟರ್‌ಗಳು ಬೇಕಾಗಿದ್ದಾರೆ? ಎಷ್ಟು ಹಳ್ಳಿಗಳಿವೆ, ಎಷ್ಟು ಆಸ್ಪತ್ರೆಗಳು ಇವೆ. ಎಷ್ಟು ಡಾಕ್ಟರ್‌ಗಳನ್ನು ತಯಾರು ಮಾಡಬೇಕು, ಎನ್ನುವುದರ ಬಗ್ಗೆ ಪ್ಲಾನ್ ಇಲ್ಲ. This is the condition and the reason for the same is, we don't have plan. We have not planned properly. Doctors and medical seats and engineers and engineering seats have become commodities in the marketd.

ಏಕೆ ಸ್ವಾಮಿ? ವಿದ್ಯಾಭ್ಯಾಸ ಎನ್ನತಕ್ಕಂಥಾದ್ದು ಒಂದು ಸಮಾಜದ ಅವಶ್ಯಕತೆಗೆ ಅನುಗುಣವಾಗಿ ರೂಪಿತವಾಗಬೇಕು. ಇದು ಉನ್ನತ ಶಿಕ್ಷಣಕ್ಕೆ ಈ ಪರಿಸ್ಥಿತಿ ಬಂದಿದೆ. ಇನ್ನು ಪ್ರಾಥಮಿಕ ಶಿಕ್ಷಣಕ್ಕೆ ಬಂದರೆ.... ನಾನು ಆಹಾರ ಪೊಟ್ಟಣಗಳನ್ನು ಪ್ರದರ್ಶನ ಮಾಡುತ್ತೇನೆ.

Mr. SPEAKER : Before you move on to that ಯಾವ ವರ್ಗದ ಜನರಿಗೆ ಗ್ರಾಮಾಂತರ ಪ್ರದೇಶದಲ್ಲಿ ವೈದ್ಯಕೀಯ ಸೌಲಭ್ಯ ಬೇಕಾಗಿದೆ ಆ ವರ್ಗ ಬೇರೆ. ಡಾಕ್ಟರ್ ಕೋರ್ಸ್ ಪಾಸ್ ಮಾಡಿಕೊಂಡು ಬರುತ್ತಿದ್ದಾರಲ್ಲ, ನೀವು ಹೇಳಿದ ಕಾಲೇಜುಗಳಲ್ಲಿ ಅವರದೇ ಬೇರೆ ವರ್ಗ.It is a class different. ಈ ಕ್ಲಾಸ್‌ನ ಇಂಟರೆಸ್ಟ್ ಸರ್ವೆ ಮಾಡುವುದಕ್ಕೆ ಆ ಕ್ಲಾಸ್‌ನವರು ಬರುವುದಿಲ್ಲ.

I am trying to help you. The student who gets into this institution has no obligation to serve the class which you have in mind. we have gone on with both these two different class of people co-adjusting, the upper class not caring for the needs and problems of the exploited class at all. That you should specify. It is only to strengthen your argument.

Sri. G.V. Srirama Reddy : Mr. Speaker Sir, I am very thenkful to you for the suggestion. This is the food packet they are serving. ಎಷ್ಟು ಭ್ರಷ್ಟತೆ ಈ ಸರ್ಕಾರದ ಆಡಳಿತ ಯಂತ್ರದಲ್ಲಿದೆ ಎಂದು.

Net weight is 5 Kgs. But this contains only one kg. you are spending three Crores fifty lakhs of rupees per month for feeding children. It comes to Rs. 40 Crores per year. Every month they are giving food packets to school children from 1st standard to 7th standard.

ಅಧ್ಯಕ್ಷರು : ಅದು ಯಾವ ಸ್ಕೀಮ್ ಏನು ಎಂದು ಹೇಳಿ.

Sri G.V. Srirama Reddy : Mid day Meal Scheme ಎಂದು, ಆಹಾರ ಪೊಟ್ಟಣಗಳನ್ನು ಒದಗಿಸುತ್ತಾರೆ. ಅವರು ಕೊಟ್ಟಿರತಕ್ಕ ವರದಿಯಲ್ಲೇ ಇದೆ. Energy

food scheme ನಲ್ಲಿ ಅವರು ಹೇಳುತ್ತಾರೆ, 3 ಕೋಟಿ 50 ಲಕ್ಷ ಆಯವ್ಯಯದಲ್ಲಿ ಒದಗಿಸಲಾಗಿದೆ. Agro Food Corn ರವರು ಸಪ್ಲೈ ಮಾಡುವುದು, ಇದರ ತೂಕ Net weight five kg. ಎಂದು ಸೀಲ್‌ಇದೆ. ಇದನ್ನು ತೂಕ ಮಾಡಿಸಿದರೆ ಇರತಕ್ಕಂಥಾದ್ದು ಒಂದೇ ಒಂದು ಕೆ.ಜಿ. ಮತ್ತೆ ವಿಜ್ಞಾನದ ವಿಷಯದ ಬಗ್ಗೆ ಬಹಳಷ್ಟು ಮಾತನಾಡತಕ್ಕ ಜನ.

MR. Speaker : Please transfer those things. ಅವುಗಳನ್ನೆಲ್ಲಾ ಸಚಿವರ ಕಡೆ ಕಳುಹಿಸಿಕೊಡಿ. ನೀವು ಉತ್ತರ ಕೊಡುವ ಹೊತ್ತಿಗೆ ದಯಮಾಡಿ. Send your officers and get the reply. ಅದರಲ್ಲಿ ಸತ್ಯಾಂಶ ಇದ್ದರೆ. Please keep them under suspension immediately.

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ : ನಾನು ಯಾವತ್ತು ಈ ರೀತಿ ಮಾತನಾಡುವುದಿಲ್ಲ. ಸ್ಕೂಲ್ ಮಾಕ್ಕಳಿಗೆ......

ಅಧ್ಯಕ್ಷರು : ಅದು ಯಾವ ಇಲಾಖೆಗೆ ಸಂಬಂಧಪಟ್ಟಿದ್ದುದು ಎಂದು ಹೇಳಿ......

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ : ಸ್ಕೂಲ್ ಮಕ್ಕಳಿಗೆ ಕೊಡತಕ್ಕಂಥಾದ್ದು, ಪ್ರಿ ಪ್ರೈಮರಿ ಯಿಂದ 7ನೇ ತರಗತಿಯ ಮಕ್ಕಳಿಗೆ ಕೊಡತಕ್ಕಂತಾದ್ದು. ಎಜುಕೇಷನ್ ಡಿಪಾರ್ಟ್‌ಮೆಂಟ್ ಆಗ್ರೋ ಫುಡ್ ಕಾರನ್ಸ್‌ರವರೇ ಸಪ್ಲೈ ಮಾಡುವುದು.

ಒಬ್ಬ ಮಾನ್ಯ ಸದಸ್ಯರು : ಅದು ಅಂಗನವಾಡಿ ಮಕ್ಕಳಿಗೆ ಕೊಡುವಂಥ ಫುಡ್, ಶಾಲಾ ಮಕ್ಕಳಿಗಲ್ಲ.

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ : ಅಂಗನವಾಡಿಯದು ಬೇರೆ, ಇದಲ್ಲ.

Mr. Speaker : ಅದು ಯಾವುದೇ ಇಲಾಖೆಯದಾಗಿರಲಿ, ಸ್ಪಷ್ಟವಾಗಿ ಇಂತಹ ಇಲಾಖೆ. ಇಂತಹ ಯೋಜನೆ ಎಂದು ಹೇಳಿದರೆ, I will advise them, ಉತ್ತರ ಕೊಡುವ ಹೊತ್ತಿಗೆ. let them make a preliminary enquiry and come back to the House.

Sri. G.V. Srirama Reddy : I will read out the Annual Report of the Education Department.

ಆಹಾರ : ಬಡ ಕುಟುಂಬಗಳಿಂದ ಬರುವ ಮಕ್ಕಳ ಪೌಷ್ಟಿಕತೆಯನ್ನು ಹೆಚ್ಚಿಸಿ, ತನ್ಮೂಲಕ ಅವರು ತಮ್ಮ ಶೈಕ್ಷಣಿಕ ಚಟುವಟಿಕೆಗಳ ಕಡೆಗೆ ಹೆಚ್ಚು ಗಮನ ನೀಡುವಂತೆ ಪ್ರೋತ್ಸಾಹಿಸಲು ಸರ್ಕಾರಿ ಪ್ರಾಥಮಿಕ ಶಾಲೆಗಳ ತರಗತಿ 1 ರಿಂದ 4ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ಎಲ್ಲಾ ಮಕ್ಕಳಿಗೆ, ಪ್ರತಿ ಶಾಲಾ ದಿನಗಳಂದು 50 ಗ್ರಾಂ ಸಂಸ್ಕರಿಸಿದ ಪೌಷ್ಟಿಕ ಆಹಾರವನ್ನು ಒಂದು ತಿಂಗಳಿಗೆ ಗರಿಷ್ಟ ಒಂದು ಕೆ.ಜಿ. ಪ್ಯಾಕೆಟ್‌ನಂತೆ ಒಂದು ವರ್ಷಕ್ಕೆ 8 ಪ್ಯಾಕೆಟ್‌ಗಳಿಗೆ ಮಿತಿಗೊಳಿಸಿ. ನೀಡಿಲಾಗುತ್ತಿದೆ. ಈ ಕಾರ್ಯಕ್ರಮದ ಅಡಿಯಲ್ಲಿ 40 ಲಕ್ಷ ಮಕ್ಕಳು ಪ್ರಯೋಜನ ಪಡೆಯುತ್ತಿದ್ದಾರೆ. ಒಂದು ತಿಂಗಳಿಗೆ 3 ಕೋಟಿ 50 ಲಕ್ಷ ರೂಪಾಯಿಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ.

This is the food packet. ಆ ಪ್ಯಾಕೆಟ್ ಮೇಲೆ 5 ಕೆ.ಜಿ. ನೆಟ್ ವೈಟ್ ಎಂದು ಇದ್ದು ಸೀಲ್ ಮಾಡಿ ಕೊಟ್ಟಿದ್ದಾರೆ. It is a packed sealing, net weight is five Kgs. but the content is only one kg. ಇವರು ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವವನ್ನು ಬೆಳೆಸಬೇಕೆಂದು, ಲ್ಯಾಬೊರೇಟರಿ ಎಕ್ವಿಪ್‌ಮೆಂಟ್ಸನ್ನು ಕೊಡುತ್ತಿದ್ದಾರೆ. They are spending Rs. 17 Crores per year. ಅವರ ವರದಿಯಲ್ಲೇ ಇದೆ. ಅದನ್ನು ತಮಗೆ ಕೊಡುತ್ತಿದ್ದೇನೆ. ಅವರು ಸಪ್ಲೈ ಮಾಡತಕ್ಕಂಥ ಪ್ಯಾರಾ ಮೀಟರ್ ನೋಡಿ. ಸಪ್ಲೈ ಮಾಡಿ ಮೂರು ವರ್ಷವಾಗಿದೆ, ಒಂದು ದಿವಸವೂ ಕೆಲಸ ಮಾಡಿಲ್ಲ. ಅಧ್ಯಕ್ಷರೇ, ತಾವು ಇದನ್ನು ಪರಿಶೀಲನೆ ಮಾಡಬೇಕು.

This has been supplied by M/s. Rohith Enterprises, Bangalore. ನನ್ನ ಹತ್ತಿರ ಕೊಟೇಷನ್ ಡಾಕ್ಯುಮೆಂಟ್ಸ್ ಇದೆ. ಈ ಕೊಟೇಷನ್ ಡಾಕ್ಯುಮೆಂಟ್ಸ್ ನೋಡಿದರೆ, ನಿಮಗೆ ವಿಚಿತ್ರ ಎನಿಸುತ್ತದೆ. ಕೊಟೇಷನ್ ಕೊಟ್ಟಿದ್ದಾರೆ. ಕೊಟೇಷನ್ ಕೊಟ್ಟರೆ ಇಂಡಿವಿಜುಯಲ್ ಐಟಮ್ಸ್‌ಗೆ ರೇಟ್ ಫಿಕ್ಸ್ ಮಾಡಿ ಕೊಟೇಷನ್ ಕೊಡಬೇಕು. ಅದರ ಕಾಪಿಯನ್ನು ತಮಗೆ ಕಳುಹಿಸುತ್ತಿದ್ದೇನೆ. ಇಂಡಿವಿಜಯಲ್ ಐಟಮ್ಸ್‌ಗೆ, ಲ್ಯಾಬೊರೇಟರಿ ಎಕ್ವಿಪ್‌ಮೆಂಟ್ಸ್, ನಾವು ನಿಮಗೆ ಕೊಟ್ಟಿರತಕ್ಕಂತಾದ್ದು ನಂಬರ್ 3 ಐಟಂ. ಇನ್ನೊಂದು ಇದೆ, ಅದನ್ನೂ ಆಮೇಲೆ ತಮ್ಮ ಕಡೆಗೆ ಕಳುಹಿಸುತ್ತೇನೆ. ಈ ರೀತಿಯಾಗಿ 165 ಐಟಮ್ಸ್‌ಗೆ ಕೊಟೇಷನ್ ಕೇಳಿ, ಇದಕ್ಕೆ ರೇಟನ್ನೇ ಫಿಕ್ಸ್ ಮಾಡಿಲ್ಲ. M/s/. Rohith Associates, No. 25, BEML Layout, I Stage, III Main 7th Cross, Bangalore, ಇವರು ಸಪ್ಲೈ ಮಾಡತಕ್ಕಂಥಾದ್ದು. ಈಗ ಇದನ್ನು ಚೇಂಜ್ ಮಾಡಿ, ಹೈದರಾಬಾದ್‌ನಲ್ಲಿ ಕೆಮಿಕಲ್ಸ್ ಅಸೋಸಿಯೇಟ್ಸ್‌ಗೆ ಕೊಡಿಸಿದ್ದಾರೆ. ಇದರಲ್ಲಿ ಏನು ಬರೆಯುತ್ತಾರೆ ಎಂದರೆ, In this Item No. 20 is, Maximum and minimum thermometer with a magnet, ಇದು ಕೆಲಸಕ್ಕೇ ಬರುವುದಿಲ್ಲ, ಬೆಂಡ್ ಬಂದು ಬಿಟ್ಟಿದೆ. ಇದನ್ನು ಮಕ್ಕಳಿಗೆ ಕೊಡುವುದು, ಲ್ಯಾಬೊರೇಟರಿಯಲ್ಲಿ ಎಕ್ಸ್‌ಪರಿಮೆಂಟ್ ಮಾಡಿ ಎಂದು. ಮಕ್ಕಳಿಗೆ ಲ್ಯಾಬೊರೇಟರಿಗಾಗಿ ಸಪ್ಲೈ ಮಾಡತಕ್ಕಂಥಾದ್ದು, ಇದು ಯಾರಿಗಾದರೂ ಟೆಕ್ನಿಕಲ್ ನಾಲೆಡ್ಜ್ ಇರುವವರಿಗೆ ಗೊತ್ತಾಗುತ್ತದೆ. ಇದು ಬೆಂಡ್ ಬಂದು, ದಾರವನ್ನು ಎಳೆಯಬೇಕು. ಅದು ಬರುವುದೇ ಇಲ್ಲ.

(ಈ ಸಂದರ್ಭದಲ್ಲಿ ಸದರಿ ಉಪಕರಣಗಳನ್ನು ಸದನದಲ್ಲಿ ತೋರಿಸಿದರು.)

This is the thing they are supplying and they are spending Rs. 17 Crores for laboratory equipments per year, and their agent is M/s., Rohith Enterprises. ಇಲ್ಲಿ ಎಷ್ಟು ಭ್ರಷ್ಟತೆ ಇದೆಯೆಂದು ನಾನು ಅದಕ್ಕೇ ಹೇಳಿದ್ದುದು. ನಾನು ನಿನ್ನೆ ಮಾತನಾಡುವಾಗ ಏನು ಹೇಳಿದೆ ಎಂದರೆ, Non-committed bureaucrats, Working under unwilling Government having an irrelevant programme on education, facing uncertain condition. It is a non-committed bureaucrats working under unwilling Government about education. Government is unwilling. These are all non-dommitted Officers working under irrelevant programme on education facing uncertain conditions. ಅಂತಹವರ ಕೈಯಲ್ಲಿ ಪ್ರಾಥಮಿಕ ಶಿಕ್ಷಣ ಸಿಕ್ಕು, ಪರಿಸ್ಥಿತಿ ಏನಾಗಿದೆ ಎಂಬುದನ್ನು ನೋಡಿ. ಹಾಗಾದರೆ, ಈ ದೇಶಕ್ಕೆ ಏನು ಬೇಕಾಗಿದೆ. ನಮಗೆ ವಿದ್ಯಾಭ್ಯಾಸ ಬೇಡ, ಪಬ್ಸ್‌ನ್ನು ಓಪನ್ ಮಾಡಿ, ಬಾರ್‌ಗಳನ್ನು ಓಪನ್ ಮಾಡಿ. ಕ್ಯಾಬರೆ ಡ್ಯಾನ್ಸ್‌ಗಳನ್ನು ಓಪನ್ ಮಾಡಿ. ವಿದ್ಯಾಭ್ಯಾಸ ಬೇಕಾಗಿಲ್ಲ.

ಅವುಗಳಿಗಾದರೆ, ಅತ್ಯುತ್ತಮ ಎಕ್ವಿಪ್‌ಮೆಂಟ್ ಇರತಕ್ಕಂಥ ಹಾಲ್‌ಗಳನ್ನು ಆಡಿಟೋರಿಯಂಗಳನ್ನು ಕನ್‌ಸ್ಟ್ರಕ್ಟ್ ಮಾಡುತ್ತೀರಿ. ಅವರಿಗೆ ಬೇಕಾಗಿರತಕ್ಕ ಸೌಂಡ್ ಅಂಡ್ ಮ್ಯೂಸಿಕ್‌ಗೆ ಯೂರೋಪ್‌ನಿಂದ ತರಿಸಿಕೊಳ್ಳುತ್ತೀರಿ. ಆದರೆ ಪ್ರತಿ ಹಳ್ಳಿ ಎಂಬ ಶಾಲೆಗೆ ಒಬ್ಬ ಶಿಕ್ಷಕರನ್ನು ಕೊಡುವುದಕ್ಕಾಗುವುದಿಲ್ಲ, ಅದಕ್ಕೆ ಬಾಗಿಲು ಇಲ್ಲ, ಆದರಲ್ಲಿ ಜವಾನ ಇಲ್ಲ, ಕಸ ಗುಡಿಸುವವರು ಇಲ್ಲ, ಮಕ್ಕಳು ಹೋದರೆ ಸಗಣಿಯಲ್ಲಿ ಕುಳಿತುಕೊಳ್ಳಬೇಕು. ಧೂಳಿನಲ್ಲಿ ಕುಳಿತುಕೊಳ್ಳಬೇಕು, ಓದಲಿಕ್ಕೆ ಅವರು ಹೇಗೆ ಇಷ್ಟಪಡುತ್ತಾರೆ. It is my anger. I am at pain. This is my angry. Because we are all committed to the society, we are fed by the society ಅವರ ಉಪ್ಪನ್ನು ನಾವು ತಿನ್ನುತ್ತಿರತಕ್ಕಂಥಾದ್ದು. ಆದರೆ. We have no minimum courtesy about that poor fellows who are feeding us. Atleast, they are demanding a minimum

education which we are not able to give. ಇನ್ನೊಂದು ಕಡೆ ಇವರು ಲೈಬ್ರರಿ ಪುಸ್ತಕಗಳನ್ನು ಸಪ್ಲೈ ಮಾಡುತ್ತಾರೆ. ಸನ್ಮಾನ್ಯ ಗೋವಿಂದೇಗೌಡರಿಗೆ ಒಂದು ಪತ್ರ ಹೋಗಿದೆ. ಸಾರ್ವಜನಿಕ ಗ್ರಂಥಾಲಯಗಳ ಬಗ್ಗೆ ಸನ್ಮಾನ್ಯ ಗೋವಿಂದೇಗೌಡರಿಗೆ, ಜನತಾದಳದ ಪ್ರಧಾನ ಕಾರ್ಯದರ್ಶಿಯವರೇ ಒಂದು ಪತ್ರ ಬರೆದಿದ್ದಾರೆ, ಅದರ ಮೇಲೆ ಸನ್ಮಾನ್ಯ ಗೋವಿಂದೇಗೌಡರು ಒಂದು ನೋಟ್ ಹಾಕಿದ್ದಾರೆ. ಕೋಟ್ಯಾಂತರ ರೂಪಾಯಿ ಲೈಬ್ರರಿ ಹಣ ಲೂಟಿಯಾಗುತ್ತಿದೆ. ಪುಸ್ತಕಗಳನ್ನು ಸಪ್ಲೈ ಮಾಡತಕ್ಕ ಹೆಸರಿನಲ್ಲಿ ಎಷ್ಟು ಅಪವ್ಯಯವಾಗಿದೆ ಎಂಬುದನ್ನು ಹೇಳುತ್ತೇನೆ. ಆದರೆ ತಾವು ಸಮಯ ಇಲ್ಲವೆಂದು ಹೇಳುತ್ತೀರಿ. ಇಲ್ಲದೇ ಹೋದರೆ, ಎಲ್ಲಾ ವಿವರಗಳನ್ನೂ ಹೇಳುತ್ತಿದ್ದೆ. ನನ್ನ ಹತ್ತಿರ ವಿವರ ಇದೆ. It is number one looting. ತಮಗೆ ಗೊತ್ತಿದೆ, ವಿದೇಶದಲ್ಲಿ ಪ್ರಿಂಟ್ ಆಗತಕ್ಕಂಥಪುಸ್ತಕಗಳು ಡಾಲರ್ಸ್‌ನಲ್ಲಿ ಮುದ್ರೆ ಹೊಡೆಯುತ್ತಾರೆ. ವಿದೇಶದ ಮಾರುಕಟ್ಟೆಯಲ್ಲಿ ಪುಸ್ತಕಗಳಿಗೆ ಕೆಲವು ನಿಯಮ ಇದೆ. ಎರಡು ಮೂರು ವರ್ಷವಾಗಿಬಿಟ್ಟರೆ, ಔಟ್ ಡೇಟೆಡ್ ಆಗುತ್ತವೆ. ಅವುಗಳನ್ನು ಅವರು ಉಪಯೋಗ ಮಾಡುವುದಿಲ್ಲ. ಆ ಪುಸ್ತಕಗಳನ್ನು ಭಾರತ ದೇಶಕ್ಕೆ ಡಂಪ್ ಮಾಡಿ, ಅದೇ ಡಾಲರ್ ಮುದ್ರೆಯಲ್ಲಿ ಪುಸ್ತಕಗಳನ್ನು ಮಾರಾಟ ಮಾಡುತ್ತಿದ್ದಾರೆ. ಯಾವ ರೀತಿ ಮಾರಾಟ ಮಾಡುತ್ತಿದ್ದಾರೆಂದು ಹೇಳಿದರೆ. ಇದರಲ್ಲಿ ಸುಮಾರು ಕೋಟ್ಯಾಂತರ ರೂಪಾಯಿ, ಸೀಲ್ ಅವರೇ ಹೊಡೆಯುವುದು, ಅದೇ ಡಾಲರ್ ಸೀಲ್. ಇಲ್ಲಿ ತೆಗೆದುಕೊಂಡು ಬಂದು ಲೈಬ್ರರಿಗಳಿಗೆ ಹಾಕತಕ್ಕಂತಾದ್ದು. ಇವತ್ತು ಈ ಲೈಬ್ರರಿ ವ್ಯಾಪಾರ ಹೇಗಾಗಿದೆ ಎಂದರೆ, ಪುಸ್ತಕಗಳನ್ನು ಓದಲಿಕ್ಕೆ ಕೊಡತಕ್ಕ ಸಂದರ್ಭದಲ್ಲಿ ಪುಸ್ತಕ ಹೇಗಿರಬೇಕು, ಯಾವ ಮಾರ್ಕೆಟ್‌ನಲ್ಲಿ ಪರ್ಚೇಸ್ ಮಾಡಬೇಕೆಂಬುದೇನೂ ಅವರ ಹತ್ತಿರ ಇಲ್ಲ. ಇವತ್ತು ಅವರ ಪರಿಸ್ಥಿತಿ ಹೇಗಾಗಿದೆ ಎಂದರೆ ಲೈಬ್ರರಿಗೆ ಪುಸ್ತಕಗಳನ್ನು ಮಾರಾಟ ಮಾಡತಕ್ಕ ಜನ ಯಾರಿದ್ದಾರೆ, ಅವರಿಗೆ ಏನು ಹೇಳಿಕೊಟ್ಟರೆ, ಯಾವ ಪುಸ್ತಕ ಕೊಟ್ಟರೆ, ಅದನ್ನು ಕೊಡತಕ್ಕಂತಾದ್ದು. ಅದರಲ್ಲಿ ಒಂದು ಬಹಳ ಮುಖ್ಯವಾದುದು. ಮಕ್ಕಳಿಗೆ ಕಾಮಿಕ್ಸ್ ಎಂದು ಸಪ್ಲೈ ಮಾಡುತ್ತಾರೆ. ಆ ಕಾಮಿಕ್ಸ್‌ನ್ನು ಯೂರೋಪಿನಿಂದ ತರಿಸಿಕೊಳ್ಳುತ್ತಾರೆ. ಏಕೆಂದರೆ, ನಮ್ಮಲ್ಲಿ ಕಾಮಿಕ್ಸ್ ಬರೆಯತಕ್ಕಂಥ ಯಾರೂ ಸಾಹಿತಿಗಳಿಲ್ಲ. ಆ ಕಾಮಿಕ್ಸ್‌ನ್ನು ತಾವು ನೋಡಿದರೆ ಅರ್ಥವಾಗುತ್ತದೆ. ಕಾಮಿಕ್ಸ್ ಎಂದರೆ It is almost like a blue film ಇದ್ದ ಹಾಗೆ. ಅದನ್ನು ಇಲ್ಲಿಗೆ ತರಿಸಿಕೊಂಡು ಅದನ್ನು ಮಾರಾಟ ಮಾಡತಕ್ಕ ಸಂದರ್ಭದಲ್ಲಿ ಸುಮಾರು ನೂರಾರು ಕೋಟಿ ರೂಪಾಯಿಗಳನ್ನು ಸಂಪಾದನೆ ಮಾಡುತ್ತಾರೆ. ಅಂದರೆ ಯಾವ ಹೆಸರಿನಲ್ಲಿ ಕಾಮಿಕ್ಸ್ ಎಂದು ಹೇಳಿದರೆ, ರೇಟ್ ಕಡಿಮೆಯಾಗುತ್ತದೆಂದು ಮ್ಯಾಗ್ಸೈನಿನ ಹೆಸರಿನಲ್ಲಿ ಅದನ್ನು ಕೊಂಡುಕೊಳ್ಳತಕ್ಕಂಥಾದ್ದು. Magazine will have a different rate.

12.30 ಪಿ.ಎಂ.

ಕಾಮಿಕ್ಸ್ ಅಂದರೆ ಬೇರೆ ಡಿಫರೆಂಟ್ ರೇಟ್ ಆಗುತ್ತದೆ ಎಂದು ಹೇಳಿ ಮ್ಯಾಗ್ಜೈನ್ಸ್ ಹೆಸರಿನಲ್ಲಿ ಅವರು ಇವತ್ತು ಮಾರಾಟ ಮಾಡುತ್ತಾ ಇರತಕ್ಕಂಥಾದ್ದು. ಈ ಲೈಬ್ರರಿಯನ್ ಅವ್ಯವಹಾರದ ಬಗ್ಗೆ ಎನ್‌ಕ್ವೈರಿ ಮಾಡುವುದಕ್ಕೆ ಮಾನ್ಯ ಗೋವಿಂದೇಗೌಡರು ಲೆಟರ್ ಕೊಟ್ಟಿದ್ದಾರೆ. ಬಹುಶಃ ಅವರಿಗೆ ಜ್ಞಾಪಕ ಇದೆಯೋ ಇಲ್ಲವೋ ಗೊತ್ತಿಲ್ಲ. ಆ ಎನ್‌ಕ್ವೈರಿ ಯಾವ ಸ್ಟೇಜಿಗೆ ಬಂದಿದೆ ಎಂದು ನನಗೆ ಗೊತ್ತಿಲ್ಲ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಮಾನ್ಯ ಅಧ್ಯಕ್ಷರೇ, ಈ ಕಾಗದಗಳು ವ್ಯವಹಾರಗಳು ತುಂಬಾ ನಡೆದಿದ್ದರಿಂದ ನನ್ನ ಮನಸ್ಸಿಗೂ ಅದು ಸಮಾಧಾನ ಆಗದೇ ಅದನ್ನು ನಾನು ಸಿ.ಓ.ಡಿ.ಗೆ ರೆಫರ್ ಮಾಡಿದ್ದೇನೆ. ಸಿ.ಓ.ಡಿ.ಯವರು ಎನ್‌ಕ್ವೈರಿ ಮಾಡುತ್ತಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ : ಮಾನ್ಯ ಅಧ್ಯಕ್ಷರೇ, ನಾನು ಅದನ್ನೇ ಹೇಳಿದ್ದುದು. ಗೋವಿಂದೇಗೌಡರು ಅವರೇ ಪತ್ರ ಬರೆದಿದ್ದಾರೆ. ಆದರೆ ಸಿ.ಒ.ಡಿ. ತನಿಖೆಗೆ ನಿಮಗೆ ಗೊತ್ತಿದೆಯೋ ಇಲ್ಲವೋ ಸಿ.ಒ.ಡಿ. ಆಫೀಸರ್ಸ್ ಹೋಗಿ ಸಂಬಂಧಪಟ್ಟಿರತಕ್ಕಂಥ ಅಧಿಕಾರಿಗಳ ಹತ್ತಿರ ಫೈಲ್ಸನ್ನು ಕೊಡಿ ಎಂದು ಕೇಳಿದರೆ, they are consistently rejecting. They are not giving the concerned files.

ಆ ಲೈಬ್ರೆರಿಯನ್ಸ್ ಹಲವಾರು ವರ್ಷಗಳಿಂದ ಇಲ್ಲೇ ಜಾಂಡಾ ಹೂಡಿದ್ದಾರೆ. ಅವರು ಇಲ್ಲಿ ಬಿಟ್ಟು ಹೋಗುವುದಿಲ್ಲ. ಸಪ್ನಾ ಬುಕ್ ಸ್ಟಾಲ್‌ನವರಿಗೂ ಇವರಿಗೂ ಇರತಕ್ಕಂಥ ಸಂಬಂಧ ಏನು ಎನ್ನತಕ್ಕಂಥಾದ್ದನ್ನು ನೀವು ತನಿಖೆ ಮಾಡಬೇಕಾಗುತ್ತದೆ. ಈ ಕಾಮಿಕ್ಸ್‌ನ್ನು ಸಪ್ಲೈ ಮಾಡಿದವರು ಯಾರು? ವಿದೇಶದಲ್ಲಿ ವೇಸ್ಟ್ ಬಾಕ್ಸ್‌ಗೆ ಹಾಕಿರುವಂತಹ ಈ ಪುಸ್ತಕಗಳನ್ನು ಈ ಲೈಬ್ರರಿಗೆ ತಂದವರು ಯಾರು? ಈ ಬಗ್ಗೆ ಗಮನ ಹರಿಸಬೇಕಾಗುತ್ತದೆ. ಅದಕ್ಕಿಂತ ಇನ್ನೊಂದು ಮುಖ್ಯವಾದ ವಿಷಯವನ್ನು ಹೇಳುತ್ತೇನೆ. ಗುಲ್ಬರ್ಗ ಯೂನಿವರ್ಸಿಟಿ ವೈಸ್‌ಚಾನ್ಸಲರ್ ಬಗ್ಗೆ ಪತ್ರಿಕೆಗಳಲ್ಲಿ ನೀವೆಲ್ಲಾ ಓದಿರುತ್ತೀರಿ. ಸುಳ್ಳು ಡೇಟ್ ಆಫ್ ಬರ್ತ್‌ನ್ನು ಕೊಟ್ಟು ಕೆಲಸದಲ್ಲಿ ಮುಂದುವರಿಯುತ್ತಿದ್ದಾನೆ ಆ ಮನುಷ್ಯ. ನೋಡಿ ಅಪಾಯಿಂಟ್‌ಮೆಂಟ್ ಡೇಟ್ 15-2-1990. ವೈಸ್ ಚಾನ್ಸಲರ್ ಫಾರ್ ಥ್ರೀ ಇಯರ್ಸ್.

ಶ್ರೀ ಡಿ. ಮಂಜುನಾಥ್ : ಅವರು ವೈಸ್‌ಚಾನ್ಸಲರ್ ಬಗ್ಗೆ ಸಂಶಯ ವ್ಯಕ್ತಪಡಿಸುತ್ತಿದ್ದಾರೆ. ಅದೇನಾಗುತ್ತಿದೆ ಅಂದರೆ, ಅವರು ಕೋರ್ಟಿನಲ್ಲಿ ಒಂದು ಡಿಕ್ರಿ ತೆಗೆದುಕೊಂಡಿದ್ದಾರೆ. ಆ ಡಿಕ್ರಿ ಪ್ರಕಾರ 1996ರ ಫೆಬ್ರವರಿವರೆಗೂ ವಾಯಿದೆ ಇದೆ. ಅವರು ಆಗಸ್ಟ್‌ನಲ್ಲಿಯೇ ರಿಟೈರ್ಡ್ ಆಗಬೇಕಾಗಿತ್ತು. ಕೋರ್ಟ್ ಆರ್ಡರ್ ಪ್ರಕಾರ ಅವರು ಮುಂದುವರಿಯುತ್ತಿದ್ದಾರೆ. ಅದನ್ನು ಯಾರೂ ಚಾಲೆಂಜ್ ಮಾಡಿಲ್ಲ, what ever it is, he has taken a court order.

Sri QUEMARAL ISLAM : The Bangalore University has already given the order. All these things are there in detail. The Bangalore University has not been made the Party.

Sri D. MANJUNATH : On the strength of Decree by the Civil Court, he is continuing.

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ : ಮಾನ್ಯ ಅಧ್ಯಕ್ಷರೇ, ಸುಪ್ರೀಂ ಕೋರ್ಟ್‌ನ ಒಂದು ರೂಲಿಂಗ್ ಇದೆ. ಇದು ಸನ್ಮಾನ್ಯ ವಿದ್ಯಾ ಮಂತ್ರಿಗಳಿಗೆ ಗೊತ್ತಿರಬೇಕು. ಸುಪ್ರೀಂ ಕೋರ್ಟ್ ತೀರ್ಪು ಇದೆ. ಆಲ್ಟರೇಶನ್ ಆಫ್ ಡೇಟ್ ಆಫ್ ಬರ್ತ್ ಬಗ್ಗೆ ಸುಪ್ರೀಂ ಕೋರ್ಟ್ ಒಂದು ಡಿಸಿಷನ್ ಕೊಟ್ಟಿದೆ. ನಾನು ಸುಪ್ರೀಂ ಕೋರ್ಟಿನ ಜಡ್ಜಮೆಂಟ್‌ನ್ನು ತಮ್ಮ ಮುಂದೆ ಓದುತ್ತೇನೆ. The Supreme Court has given a clear direction about the alteration of date of birth.

ಅಧ್ಯಕ್ಷರು : ಕುಮರುಲ್ ಇಸ್ಲಾಂ ಅವರದ್ದು ಹಾರಸ್ಕೋಪ್ ಇದೆಯಾ ಎಂದು ಕೇಳುತ್ತಿದ್ದೇನೆ.

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ : ಮಾನ್ಯ ಅಧ್ಯಕ್ಷರೇ, ಸುಪ್ರೀಂ ಕೋರ್ಟಿನ ಕ್ಲಿಯರ್ ಆದಂತಹ ಒಂದು ಜಡ್ಜ್‌ಮೆಂಟ್ ಇದೆ. ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಹೋಗಿ ಆ ಮನುಷ್ಯ ಡೇಟ್ ಆಫ್ ಬರ್ತ್‌ನ್ನು ಆಲ್ಟ್ರೇಶನ್ ಮಾಡಿಸಿಕೊಂಡು ಬಂದಿದ್ದಾನೆ. Even though there is a clear verdict by the Supreme Court. ಆಲ್ಟ್ರೇಶನ್ಸ್ ಮತ್ತೇ ಏನಾದರೂ ಇದಿದ್ದರೆ ಅದರ ಬಗ್ಗೆ ಕ್ಲಿಯರ್ ವೆರಿಡಿಕ್ಟ್ ಇದೆ.

ನಾನು ದಯವಿಟ್ಟು ಅದನ್ನು ಓದಿಬಿಡುತ್ತೇನೆ. ಯಾವ ಕೇಸಿನಲ್ಲಿ ಎಂದು ಹೇಳಿದರೆ ಜಸ್ಟೀಸ್ ಅನಂದ್ ಅವರು ಕೊಟ್ಟಿರತಕ್ಕಂಥ ಒಂದು ಡಿಸಿಷನ್ಸ್ ಇದೆ, ಆಲ್ಟ್ರೇಶನ್ ಆಫ್ ಡೇಟ್ ಆಫ್ ಬರ್ತ್ ಬಗ್ಗೆ. ಯಾವ ರೀತಿ ಆರ್ಡರ್ ಕೊಡುತ್ತಾರೆ ಅಂದರೆ.

"The Respondent joins the Government service in the Ministry of Defence in class-IV post.."

ಶ್ರೀ ಡಿ. ಮಂಜುನಾಥ್ : ತಾವು ಯಾವುದು ಓದುತ್ತಿದ್ದೀರಿ ಅದು ನನಗೆ ಗೊತ್ತು. ಅದರೆ ಅವರು ಇದೇ ಡೇಟ್ ಆಫ್ ಬರ್ತ್ ಎಂದು ಕೋರ್ಟಿನಲ್ಲಿ ಒಂದು ಡಿಕ್ರಿ ತೆಗೆದುಕೊಂಡಿದ್ದಾರೆ. ಅದರ ಪ್ರಕಾರ ಅವರು ಮುಂದುವರಿಯುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ಅವರು ಹೇಳುತ್ತಿರುವುದು ಏನೆಂದರೆ ಡಿಕ್ರಿ ತೆಗೆದುಕೊಂಡಿರತಕ್ಕಂಥ ವಿಚಾರ ಅದಕ್ಕೆ ಡಾಕ್ಯುಮೆಂಟ್ಸ್ ಇರುತ್ತದೆ ಅದರ ಪ್ರಶ್ನೆ ಬೇರೆ. ಅವರು ಇನ್ನೊಂದು ಸುಪ್ರೀಂ ಕೋರ್ಟಿನ ಜಡ್ಜ್‌ಮೆಂಟ್‌ನ್ನು ಕ್ವೋಟ್ ಮಾಡುತ್ತಿದ್ದಾರೆ. ಈ ಚೇಂಜ್ ಆಫ್ ಡೇಟ್ ಆಫ್ ಬರ್ತ್ ಇದೆಯಲ್ಲ ಆ ವಿಚಾರದಲ್ಲಿ what exactly the guiding factor should be there in each of the case ಎನ್ನತಕ್ಕಂಥ ವಿಷಯದಲ್ಲಿ ಒಂದು ಜಡ್ಜ್‌ಮೆಂಟ್ ಇದೆ ಎಂದು ಆ ಜಡ್ಜ್‌ಮೆಂಟ್‌ನ್ನು ಓದುತ್ತಿದ್ದಾರೆ. ಕೇಳೋಣ ಅದು ಏನು ಇದೆ ಅಂತ. Let us hear that.

ಶ್ರೀ ಜೆ.ಎಚ್. ಪಟೇಲ್ : ಮಾನ್ಯ ರೆಡ್ಡಿಯವರು this is a particular case pertaining to the Vice-Chancellor of the Gulbarga University. He is continuing under the court order. ಅವರದ್ದು ಯಾವುದೋ ಒಂದು ಡೇಟ್ ಆಫ್ ಬರ್ತ್‌ದ್ದು ಡಿಸ್‌ಪ್ಯೂಟ್ ಇತ್ತು. ಅದು ಪತ್ರಿಕೆ'ಳಲ್ಲಿ ಕೂಡ ಬಂದಿತ್ತು. ಪಬ್ಲಿಕ್ ಕಾಂಟ್ರವರ್ಸಿ ಕೂಡ ಆಯಿತು. But the court has ordered to continue him. ಅಂದ್ರೆ ನೀವು ಕೇಸ್ ಹೇಳುವುದು ಡೇಟ್ ಆಫ್ ಬರ್ತ್ ಅಥವಾ ಯಾರಾದ್ದಾದರೂ ಸರ್ವೀಸ್ ಕಂಟಿನಿಟಿ ಬಗ್ಗೆ ಯಾವುದೋ ಕೇಸ್‌ಇದು. ಆದರೆ ಈ ಪರ್ಟಿಕ್ಯೂಲರ್ ಕೇಸ್‌ನಲ್ಲಿ this Vice-Chancellor has been continued in his post under a court order.

Sri G.V. SRIRAMA REDDY : Yes, I am telling the same thing. I will come to that point. ಡೇಟ್ ಆಫ್ ಬರ್ತ್ ಮೇಲೆ ಕಂಟಿನ್ಯೂ ಅಗಲಿ ಎಂದು ಕೋರ್ಟ್ ಆರ್ಡರ್ ಕೊಟ್ಟಿಲ್ಲ. ಡೇಟ್ ಆಫ್ ಬರ್ತ್‌ನ್ನು ಚೇಂಜ್ ಮಾಡಲಿಕ್ಕೆ ತುಮಕೂರು ಮುನ್ಸೀಫ್ ಕೋರ್ಟ್‌ನಲ್ಲಿ ಆತ ಡೇಟ್ ಆಫ್ ಬರ್ತ್‌ನ್ನು ಚೇಂಜ್ ಮಾಡಿಸಿಕೊಂಡಿದ್ದಾನೆ. ಅದರ ಬಗ್ಗೆ ಹೈಕೋರ್ಟಿನಲ್ಲಿ ಒಂದು ಪಿಟಿಶನ್ ನಡೆಯುತ್ತಿದೆ. ಅದು ನನಗೆ ಗೊತ್ತು. ಡೇಟ್ ಆಪ್ ಬರ್ತ್‌ನ್ನು ಆಲ್ಟ್ರೇಶನ್ ಮಾಡಲಿಕ್ಕೆ ಇರತಕ್ಕಂಥ ಪ್ರಿಸಿಡೆಂಟ್ಸ್ ಅಂಡ್ ಕಂಡೀಶನ್ಸ್ ಏನು ಎಂದು ಹೇಳಿ ಸುಪ್ರೀಂ ಕೋರ್ಟ್ ಕೊಟ್ಟಿರತಕ್ಕಂಥ ಜಡ್ಜ್‌ಮೆಂಟನ್ನು ನಾನು ಓದುತ್ತಿದ್ದೇನೆ. I am not stating the case law. I am not telling that he has not taken the order from the court. I am telling as to what should be the criteria to alter the date of birth which has not been considered by the Department or the Government. The Government servant after entry into service acquires the right to continue till the age of his retirement.

Sri J.H. PATEL : Sir, here the hon. Member has got every right to throw light on certain legal aspects when the person is continued in the post. However,now we are discussing about the present Vice-Chancellor of university in our State who is continued under the court order. If the hon. Member has got valid legal point, I do not mind going to court to remove him. However, he is continuing under court order. you are stating something to the House.

Sri G.V. SRIRAMA REDDY : I am not stating something.

ಶ್ರೀ ಎಸ್. ಬಂಗಾರಪ್ಪ : ನಿಮ್ಮ ಆರ್ಡರ್‌ನ್ನು ಅವರು ಡಿಸ್‌ಪ್ಯೂಟ್ ಮಾಡುತ್ತಿಲ್ಲ. ಅವರು ಏನು ಹೇಳುತ್ತಿದ್ದಾರೆ ಅಂದರೆ ಸುಪ್ರೀಂ ಕೋರ್ಟಿನ ಜಡ್ಜ್‌ಮೆಂಟ್ ಇದೆ. I am not telling that there is no decree passed by the court of law. I am not disputing. ಎಂದು ಅವರು ಹೇಳುತ್ತಿದ್ದಾರೆ. ಆದರೆ ಅವರು ಚೇಂಜ್ ಆಫ್ ಡೇಟ್ ಅಫ್ ಬರ್ತ್ ಇದೆಯಲ್ಲ ಅದರ ಬಗ್ಗೆ what exactly the direction given by the supreme Court

ಅದನ್ನು ಪ್ರಿನ್ಸಿಪಲ್ ಆಗಿ ಹೇಳುತ್ತಿದ್ದಾರೆ. Letd us hear that. ಅವರು ಅದನ್ನು ಓದುವುದೇ ತಪ್ಪು ಅಂದರೆ ಹೇಗೆ?

Sri J.H. PATEL : we should not go under the impression that there is Vice-chancellor in a University now...

ಶ್ರೀ ಎಸ್. ಬಂಗಾರಪ್ಪ : ಅದರ ಬಗ್ಗೆ ಅವರು ಹೇಳುತ್ತಿಲ್ಲ. Why are you coming to that conclusion? Let us hear what he says.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಈಗ ಜಡ್ಜ್‌ಮೆಂಟ್ ಅಂತೂ ಆಗಿದೆ. ಇಲ್ಲಿ ಅದನ್ನು ಚರ್ಚೆ ಮಾಡಿದರೆ ಕೋರ್ಟಿನ ಮೇಲೆ ಪರಿಣಾಮ ಆಗುತ್ತದೆ ಎನ್ನುವ ಪ್ರಶ್ನೆ ಬರುವುದಿಲ್ಲ. ಈಗ ಜಡ್ಜ್‌ಮೆಂಟ್ ಆಗಿದೆ ಅದನ್ನು ನೀವು ಒಪ್ಪಿಕೊಂಡಿದ್ದೀರಿ. ಆದರೆ ಅವರು ಹೇಳುವುದು ಎಂತಹ ಸರ್‌ಕಮ್‌ಸ್ಟೆನ್ಸ್‌ಸ್‌ನಲ್ಲಿ ಮತ್ತು ಯಾವ ಕ್ರೈಟೀರಿಯಾ ಇರಬೇಕಾಗಿತ್ತು ಜಡ್ಜಮೆಂಟ್‌ಕೊಡುವುದಕ್ಕೆ ಅದನ್ನು ಅವರು ಯಾವ ರೀತಿಯಾಗಿ ಫಾಲೋ ಮಾಡಿದ್ದಾರೆ ಎನ್ನತಕ್ಕಂಥದ್ದರ ಬಗ್ಗೆ ಹೇಳುತ್ತಾರೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಅಧ್ಯಕ್ಷರೇ, ಸುಪ್ರೀಂ ಕೋರ್ಟ್ ಆರ್ಡರ್ ಈ ರೀತಿ ಇದೆ ಆದರೆ ಅಪೀಲ್ ಏಕೆ ಹೋಗಲಿಲ್ಲ ಎನ್ನುವುದರ ಬಗ್ಗೆ ನಾನು ಗಮನ ಸೆಳೆಯುತ್ತಿದ್ದೇನೆ. ಸರ್ಕಾರ ಅಪೀಲ್ ಹೋಗದೇ ಇದ್ದರೆ ಹೋಗುವ ಅವಶ್ಯಕತೆ ಇದೆ. ಎಂದು ಅನಿಸುತ್ತದೆ ದಯವಿಟ್ಟು ನೋಡಿ.

Sri. S. BANGARAPPA : Thank you lady member.

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ : ಮಾನ್ಯ ಅಧ್ಯಕ್ಷರೇ ನಾನು ಇಷ್ಟೇ ಹೇಳತಕ್ಕಂಥಾದ್ದು ಕೋರ್ಟ್ ಇವರನ್ನು ವೈಸ್ ಚಾನ್ಸಲರ್ ಆಗಿ ಕಂಟಿನ್ಯೂ ಮಾಡಿ ಎಂದು ಆರ್ಡರ್ ಮಾಡಿ ಡಿಕ್ರಿ ಮಾಡಿದೆಯೇ? ಅವರು ತುಮಕೂರು ಕೋರ್ಟಿನಲ್ಲಿ ಡೇಟ್ ಆಫ್ ಬರ್ತ್‌ನ್ನು ಆಲ್ಟ್ರೇಶನ್ ಮಾಡಿಸಿರುವುದು. ನನ್ನ ಹತ್ತಿರ ಇದೆ ಅ ಜಡ್ಜ್‌ಮೆಂಟ್. ಅದಕ್ಕೆ ಸುಪ್ರೀಂ ಕೋರ್ಟ್ ಏನು ಹೇಳುತ್ತದೆ ಎಂದರೆ.

'A Government servant, after entry into service, acquires the right to continue in service till the age of retirement, as fixed by the State in exercise of its powers regulating conditions of service, unless the services are dispensed

with on other grounds contained in the relevant service rules after following the procedure prescribed therein. The date of birth entered in the service records of a civil servant is, thus of utmost importance for the reason that the right to continue in service stands decided by its entry in the service record. a Government servant who has declared his age at the initial stage of the emoloyment is, of course, not precluded from making a request later on for correcting his age. It is open to a civil servant to claim correction of his date of birth, if he is in possession of irrefutable proof relating to his date of birth as different from the one earlier recorded and even if there is no period of limitation prescribed for seeking correction of date of birth, the Government servant must do so without any unreasonable delay. In the absence of any provision in the rules for correction of date of birth, the general principle of refusing relief on grounds of laches or stale claims, is generally applied to by the courts and tribunals. It is none theless competent for the Government to fix a time limit, in the service rules after which no application for corection of date of birth of a Government servant can be entertained."

This is what I am telling.

ಶ್ರೀ ಡಿ. ಮಂಜುನಾಥ್ : ಅವರು ಹೇಳುವುದೇನೆಂದರೆ, ಸರ್ಕಾರಿ ಸಿಬ್ಬಂದಿ ಬಗ್ಗೆ ಹೇಳುವುದು, ಇಲ್ಲೇನಾಗಿದೆ ಎಂದರೆ, ಈಗ ಫೆಬ್ರವರಿ ತಿಂಗಳಿಗೆ 65 ವರ್ಷವಾಗಿ ಆಮೇಲೆ ಅವರು ರಿಟೈರಾಗುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರ ಪಾಯಿಂಟ್ ಏನು ಎಂದರೆ ಲಕ್ಷಾಂತರ ವಿದ್ಯಾರ್ಥಿಗಳಿಗೆ ಮೇಲ್ಪಂಕ್ತಿಯಾಗಬೇಕಾದ ಉಪಕುಲಪತಿಯೊಬ್ಬ ಹುಟ್ಟಿದ ತಾರೀಖಿನ ವ್ಯತ್ಯಾಸವಾಗಿ ಸರ್ವೀಸ್‌ನಲ್ಲಿ ಮುಂದುವರಿಯುತ್ತಿದ್ದರೆ ಸುಪ್ರೀಂ ಕೋರ್ಟಿಗೆ ತಾವು ಮೇಲ್ಮನವಿ ಸಲ್ಲಿಸಬೇಕಲ್ಲವೆ? ದೊಡ್ಡ ಉನ್ನತ ಹುದ್ದೆಯಲ್ಲಿರುವವರು ವ್ಯತ್ಯಾಸ ಮಾಡಿಕೊಂಡು ಹಾಗೆ ಮುಂದುವರೆದರೆ ನೀವೊಂದು ರೀತಿ ರಕ್ಷಣೆ ಕೊಡುತ್ತಿದ್ದೀರೇನೋ ಎಂಬ ಭಾವನೆ ಬರುವುದಿಲ್ಲವೇ? ಆ ಕಡೆ ತಾವು ಈಗಲಾದರೂ ಪರಿಶೀಲನೆ ಮಾಡಿ ಗಮನ ಕೊಡಿ.

ಶ್ರೀ ಡಿ. ಮಂಜುನಾಥ್ : ತಾವು ರಕ್ಷಣೆ ಕೊಡುತ್ತಿಲ್ಲ, ಅಲ್ಲೇನಾಗಿದೆ ಎಂದರೆ, ಕೆಲವರ ವಾದವೆಂದರೆ ಅವರು ಆಗಸ್ಟ್‌ನಲ್ಲಿ ರಿಟೈರಾಗಬೇಕಾಗಿತ್ತು ಈಗ ಫೆಬ್ರವರಿಯಲ್ಲಿ ರಿಟೈರಾಗುತ್ತಾರೆಂಬ ಪ್ರಶ್ನೆಯಷ್ಟೇ ಇರುವುದು.

ಅಧ್ಯಕ್ಷರು : ಈಗ necessary parties and respondents ಯಾರ್‍ಯಾರು ಆ ಕೇಸಿನಲ್ಲಿ, ಅವರು ಹೇಳುವುದು Government should have volunteered to get itself impleaded as a necessary respondent. I am not an Advocate. It is only a question of common sense.

Sri D. MANJUNATH : Government is not the respondent. ಸರ್ಕಾರ ರೆಸ್ಪಾಂಡೆಂಟೇ ಅಲ್ಲ.

ಅಧ್ಯಕ್ಷರು : ಇಂಪ್ಲೀಡ್ ಮಾಡಿಸಿಕೊಳ್ಳಬೇಕು ನೀವು ಇಂಪ್ಲೀಡಿಂಗ್ ಪಿಟಿಶನ್ ಹಾಕಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಈ ಚರ್ಚೆಯಾಗುವಾಗ ನನಗೆ ಸ್ವಲ್ಪ ಆಶ್ಚರ್ಯವಾಗುತ್ತದೆ ಏಕೆಂದರೆ, ಹುಟ್ಟಿದ ತಾರೀಖನ್ನು ಬದಲಾಯಿಸುವ ಅಧಿಕಾರ ಕೋರ್ಟಿಗಿದೆ. There is an Act. According to that Act, he must have filed a petition and making necessary parties. He has obtained a duly competent decree. We can't question the decision of the Munsiff Court in this House. If There is any grievance, revision petition can be filed ಜಡ್ಜ್‌ಮೆಂಟ್ ಒಂದು ವೇಳೆ ಸುಪ್ರೀಂ ಕೋರ್ಟಿದು ಇದ್ದರೆ right course of action is ರಿವಿಜನ್ ಒಂದು ವೇಳೆ ಯಾರಾದರೂ ಹಾಕಿದ್ದರೆ ಆ ಕೋರ್ಟಿನಲ್ಲಿ ಸುಪ್ರೀಂ ಕೋರ್ಟಿನ ಜಡ್ಜ್‌ಮೆಂಟನ್ನು ಕ್ವೋಟ್ ಮಾಡಬಹುದು. ಆದರೆ ಇಲ್ಲಿ questioning the Decree in this House, I don't think it is relevant.

ಅಧ್ಯಕ್ಷರು : ಸನ್ಮಾನ್ಯ ಸದಸ್ಯರು ಮುನ್ಸೀಫ್ ಕೋರ್ಟಿನಲ್ಲಿ ಮಾಡಿರುವ ಡಿಕ್ರಿ ಆರ್ಡರನ್ನು ಪ್ರಶ್ನಿಸಿಲ್ಲ, ಅವರು ಸರ್ಕಾರಕ್ಕೆ ಸೂಕ್ತ ಸಲಹೆ ಏನು ಕೊಡುತ್ತಿದ್ದಾರೆಂದರೆ ಉಪಕುಲಪತಿಯಾಗಿರುವ ಒಬ್ಬರು ತಮ್ಮ ಹುಟ್ಟಿದ ತಾರೀಖನ್ನು ಸರಿಮಾಡಿಕೊಳ್ಳುವ ನೆಪದಲ್ಲಿ ಅಗತ್ಯಕ್ಕಿಂತ ಹೆಚ್ಚು ದಿವಸ ಸೇವೆಯಲ್ಲಿ ಮುಂದುವರೆಯಲು ತಂತ್ರ ಹೂಡಿದ್ದಾರೆ ಎಂಬ ಆಪಾದನೆಯನ್ನು ಪರೋಕ್ಷವಾಗಿ ಮಾಡುತ್ತಾ ಸರ್ಕಾರದವರು ಇದರ ಬಗ್ಗೆ ಎಚ್ಚರಿಕೆ ವಹಿಸಬೇಕಾಗಿತ್ತು, ಸುಪ್ರೀಂ ಕೋರ್ಟಿನ ಗೈಡ್‌ಲೈನ್ಸ್ ಹೀಗಿದೆ. Why did he not seek the remedy at an earlior stage and whyt only now? The hon'ble member did not put it in so many words. Government should have been vigilant.

ಶ್ರೀ ಡಿ. [illegible] ರು ಬಂದಿದ್ದರೆ ನಾವೇನಾದರೂ ಮಾಡಬಹುದು [illegible] ಇನ್ನೊ[illegible]ಗೆ ಮನವಿ ಮಾಡಿಕೊಳ್ಳುತ್ತೇನೆ. ಹೈಕೋರ್ಟಿನಲ್ಲಿ ಯಾರೋ ಒಬ್ಬರು ಹಾಕಿರುವ ಕೇಸ್ ಅಲ್ಲಿ ಪೆಂಡಿಂಗಿದೆ ನಮಗೆ ಆ ಕಂಟೆಂಟ್ಸ್ ಗೊತ್ತಿಲ್ಲ

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ : ಹೈಕೋರ್ಟಿನಲ್ಲಿ ಪೆಂಡಿಂಗಿರುವುದು ನಿಜ. ಆದರೆ ಮಧ್ಯಾವಧಿ ಆಜ್ಞೆ ಹೈಕೋರ್ಟ್ ಪಾಸ್ ಮಾಡಿದೆ he should not take any decision on policy matters. ತುಮಕೂರು ಕೋರ್ಟಿನಲ್ಲಿ ಕರ್ನಾಟಕ ಸರ್ಕಾರದ ಮುಖ್ಯಕಾರ್ಯದರ್ಶಿಗಳನ್ನು ಪಾರ್ಟಿ ಮಾಡಿದ್ದಾರೆ, ಡಿಕ್ರಿಯಲ್ಲ, ಹುಟ್ಟಿದ ತಾರೀಖಿನ ಕರೆಕ್ಷನ್‌ಗೆ ಕೊಟ್ಟಿರುವುದು Government Chief Secretary has not played a correct role. ಮಾನ್ಯ ಅಧ್ಯಕ್ಷರೇ ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ ಅದನ್ನು ಡಿಫೆಂಡ್ ಮಾಡಬೇಕೆಂದರೆ ಮಾಡಿ ನನ್ನ ತಕರಾರೇನೂ ಇಲ್ಲ.

Sri. J.H. PATEL : I am making it very clear in this House that we are not going to protect any person, who according to you, has misled or has taken the court order as against the spirit of the Supreme Court judgement which you are now trying to. ಹಾಗೇನಾದರೂ ಮಾಡಿದ್ದರೆ ಆ ಪಾಯಿಂಟಿನ ಮೇಲೆ ಕೋರ್ಟ್ ರಿಸರ್ವ್ ಮಾಡಬೇಕೇ ಹೊರತು ನಾವಿಲ್ಲಿ ನಿರ್ಣಯ ಮಾಡುವುದಲ್ಲ.

Sri G.V. SRIRAMA REDDY : I am not demanding for a resolution in this House. I am bringing this malady to the notice of the Government. If you are sincere enough take further action. ಮಾನ್ಯ ಅಧ್ಯಕ್ಷರೆ, ಇಷ್ಟು ಶಿಕ್ಷಣ ಇಲಾಖೆ ಬಗ್ಗೆ ತಮ್ಮ ಮುಂದೆ ಹೇಳಿ ಇನ್ನು ಕಾರ್ಮಿಕ ಇಲಾಖೆ ಬಗ್ಗೆ ಕೆಲವು ವಿಷಯಗಳನ್ನು ಹೇಳುತ್ತೇನೆ. ಇಲ್ಲೊಂದು ಕಾರ್ಮಿಕ ಇಲಾಖೆ ಇದೆ, ಆದರೆ ಇದು ಮಾಲೀಕರ ಇಲಾಖೆ. ಈ ಇಲಾಖೆ ಯಾವತ್ತೂ ಕಾರ್ಮಿಕರ ಹಿತರಕ್ಷಣೆಯನ್ನಂತೂ ಮಾಡುವುದಿಲ್ಲ. ಬರೀ ಮಾಲೀಕರ ಹಿತರಕ್ಷಣೆ ಮಾಡಲಿಕ್ಕೆ ಇದು ಇರುವುದು. ಯಾರಾದರೂ ಕಾರ್ಖಾನೆ ಮಾಲೀಕರು ಬಂದರೆ ನಮ್ಮ ಸಚಿವರ ಹತ್ತಿರ ಬೇಗ ಇಂಟರ್‌ವ್ಯೂ ಸಿಕ್ಕಿ ಬಿಡುತ್ತದೆ, ಅದೇ ಕಾರ್ಮಿಕರು ಬಂದರೆ ಸಿಗುವುದಿಲ್ಲ. ಇದಕ್ಕೊಂದು ಉದಾಹರಣೆ ಹೇಳುತ್ತೇನೆ : ನಿನ್ನೆ ಇಲ್ಲಿ ಅಸಂಘಟಿತ ಕಾರ್ಮಿಕರ ಬಗ್ಗೆ ಚರ್ಚೆಯಾಗಿದೆ, ಮತ್ತೆ ಅದರ ಬಗ್ಗೆ ನಾನು ಹೇಳಲು ಹೋಗುವುದಿಲ್ಲ. ಬೀಡಿ ಕಾರ್ಮಿಕರ ಬಗ್ಗೆ ನಾನು ಇಲ್ಲಿ ಪ್ರಾರಂಭ ಮಾಡಿದೆ. ಬೀಡಿ ಕಾರ್ಮಿಕರಿಗಾಗಿ ಇವತ್ತಿಗೂ ಇವರು Minimum wage advisory Board ಅನ್ನು ಕಾನ್‌ಸ್ಟಿಟ್ಯೂಟ್ ಮಾಡಲೇ ಇಲ್ಲ. ಪಾಪ ಅವರಿಗೆ ಏನು ಕಷ್ಟವಿದೆಯೆಂದು ಗೊತ್ತಿಲ್ಲ ನನಗೆ. ಮತ್ತೆ ಬೀಡಿದು labour establishment ಬಗ್ಗೆ ನಾನು ಒಂದು ಮಾಹಿತಿ ಕೊಡುತ್ತೇನೆ, ಅದು ಸಚಿವರಿಗೆ ಗೊತ್ತಿದೆಯೋ ಇಲ್ಲವೋ. ಈ ಬೀಡಿ ಕಟ್ಟುವ ಕೇಂದ್ರಗಳಲ್ಲಿ ಲೈಸೆನಸ್ಡ್ ಎಷ್ಟಿವೆ, ಅನ್‌ಲೈಸೆನಸ್ಡ್ ಎಷ್ಟಿವೆ ಎಂದು ಕಾರ್ಮಿಕ ಸಚಿವರು ಉತ್ತರ ಹೇಳುವುದಾರೆ ಬಹಳ ಸಂತೋಷ. ಬಹುಶಃ ಅವರಿಗೆ ಗೊತಿಲ್ಲವೆಂದು ನನಗನ್ನಿಸುತ್ತದೆ. ಅವರಿಗೆ ಗೊತ್ತಿದ್ದರೆ ಹೇಳಲಿ.

ಈ unlicensed beedi units, unlicensed ಏಕಾಗುತ್ತವೆ ನಮ್ಮ ದೇಶದಲ್ಲಿ ಅಂದರೆ due to unholy nexus between the labour department and central sales tax departmentಲೈಸೆನ್ಸ್ ಕೊಡದೆ ಇವತ್ತು ಅನಧಿಕೃತವಾಗಿ ಲೈಸೆನ್ಸಿಲ್ಲದೆ ಬೀಡಿ ಕಟ್ಟಿಸುತ್ತಿದ್ದಾರೆ ಮಾಲೀಕರು. ಆದರಿಂದ ಟ್ಯಾಕ್ಸ್ ಬರುತ್ತಿಲ್ಲ. ಇವತ್ತು ನಾನು ಒಂದೇ ಲೆಕ್ಕವನ್ನು ಹೇಳುತ್ತಿದ್ದೇನೆ, ಸೆಂಟ್ರಲ್ ಸೇಲ್ಸ್ ಟ್ಯಾಕ್ಸ್‌ನವರು ಕಾರ್ಮಿಕ ಇಲಾಖೆಯವರು ಲೈಸೆನ್ಸ್ ಕೊಟ್ಟಿದ್ದಿದ್ದರೆ ಆ ಪ್ರಕಾರ ಸರಿಯಾದ ಟ್ಯಾಕ್ಸ್ ವಸೂಲಿ ಮಾಡಿದರೆ ಒಂದು ವರ್ಷಕ್ಕೆ 1690 ಕೋಟಿ ರೂಪಾಯಿ ಟ್ಯಾಕ್ಸ್ ಬರುತ್ತದೆ. ಅದರಲ್ಲಿ ನಮ್ಮ ಸ್ಟೇಟ್ ಶೇರೂ ಇದೆ. ಆದರೆ ನಮಗೆ ಇವತ್ತು ಸಿಗುತ್ತಿರುವುದು ಸೆಂಟ್ರಲ್‌ದು ಸ್ಟೇಟ್‌ದು ಎರಡೂ ಸೇರಿ 100 ಕೋಟಿ ಮಾತ್ರ ಏಕೆ? ಲೈಸೆನ್ಸ್ ಎಷ್ಟು ಕೊಟ್ಟಿದ್ದಾರೆ ಎಂದು ಇವರಿಗೆ ಗೊತ್ತಿಲ್ಲ, ಇವರೂ ಅವರೂ ಶಾಮೀಲಾಗಿ ಲೈಸೆನ್ಸ್ ಕೊಡುವುದಿಲ್ಲ, ತೆರಿಗೆವಂಚನೆಯಾಗುತ್ತದೆ. ಹಾಗಾಗಿ ಅದರಿಂದ ಇವರಿಗೆ ಸಿಗುತ್ತಿರುವುದು both for central and State it is only 100 crores. ಅದರಲ್ಲಿ ಸ್ಟೇಟ್‌ಗೆ ಸಿಗುವುದು 20 ರಿಂದ 30 ಕೋಟಿ ಏಕೆ ಸ್ವಾಮಿ? ಮಾಲೀಕರಿಗೂ ಇವರಿಗೂ ಸಂಬಂಧ ಇದೆಯೇ ಏನೋ ನನಗೆ ಗೊತ್ತಿಲ್ಲ. ಅವರಿಗೆ ಏಕೆ ಲೈಸೆನ್ಸ್ ಕೊಡಬಾರದು? ಲೈಸೆನ್ಸ್‌ಕೊಟ್ಟು ಏಕೆ ಟ್ಯಾಕ್ಸ್ ವಸೂಲು ಮಾಡಬಾರದು? 1690 ಕೋಟಿ ಹಣ ಅದು ಅಷ್ಟಿಷ್ಟಲ್ಲ, ಕಾರ್ಮಿಕ ಇಲಾಖೆಯವರು ಏನು ಮಾಡುತ್ತಿದ್ದೀರಿ? ಅದರ ಜೊತೆಗೆ ಬಾಲಕಾರ್ಮಿಕರು.

ಶ್ರೀ ಕಾಗೋಡು ತಿಮ್ಮಪ್ಪ : ಯಾರ್‍ಯಾರು ಎಷ್ಟೆಷ್ಟು ಕೊಡಬೇಕಾಗುತ್ತದೆಂದು ಡಿಕ್ಲೇರ್ ಮಾಡಿದರೆ ಮಾಲೀಕರು ಭವಿಷ್ಯನಿಧಿ ಕೊಡಬೇಕಾಗುತ್ತದೆ ಆದ್ದರಿಂದ ಅವರು ಡಿಕ್ಲೇರ್ ಮಾಡುವುದಿಲ್ಲ ಏಕೆಂದರೆ ಇದನ್ನು ನಾನು ನಮ್ಮೂರಲ್ಲೇ ಸರ್ವೆ ಮಾಡಿಸಿನೋಡಿದಾಗ ಸರ್ಕಾರಿ ದಾಖಲೆ ಪ್ರಕಾರ 50 ಜನರಿದ್ದಾರೆ, ಸರ್ವೆ ಮಾಡಿದಾಗ 1 ಸಾವಿರ ಜನ ಸಿಗುತ್ತಾರೆ. ಇದನ್ನೆಲ್ಲ ಮನೆ ಕಟ್ಟುವ ಸ್ಕೀಂ ಬಂದಾಗ ಕಂಡುಹಿಡಿಯುತ್ತಾರೆ. ಹಾಗಾಗಿ ಅವರು ಹೇಳುತ್ತಿರುವುದು ಬರೀ ತೆರಿಗೆ ದೃಷ್ಟಿಯಿಂದಲ್ಲ

ಬೀಡಿಕಟ್ಟುವ ಕಾರ್ಮಿಕರು ಯಾರಿದ್ದಾರೆ ಅವರನ್ನು ರಿಜಿಸ್ಟರ್ಡ್ ಲೈಸೆನ್ಸ್‌ಕೆಳಗೆ ಮಾಡುವುದರಿಂದ ಅವರಿಗೆ ಬೇರೆ ಎಲ್ಲಾ ಸಹಾಯಗಳೂ ಸಿಗುತ್ತವೆ.

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ : ಇದನ್ನು ಏಕೆ ಮಾಡಲಿಲ್ಲವೆಂದು ಕಾರ್ಮಿಕ ಸಚಿವರು ಸ್ಪಷ್ಟವಾಗಿ ಉತ್ತರ ಹೇಳಬೇಕಾಗುತ್ತದೆ. ಅದರ ಜೊತೆಗೆ ಇನ್ನೊಂದು ವಿಚಿತ್ರವೇನೆಂದರೆ, ಬಾಲಕಾರ್ಮಿಕರ ಬಗ್ಗೆ ನಮಗೆ ಕನಿಷ್ಟ ಮಾನವೀಯ ದೃಷ್ಟಿ ಇರಬೇಕು. ನರಸಿಂಹರಾವ್ ಸರ್ಕಾರ ಇವತ್ತು ಅನೌನ್ಸ್ ಮಾಡಿದೆ. 850 ಕೋಟಿ ರೂಪಾಯಿಗಳನ್ನು ಬಾಲಕಾರ್ಮಿಕರ ಹಾಸ್ಟೆಲ್ ಪ್ರಾರಂಭ ಮಾಡಲೆಂದು ಕೊಡುತ್ತಿದ್ದೇವೆಂದು ಅದರ ಪ್ರಕಾರ ಇವರು ಒಂದು ಯೋಜನೆ ಹಾಕಿದ್ದಾರೆ. ಒಂದೊಂದು ಜಿಲ್ಲೆಯಲ್ಲಿ ಎರಡು ಸಾವಿರ ಬಾಲಕಾರ್ಮಿಕರಿಗೆ ಹಾಸ್ಟೆಲ್ ಕೊಡುತ್ತೇವೆಯೆಂದು We are going to spend Rs. 500/- on each child labour ಎಂದು ಇದೆ.

ಯಾರ ಮೂಲಕ ಗೊತ್ತೇ ಅಧ್ಯಕ್ಷರೇ, ಇವರು ಅದನ್ನು ಇಂಪ್ಲಿಮೆಂಟ್ ಮಾಡಲು ಹೋಗುತ್ತಿರುವುದು ಸ್ವಯಂಸೇವಾಸಂಘಟನೆಗಳ ಮೂಲಕ. ಇದರ ಕಾರ್ಮಿಕ ಇಲಾಖೆ ಏನಾಗಿದೆ? ಸರ್ಕಾರದ ಹಲವಾರು ಏಜನ್ಸೀಸ್ ಇವೆ ಅವುಗಳ ಮೂಲಕ ಇಂಪ್ಲಿಮೆಂಟ್ ಮಾಡಿಸದೆ ಸ್ವಯಂಸೇವಾ ಸಂಸ್ಥೆಗಳ ಮೂಲಕ ಕೋಟ್ಯಂತರ ರೂಪಾಯಿಗಳನ್ನು ಕೊಡಲಿಕ್ಕೆ ಯೋಜನೆ ಹಾಕಿದ್ದಾರೆ, ನಮಗೆ ಗೊತ್ತಿದೆ ಈ ದೇಶದಲ್ಲಿ ಸ್ವಯಂಸೇವಾಸಂಸ್ಥೆಗಳು ಎಷ್ಟು ಕೋಟಿ ಹಣ ನುಂಗಿಹಾಕಿವೆ ಎಂದು, ಸ್ಪಷ್ಟವಾಗಿ, ಬಾಲಕಾರ್ಮಿಕರನ್ನು ಯಾವುದೇ ಕೆಲಸಕ್ಕೆ ಸೇರಿಸಿಕೊಳ್ಳಬಾರದು ಎಂದು ಕಾನೂನಿದೆ. ಇವತ್ತು ಹೋಟೆಲಲ್ಲಿ ಗ್ಲಾಸ್ ತೊಳೆಯುವ ಸೈಕಲ್‌ಶಾಪಿನಲ್ಲಿ ಪಂಪ್, ಹಳ್ಳಿಗಳಲ್ಲಿ ದನ ಮೇಯಿಸುತ್ತಿರುವ ಓದುತ್ತಿರುವ ಮಕ್ಕಳನ್ನು ಆ ಸ್ಥಿತಿಗೆ ತಂದಿದ್ದಾರೆ. There is a Rule in the Government ಬಾಲಕಾರ್ಮಿಕರನ್ನು ನೇಮಿಸಿಕೊಳ್ಳಬಾರದು ಎಂದು. ಇವತ್ತು ಅದನ್ನು ಒಪ್ಪುತ್ತಿದ್ದೇವೆ. ಅದನ್ನು ವಿವರಿಸಲು ನನಗೆ ಟೈಮಿಲ್ಲ, ನಾನು ಇವರಿಗೆ ಹೇಳುವುದು ಏನೆಂದರೆ ಆ ಮಾನವೀಯ ದೃಷ್ಟಿಯಾದರೂ ಇರಬೇಕು, ಹಣ ಎಷ್ಟು ಕೊಡುತ್ತಾರೆ ಅದನ್ನು ಯಾರು ತಿಂದು ಹಾಕುತ್ತಾರೆ ಎಂದು ನನಗೆ ಗೊತ್ತಿದೆ ಕನಿಷ್ಟ ಮಾನವೀಯ ದೃಷ್ಟಿಯಿಂದಾದರೂ ಅವರಿಗೊಂದು ಕಾರ್ಯಕ್ರಮ ರೂಪಿಸಿ ಬಾಲಕಾರ್ಮಿಕರನ್ನು ಇಟ್ಟುಕೊಳ್ಳಬಾರದೆಂದು ಕಾನೂನೇನಿದೆ ಅದಕ್ಕೆ ನಿಷೇಧ ತನ್ನಿ. ಮಾನ್ಯ ಅಧ್ಯಕ್ಷರೇ ಇನ್ನೊಂದು ವಿಷಯ. ಸಂಘಟಿತ ಕಾರ್ಮಿಕರ ಪ್ರಶ್ನೆ ಒಂದು ಕಡೆ, ಅಸಂಘಟಿತ ಕಾರ್ಮಿಕರ ದಾರುಣಸ್ಥಿತಿ ಇನ್ನೊಂದು ಕಡೆ. ಅಸಂಘಟಿತ ಕಾರ್ಮಿಕರಿಗೆ ಕನಿಷ್ಟವೇತನ ನಿಗದಿ ಮಾಡುವ ಕಾನೂನುಗಳನ್ನು ಎಲ್ಲ ರಂಗದಲ್ಲೂ ಪರಿಣಾಮಕಾರಿಯಾಗಿ ಜಾರಿ ಮಡುವಂತಹ ಕ್ರಮವನ್ನು ಈ ಸರ್ಕಾರವಾದರೂ ಮಾಡಬೇಕೆಂಬುದು ನನ್ನ ಅಭಿಪ್ರಾಯ. ಇವತ್ತಿಗೂ ಕೂಡ ಅದನ್ನು ಜಾರಿ ಮಾಡುತ್ತಿಲ್ಲ. ಇನ್ನು ಸಂಘಟಿತ ಕಾರ್ಮಿಕರ ವಿಷಯಕ್ಕೆ ಬಂದರೆ. ಸಂಘಟಿತ ಕಾರ್ಮಿಕರಿಗೆ It is the fundamental right of the working class to have a Trade Union, ಆದರೆ ಇವತ್ತು ಏನಾಗುತ್ತಿದೆಯೆಂದರೆ, ಕಾರ್ಮಿಕ ಇಲಾಖೆ ಪೋಲಿಸಿನವರ ಶಾಮಿಲಿನಿಂದಾಗಿ ಆ ಕಾರ್ಮಿಕ ಸಂಘಗಳನ್ನು ಒಡೆಯಲಿಕ್ಕೆ ಪೋಲಿಸರನ್ನು ಛೂ ಬಿಡುತ್ತಿದ್ದಾರೆ. ಕಾರ್ಮಿಕರು ಸ್ಟ್ರೈಕ್ ಮಾಡಿದರೆ ಪೋಲಿಸರನ್ನು ಅಲ್ಲಿಗೆ ಕರೆದೊಯ್ಯುತ್ತಾರೆ ಅವರ ಮೇಲೆ ಲಾಠಿಚಾರ್ಜ್ ಮಾಡಿಸಿ ಕೇಸ್‌ಗಳನ್ನು ಹಾಕಿಸುತ್ತಾರೆ ಅವರನ್ನು ಬಂಧಿಸುತ್ತಾರೆ. What business this Police is having to interfere in the Trade Union Movement.

ಕ್ರಿಮಿನಲ್ ಆಕ್ಟ್ ಆದರೆ ಅವರು ಇಂಟರ್‌ಫಿಯರ್ ಆಗಬಹುದು. ಸ್ಟ್ರೈಕ್ ಮಾಡಿದರೆ ಪೋಲೀಸರನ್ನು ಕರೆದುಕೊಂಡುಹೋಗುವುದು, ಧರಣಿ ಕುಳಿತರೆ ಪೋಲಿಸರನ್ನು ಕರೆದುಕೊಂಡು ಹೋಗುವುದು ನಾನೇ ಸ್ವತಃ ಕಾರ್ಮಿಕ ಸಚಿವರ ಗಮನಕ್ಕೆ ತಂದಿದ್ದೇನೆ, ಇವತ್ತು ಸಾಮ್ರಾಟ್ ಅಶೋಕ್ ಎಂಬ ದೊಡ್ಡ ಗಾರ್ಮೆಂಟ್ಸ್ ಎಕ್ಸ್‌ಪೋರ್ಟ್, 6

ಸಾವಿರ ಹೆಣ್ಣು ಮಕ್ಕಳು ಕೆಲಸ ಮಾಡುತ್ತಾರೆ, 3 ತಿಂಗಳಿಂದ ಸಂಬಳ ಕೊಟ್ಟಿಲ್ಲ ಬೀದಿಪಾಲಾಗಿದ್ದಾರೆ. ಅವರು ಹೋರಾಟ ಮಾಡಿದರೆ ಗೂಂಡಾಗಳಿಂದ ಹೊಡೆಸುತ್ತಾರೆ. ನಾನೂ ಕಾರ್ಮಿಕ ಸಚಿವರ ಗಮನಕ್ಕೆ ತಂದೆ. ಆದರೂ ಇದನ್ನು ಯಾರೂ ಕಿವಿಗೆ ಹಾಕಿಕೊಳ್ಳುತ್ತಿಲ್ಲ, ಕೆಲವುಂ ಹೆಂಗಸರನ್ನೇ ಕರೆದುಕೊಂಡು ಹೋಗುತ್ತಾರೆ ಅವರಿಗೆ ಹೊಡೆಸಲಿಕ್ಕೆ ಲಾರಿ ಬಸ್‌ಗಳಲ್ಲಿ ಕರೆದೊಯ್ದು ಸ್ಟ್ರೈಕ್ ಮಾಡುವ ಹೆಂಗಸರ ಮೇಲೆ ಧಾಳಿ ಮಾಡಿಸುವುದು ಈ ಸ್ಥಿತಿಗೆ ಬಂದಿದೆ, ಕಾರ್ಮಿಕ ಇಲಾಖೆ ಏಕೆ ಬೇಕು? ಇದು ಮಾಲೀಕ ಇಲಾಖೆಯಾಗಿ ಮಾರ್ಪಾಡಾಗಿ ಬಿಡಲಿ, ಇವತ್ತು ಸಾಮ್ರಾಟ್ ಅಶೋಕ್ ಕಾರ್ಖಾನೆ ಮಾಲೀಕರ ಬಹಿರಂಗವಾಗಿ ಹೇಳುತ್ತಾನೆ, ಲೇಬರ್ ಕಮೀಶನರ್ ಆರ್ಡರನ್ನು ನಾನು ಒಬೇ ಮಾಡುವುದಿಲ್ಲ ನನಗೆ ಕಾರ್ಮಿಕ ಕಾರ್ಯದರ್ಶಿ, ಕಾರ್ಮಿಕ ಮಂತ್ರಿ ನನಗಿದ್ದಾರೆ ನೀವೇನು ಮಾಡುತ್ತೀರೋ ಮಾಡಿಕೋಹೋಗಿ ಎನ್ನುತ್ತಾರೆ. ಕೋಟ್ಯಂತರ ರೂಪಾಯಿ ಲೂಟಿ ಮಾಡುತ್ತಿದ್ದಾನೆ, ತೆರಿಗೆ ವಂಚನೆ ಮಾಡುತ್ತಾನೆ, ಸಂಬಳ ಕೊಡುವುದಿಲ್ಲ. ಇಷ್ಟಾದರೂ ಕಾರ್ಮಿಕ ಇಲಾಖೆಯು ಏನು ಮಾಡುತ್ತಿದೆ? ಯಾರಿಗೋಸ್ಕರ ಕಾರ್ಮಿಕ ಇಲಾಖೆ ಇರಬೇಕು? ಆದ್ದರಿಂದ ಇವತ್ತು ಆ ಕಾರ್ಮಿಕರು ಬೀಗಿಗಿಳಿಯುವ ಪರಿಸ್ಥಿತಿ ಇದೆ. ಇವತ್ತು 3 ಗಂಟೆಗೆ ಅವರು ಕಾರ್ಮಿಕ ಸಚಿವರನ್ನು ನೋಡಲಿಕ್ಕೆ ಬರುತ್ತಾರೆ.

ನಾನು ಸರ್ಕಾರವನ್ನು ಒತ್ತಾಯ ಮಾಡುವುದಿಷ್ಟೆ : ಕಾರ್ಮಿಕ ಇಲಾಖೆ ನಿಜವಾದ ಕಾರ್ಮಿಕ ಇಲಾಖೆಯಾಗ ಬೇಕಾದರೆ ಅದು ಕಾರ್ಮಿಕರ ಪರವಾಗಿಯೇ ಇರಬೇಕು. ಯಾವುದೇ ಸಂದರ್ಭದಲ್ಲಿ ಮಾಲೀಕರ ಪರವಾಗಿ ಮಾತನಾಡಬಾರದು. ಮಾಲೀಕರ ಪರವಾಗಿ ಇಂಡಸ್ಟ್ರೀಸ್ ಇಲಾಖೆ, ದೇಶಪಾಂಡೆಯವರು ಅವರ ಪರವಾಗಿ ಇದ್ದಾರೆ, ಇವರ್‍ಯಾಕೆ ಹೋಗಬೇಕು ಅದಕ್ಕೆ. ಕಾರ್ಮಿಕ ಸಚಿವರ ಚೇಂಬರ್‌ನಲ್ಲಿ ಯಾವಾಗಲೂ ಮಾಲೀಕರೆ, ಕಾರ್ಮಿಕರು ಬಂದದ್ದೇ ಇರುವುದಿಲ್ಲ, ಅವರನ್ನು ನೋಡಲಿಕ್ಕೂ ಟೈಮಿರುವುದಿಲ್ಲ ಪಾಪ ಆದ್ದರಿಂದ ಈ ವಾತಾವರಣ ತಪ್ಪಿಸಬೇಕು, ಬೆಂಗಳೂರಿನಲ್ಲಿ ಅಸಂಘಟಿತ ಕಾರ್ಮಿಕರು 10 ಲಕ್ಷ ಜನ ಇದ್ದು ಲಕ್ಷಾಂತರ ಹೆಂಗಸರಿದ್ದಾರೆ, ಅವರಿಗೆ ರಕ್ಷಣೆ ಕೊಡಲು ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಅಯನೂರು ಮಂಜುನಾಥ್ (ಹೊಸನಗರ) : ಮಾನ್ಯ ಅಧ್ಯಕ್ಷರೇ, ಪ್ರಾರಂಭದಲ್ಲಿ ಒಂದು ಸಂಗತಿ ಬಗ್ಗೆ ಸದನದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅದೆಂದರೆ, ತಾವು ನೇಮಕ ಮಾಡಿದ ಕಾರ್ಮಿಕ ಮತ್ತು ಸಮಾಜ ಕಲ್ಯಾಣ ವಿಷಯ ಸಮಿತಿಗೆ ನಾನು ಸದಸ್ಯನಾಗಿದ್ದೆ, ಅದರಿಂದ ಕೊಟ್ಟ ವರದಿ ಸೂಕ್ತವಾಗಿಲ್ಲ ಸಮಂಜಸವಾಗಿಲ್ಲ ನಮ್ಮ ಅಭಿಪ್ರಾಯಗಳನ್ನು ಅಲ್ಲಿ ಪರಿಗಣನೆಗೆ ತೆಗೆದುಕೊಳ್ಳಲಿಲ್ಲವೆಂಬ ಕಾರಣಕ್ಕಾಗಿ ಡಿಸೆಂಟ್ ನೋಟನ್ನು ನಾನು ಕೊಟ್ಟಿದ್ದೇನೆ. ಭಾಗಶಃ ಅದಕ್ಕೆ ನಾನು ಪಾರ್ಟಿ ಅಲ್ಲ, I will not be a Party to that report ಅನ್ನುವುದನ್ನು ಸಬ್‌ಮಿಟ್ ಮಾಡಿ ಮುಂದುವರೆಯಲು ಬಯಸುತ್ತೇನೆ. ರಾಜ್ಯದೊಳಗೆ 1995ರ ಮೇವರೆಗೆ 1.35 ಕೋಟಿ ಕಾರ್ಮಿಕರಿದ್ದಾರೆ. ಕೃಷಿ ಕಾರ್ಮಿಕರು 58 ಲಕ್ಷ ಜನ ಇದ್ದಾರೆ, ಹೌಸ್‌ಹೋಲ್ಡ್ ಇಂಡಸ್ಟ್ರಿಯಲ್ಲಿ ಕೆಲಸ ಮಾಡುವವರು 5.80 ಲಕ್ಷ, ಇತರೆ ಕಾರ್ಮಿಕರು 68.44 ಲಕ್ಷ ಇದ್ದಾರೆ. ಅಂದರೆ ನಮ್ಮ ಜನಸಂಖ್ಯೆಯ ಶೇಕಡ 26ಕ್ಕಿಂತ ಜಾಸ್ತಿ ಇರುವ ಬಹಳ ದೊಡ್ಡ ಜನಸಮುದಾಯದ ಬಗ್ಗೆ ನಮ್ಮ ಸರ್ಕಾರ ಯಾವ ರೀತಿ ಕಾರ್ಯನಿರ್ವಹಣೆ ಮಾಡುತ್ತಿದೆ? ಯಾವ ರೀತಿ ಅನ್ಯಾಯ ಆ ದೊಡ್ಡ ಜನಸಮುದಾಯಕ್ಕೆ ಮಾಡುತ್ತಿದ್ದಾರೆಂಬುದನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಬಯಸುತ್ತೇನೆ. ಒಂದನೆಯದು, ನಮ್ಮ ವರದಿಯಲ್ಲಿ ಹೇಳಿದ ಹಾಗೆ ಸುಮಾರು 28 ಕಾಯಿದೆಗಳಿವೆ, ಅವುಗಳಲ್ಲಿ ಕಾರ್ಮಿಕರಿಗೆ ಲಾಭವಾಗುವ ಒಂದಾದರೂ ಕಾಯಿದೆ ಇದೆಯಾ ಎಂದು

ನೋಡಿದರೆ ಉದಾಹರಣೆಗೆ ಕಾರ್ಮಿಕರು ದುಡಿದ ಹಣ ಪಡೆದುಕೊಳ್ಳಲು ಎಷ್ಟು ಕಷ್ಟ ಪಡಬೇಕೆಂದರೆ ಸರ್ಕಾರ ತನ್ನ ಬಜೆಟ್‌ನಲ್ಲಿ ಕೊಡುವಂಥದಿರಲಿ Payment of Wages ಆಕ್ಟ್‌ನೊಳಗೆ ನಾವು ತೆಗೆದುಕೊಳ್ಳುವ ಸಂಬಳ ಪಡೆಯಬೇಕಾದರೆ ಏನೇನು ಪರದಾಟ ಮಾಡಬೇಕು. ನಾವು ದುಡಿದ ವೇತನ ಯಾರಾದರೂ ಮಾಲೀಕ ಕೊಡದೇ ಇದ್ದರೆ ಅದನ್ನು ತೆಗೆದುಕೊಳ್ಳಲು ಸರಳ ನೇರವಾದ ಪರಿಸ್ಥಿತಿ ಇವತ್ತಿನ ಕಾನೂನಿಗಿಲ್ಲ. ನಮಗೆ ಅವನು ಕೊಡಲಿಲ್ಲವೆಂದರೆ ನಾವು ಐಡಿ ಆಕ್ಟಿನ ಸೆಕ್ಷನ್ 33 ಸಿ (2) ಪ್ರಕಾರ ಲೇಬರ್ ಕೋರ್ಟ್‌ಗೆ ಹೋಗಬೇಕು. ಅಲ್ಲಿ ನಾಲ್ಕಾರು ವರ್ಷ ಕೇಸ್ ಎಳೆದಾಗಿದ ಮೇಲೆ ಜಜ್‌ಮೆಂಟಾದರೆ ಅದನ್ನು ಇಂಪ್ಲಿಮೆಂಟ್ ಮಾಡುವ ಅಧಿಕಾರ ಕಾರ್ಮಿಕ ನ್ಯಾಯಾಲಯಕ್ಕಿಲ್ಲ.

1.00 ಪಿ.ಎಂ.

ಆ ನಂತರ ಜಿಲ್ಲಾಧಿಕಾರಿಗಳಿಗೆ ಲ್ಯಾಂಡ್ ಅರಿಯರ್‍ಸ್ ರೂಪದೊಳಗೆ ರೆವಿನ್ಯೂ ಕಲೆಕ್ಟ್ ಮಾಡಿ ಎಂದು ಆಜ್ಞೆ ಮಾಡುತ್ತಾರೆ. ಅದನ್ನು ಕಲೆಕ್ಟ್ ಮಾಡಿಸಿಕೊಡುವಂತಹ ಅಧಿಕಾರ ಅವರಿಗೆ ಕೊಟ್ಟಿದ್ದೀರಲ್ಲ ಇಡೀ ರಾಜ್ಯದಲ್ಲಿ ಎಷ್ಟು ರೆವಿನ್ಯೂ ವಸೂಲಾತಿ ಮಾಡಿಕೊಟ್ಟಿದ್ದೀರಿ ನೀವು. ಅದೇ ರೀತಿ ಎಲ್ಲಾ ಕಾಯಿದೆಗಳಲ್ಲೂ ಪೇಮೆಂಟ್ ಆಫ್ ಬೋನಸ್‌ನಲ್ಲಿ ಇರಲಿ, ಪೇಮೆಂಟ್ ಆಂಫ್ ವೇಜಸ್‌ನಲ್ಲಿ ಇರಲಿ, ಗ್ರಾಚ್ಯುಯಿಟಿಯಲ್ಲಿ ಇರಲಿ ಯಾವುದೇ ಕಾಯಿದೆಗಳಲ್ಲೂ ಇವತ್ತು ಕಾರ್ಮಿಕರಿಗೆ ನೇರವಾದಂತಹ ಸೌಲಭ್ಯ ಸಿಗುತ್ತಿಲ್ಲ. ಕಾರ್ಮಿಕರ ಕಾಯಿದೆಯೊಳಗೆ ಏನು ನ್ಯೂನತೆಗಳು ಇದ್ದಾವೆ ಇದರಲ್ಲಿರತಕ್ಕಂತಹ ನ್ಯೂನತೆಗಳನ್ನು ಪರಿಹಾರ ಮಾಡುವ ಕೆಲಸ ಇದುವರೆಗೆ ಆಗಲಿಲ್ಲ. ಕಾರ್ಮಿಕ ಕಾಯಿದೆಗಳಿಗೆ ಹಲ್ಲು ಇಲ್ಲ, ಉಗುರುಗಳು ಇಲ್ಲ, ಅವು ಕೇವಲ ಮ್ಯಾನೇಜ್‌ಮೆಂಟಿಗೆ ಇಟ್ಟಿರತಕ್ಕಂತಹ ಪೇಪರ್ ಟೈಗರ್‍ಸ್. Just to satisfy the community of labour ನಿಮಗೆ ಒಂದು ಕಾನೂನು ಇದೆ ಎಂದು ತೋರಿಸತಕ್ಕಂತಹ ಒಂದು ಕಾಗದದ ಹುಲಿಗಳು.

ಅದನ್ನು ಏನಾದರೂ ತಿದ್ದುಪಡಿ ಮಾಡಿದ್ದಾರೆಯೇ ಎಂದು ನೋಡಿದರೆ ಇದುವರೆಗೂ ಮಾಡಿಲ್ಲ. ತಿದ್ದುಪಡಿ ಮಾಡುವವರೆಗೂ ಕೂಡ ಗಮನ ಸೆಳೆದಿಲ್ಲ. ಕಳೆದ ಸಾರಿಯ ಸಬ್ಜೆಕ್ಟ್ ಸಮಿತಿ ಕೊಟ್ಟಂತಹ ಶಿಫಾರಸ್ಸನ್ನು ಜಾರಿಗೆ ತರಲಿಲ್ಲ. ಈ ಸಲ ಇರತಕ್ಕಂತಹ ಸಮಿತಿಯವರು ಅದರಲ್ಲಿ ಸ್ಪಷ್ಟವಾಗಿ ನಮೂದನೆ ಮಾಡಿದ್ದಾರೆ. 14 ಶಿಫಾರಸ್ಸನ್ನು ಮಾಡಿದ್ದೆವು ಸರಕಾರ ಅದ್ಯಾವುದನ್ನೂ ಜಾರಿಗೆ ತರಲಿಲ್ಲ. ವಿಷಯ ಸಮಿತಿ ರೆಕಮೆಂಡ್ ಮಾಡಿದಂತಹ ಒಂದೇ ಒಂದು ಶಿಫಾರಸ್ಸನ್ನು ಕೂಡ ಸರಕಾರ ಜಾರಿ ಮಾಡಲಿಲ್ಲವೆಂದಾದರೆ ಇಷ್ಟು ದೊಡ್ಡ ಪ್ರಮಾಣದಲ್ಲಿರತಕ್ಕಂತಹ 1 ಕೋಟಿ 35 ಲಕ್ಷ ಜನರಿಗಾಗತಕ್ಕಂತಹ ಅನ್ಯಾಯಗಳ ಬಗ್ಗೆ ಸರಕಾರ ಕಣ್ಣು ಹಾಕುವುದಿಲ್ಲ ಎನ್ನುವುದು ದಾಖಲೆಗಳ ಮೂಲಕ ಸ್ಥಿರ ಪಟ್ಟಿದೆ. ಇಂತಹ ಇಲಾಖೆ ಯಾರ ಸಲುವಾಗಿ ಇದೆ ಅಂದರೆ now, in the name of labour, it is maintained for Management ಕಾರ್ಮಿಕರ ಹೆಸರಿನಲ್ಲಿ ಮಾಲೀಕರಿಗೋಸ್ಕರ ಮಾಲೀಕರ ಅನುಕೂಲಕ್ಕೋಸ್ಕರ ಇಟ್ಟಿರುವಂತಹ ಒಂದು ಇಲಾಖೆ ಎಂದರೆ ಅದು ಕಾರ್ಮಿಕ ಇಲಾಖೆ.

ಇಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿರತಕ್ಕಂತಹ ಕಾರ್ಮಿಕರಿಗೆ ನಾನಾ ಇಲಾಖೆಗಳನ್ನು ಮಾಡಿ ಹೊಡೆದು ಹಾಕಿದ್ದೀರಿ. ಅದರಲ್ಲಿ ಕಾರ್ಮಿಕರ ಕಲ್ಯಾಣ ನಿಧಿ ಎನ್ನುವುದು ಒಂದು ಲೇಬರ್ ವೆಲ್‌ಫೇರ್ ಬೋರ್ಡ್ ಎನ್ನುವುದು ಮತ್ತೊಂದು. ಲೇಬರ್ ವೆಲ್‌ಫೇರ್ ಬೋರ್ಡಿನಲ್ಲಿ ಏನು ನಡೆಯುತ್ತಿದೆ ಎಂದು ವಿಚಾರ ಮಾಡಬೇಕಾಗುತ್ತದೆ. ಲೇಬರ್ ವೆಲ್ ಫೇರ್ ಬೋರ್ಡಿನೊಳಗೆ ಕಾರ್ಮಿಕರ ಹಣ ಇರುವಂಥಾದ್ದು ಕೇವಲ ಮಾಲೀಕರ ಹಣ ಅಲ್ಲ, ಒಬ್ಬೊಬ್ಬ ಕಾರ್ಮಿಕ ಕಲ್ಯಾಣ ತಲಾ ಮೂರು

ರೂಪಾಯಿಯಂತೆ ಕೊಡುತ್ತಾನೆ ಸರಕಾರ 6 ರೂಪಾಯಿ ಕೊಡುತ್ತದೆ. ಅಂದರೆ 60 ಲಕ್ಷಕ್ಕಿಂತ ಜಾಸ್ತಿಯಾಗುತ್ತದೆ. ಇಲ್ಲಿ ನಡೆಯತಕ್ಕಂತಹ ವ್ಯವಹಾರ ಹೇಗೆ ನಡೆಯುತ್ತದೆಂಬುದನ್ನು ತಾವು ನೋಡಬೇಕು. ಕಾರ್ಮಿಕ ಕಲ್ಯಾಣ ಇಲಾಖೆಯಲ್ಲಿ ನಡೆದಂತಹ ಭ್ರಷ್ಟಾಚಾರ ಮತ್ತೆ ಎಲ್ಲೂ ನಡೆಯಲಿಲ್ಲ. ಕೋಟ್ಯಾಂತರ ರೂಪಾಯಿ ಹಣವನ್ನು ಅಲ್ಲಿರತಕ್ಕಂತಹ ಕಾರ್ಮಿಕ ಆಯುಕ್ತರು ಹೊಡೆದುಕೊಂಡು ತಿಂದರು. ಕಾರ್ಮಿಕ ಕಲ್ಯಾಣ ಕಲ್ಯಾಣ ನಿಧಿಯನ್ನು ದುರುಪಯೋಗ ಮಾಡಿಕೊಂಡರು. ಹಿಂದಿನ ಸರಕಾರದೊಳಗೆ ಅದರ ಬಗ್ಗೆ ಸಾಕಷ್ಟು ಗಲಾಟೆ ಗಲಭೆಯಾಯಿತು. ತನಿಖೆಗೆ ಆಜ್ಞೆ ಮಾಡಿದರು. ಆ ತನಿಖೆಗೆ ಆಜ್ಞೆ ಮಾಡುವ ಸಂದರ್ಭದಲ್ಲಿ ಯಾವ್ಯಾವುದು ಆ ತನಿಖೆಯಲ್ಲಿ ಇದ್ದಾವೆಂದರೆ ರೋಸ್ಟರ್ ಸಿಸ್ಟಂ ಅನ್ನು ಮೈನ್‌ಟೇನ್ ಮಾಡಲಿಲ್ಲ. ಅಪಾಯಿಂಟ್‌ಮೆಂಟ್ ಮಾಡುವಾಗ ಹಣ ತೆಗೆದುಕೊಂಡು ನೇರವಾಗಿ ಯಾವೂದೂ ಮುಚ್ಚು ಮರೆ ಇಲ್ಲದೆ ತಾತ್ಕಾಲಿಕವಾಗಿ 6-6 ತಿಂಗಳಿಗೆ ಎಂದು ಯಾರನ್ನು ನೇಮಕ ಮಾಡಿದ್ದರೋ ಅವರ ಹತ್ತಿರ ಹಣ ತೆಗೆದುಕೊಂಡು ಪರ್ಮನೆಂಟ್ ಮಾಡಿದರು. ಅದರಲ್ಲಿ ರೋಸ್ಟರ್ ಸಿಸ್ಟಂ ಮೈನ್‌ಟೇನ್ ಆಗಿಲ್ಲ.

ಎಸ್.ಸಿ.ಎಸ್.ಟಿ. ಹಿಂದುಳಿದಂತಹವರಿಗೆ ಸ್ಪಷ್ಟವಾದಂತಹ ಅನ್ಯಾಯ ಮಾಡಿದ್ದಾರೆ. ಸಾಕಷ್ಟು ದುರುಪಯೋಗವಾಗಿದೆ. ಡಾಕ್ಯುಮೆಂಟ್ ಅನ್ನು ತಿದ್ದಿದರು, ಪ್ರೊಸೀಡಿಂಗ್ಸ್ ಅನ್ನು ಟ್ಯಾಂಪರ್ ಮಾಡತಕ್ಕಂತಹ ಒಬ್ಬ ವೆಲ್‌ಫೇರ್ ಕಮೀಷನರ್ he has committed a crime ಇಂತಹ ಅಪರಾಧವನ್ನು ಮಾಡಿದಂತಹ ಆ ಲೇಬರ್ ವೆಲ್‌ಫೇರ್ ಬೋರ್ಡಿನ ಕಮೀಷನರ್ ಅನ್ನು ಉಳಿಸಿ ಕೊಳ್ಳುವುದಕ್ಕೆ ಬಹಶಷ್ಟು ಸರ್ಕಸ್ ನಡೆದಿದೆ. ಮಾನ್ಯ ವೀರಪ್ಪ ಮೊಯಿಲಿಯವರು ಇದ್ದಾಗ ಅದು ಬಂತು. ವೀರಪ್ಪ ಮೊಯಿಲಿಯವರು ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವುದರ ಬದಲು ಲೋಕಾಯುಕ್ತಕ್ಕೆ ರೆಫರ್ ಮಾಡಿದರು. ಲೋಕಾಯುಕ್ತಕ್ಕೆ ರೆಫರ್ ಮಾಡಿದಾಗ ಸರಕಾರ ಬದಲಾವಣೆ ಆಯಿತು. ಆ ಬದಲಾವಣೆಯಾದ ಸಂದರ್ಭದಲ್ಲಿ ಪುನಃ ಈ ರೀತಿ ಆಗುತ್ತದೆಂದು ಕಾರ್ಮಿಕರ ಮಂತ್ರಿಗಳ ಗಮನಕ್ಕೋಸ್ಕರ ಆ ಕಡತ ಹೋದರೆ 8ನೇ ತಿಂಗಳ ತನಕ ಆ ಫೈಲ್ ಎಲ್ಲಿ ಇತ್ತು ಅಂದರೆ ನಮ್ಮ ಕಾರ್ಮಿಕ ಮಂತ್ರಿಗಳ ಖುರ್ಚಿ ಸ್ವಲ್ಪ ತಗ್ಗಿತ್ತು ಅದನ್ನು ಎತ್ತರ ಮಾಡಿಕೊಳ್ಳುವುದಕ್ಕೆ ಅದರ ಮೇಲೆ ಆ ಫೈಲ್ ಹಾಕಿಕೊಂಡು ಕುಳಿತುಕೊಂಡರು ಎತ್ತರಕ್ಕೆ.

ಆ ಕಡತವನ್ನು ಅದುವಿಟ್ಟುಕೊಂಡರು. ಅ ಕಡತ ಎಲ್ಲಿ ಇದೆ ಎಂದು ಕಾರ್ಯದರ್ಶಿಯವರನ್ನು ಕೇಳಿದರೆ ನಾವು ಲೇಬರ್ ಮಂತ್ರಿಗಳಿಗೆ "Resubmitted the file for perusal." ಅನ್ ಫಾರ್ಚ್ಯುನೇಟ್‌ಲಿ ವಾಪಸ್ ಬಂದಿಲ್ಲ ಎಂದು ಇದೇ ಪದವನ್ನು ಅವರು ಉಪಯೋಗಿಸುತ್ತಾರೆ. ನಾವು ಮೇಲಿಂದ ಮೇಲೆ ಕೇಳಿದ್ದೇವೆ ವಾಪಸ್ ಬರಲಿಲ್ಲ, ವೆರಿ ಅನ್‌ಫಾರ್ಚ್ಯುನೇಟ್ ಎಂದು ಕಾರ್ಮಿಕ ಕಾರ್ಯದರ್ಶಿಯವರು ಹೇಳುತ್ತಾರೆ. ಕಾರ್ಮಿಕ ಇಲಾಖೆಯ ಕಾರ್ಯದರ್ಶಿ ಹಿರಿಯ ಐ.ಎ.ಎಸ್. ಅಧಿಕಾರಿ ಒಬ್ಬ ಮಂತ್ರಿಗಳ ಬಗ್ಗೆ ಆ ಕಡತ ಬರೆದಿರುವ ಬಗ್ಗೆ ವೆರಿ ಅನ್ ಫಾರ್ಚ್ಯುನೇಟ್ ಎಂದು ಪದ ಉಪಯೋಗ ಮಾಡುತ್ತಾರೆ. ಅದೇ ಸಂದರ್ಭದೊಳಗೆ ಮಾರನೇ ದಿವಸ ಲೇಬರ್ ವೆಲ್‌ಫೇರ್ ಬೋರ್ಡಿನ ಸಭೆ ಆಗುತ್ತದೆ. ಇಲ್ಲಿ ಕಾರ್ಮಿಕ ಕಾರ್ಯದರ್ಶಿಗಳು ಲೇಬರ್ ಮಂತ್ರಿಗಳ ಹತ್ತಿರ ಕಡತ ಇದೆ ಎಂದು ಹೇಳುತ್ತಾರೆ. ಅಲ್ಲಿ ಮಾರನೇ ದಿವಸ ಕಾರ್ಮಿಕ ಕಲ್ಯಾಣ ಮಂಡಳಿಯ ಆ ಸಭೆಗೆ ಹೋದಾಗ ಮಾನ್ಯ ಮಂತ್ರಿಗಳು ಹೇಳುತ್ತಾರೆ ಆ ಕಡತವನ್ನು ಸಬ್ಜೆಕ್ಟ್ ಸಮಿತಿಗೆ ಕೊಟ್ಟಿದ್ದೇವೆ ಎಂದು. ಇವರು ಹೇಳುತ್ತಾರೆ ಅವರ ಹತ್ತಿರ ಇದೆ ಎಂದು, ಇವರು ಹೇಳುತ್ತಾರೆ ಅವರ ಹತ್ತಿರ ಇದೆ ಎಂದು. ಈ ಕಡತವನ್ನು ಮುಚ್ಚುವುದಕ್ಕೆ ಏಕೆ ಪ್ರಯತ್ನ ಮಾಡಿದರು ಅಂದರೆ ಅಧಿಕೃತವಾಗಿ ಮೇಲುನೋಟಕ್ಕೆ ಸಾಬೀತಾಗುವಂತಹ 40 ಲಕ್ಷ

ರೂಪಾಯಿಯ ಆನ್ ರೆಕಾರ್ಡ್ ಕಾರ್ಮಿಕರ ಬೆವರಿನ, ರಕ್ತದ ವಾಸನೆ ರುಚಿ ನೋಡುವಂತಹ ಪ್ರಯತ್ನ ಮಾಡಿದಂತಹ ಅಧಿಕಾರಿಯನ್ನು ಉಳಿಸುವುದಕ್ಕೋಸ್ಕರ ಈ ಕಡತವನ್ನು ಇಲ್ಲಿ ಇದೆ ಅಲ್ಲಿ ಇದೆ ಎಂಬ ಆಟವನ್ನು ಆಡಿಸಿದರು. ಬೇರೆ ಇಲಾಖೆಗಳಲ್ಲಿ ಭ್ರಷ್ಟಾಚಾರವಾಗಬಹುದು. ಭ್ರಷ್ಟಾಚಾರ ಎಲ್ಲಾ ಇಲಾಖೆಗಳಲ್ಲೂ ಇದೆ ಎಂದು ಸಮರ್ಥನೆ ಮಾಡಿಕೊಳ್ಳಬಹುದು. ಆದರೆ ಬೇರೆ ಇಲಾಖೆಗಳಲ್ಲಿ ಆಗುವಂತಹ ಭ್ರಷ್ಟಾಚಾರ ಬೇರೆ ಕಾರ್ಮಿಕ ಇಲಾಖೆಯಲ್ಲಾಗುವಂತಹ ಭ್ರಷ್ಟಾಚಾರ ಬೇರೆ. ಇಲ್ಲಿ ಭ್ರಷ್ಟಾಚಾರ ಪ್ರಾರಂಭವಾದರೆ ಹಣ ಇಲ್ಲಿ ಕೊಡುವವರು ಯಾರು? ಕಾರ್ಮಿಕರಿಗೆ ಅನ್ಯಾಯ ಮಾಡಲಿಕ್ಕೋಸ್ಕರ ಮಾಲೀಕ ಕೊಡುತ್ತಾನೆ. ಬೇರೆ ಕಡೆ ಭ್ರಷ್ಟಾಚಾರವಾದರೆ ತನ್ನ ಅನುಕೂಲಕ್ಕೋಸ್ಕರ ತಾನೇನೋ ಹಣವನ್ನು ಲಂಚವನ್ನಾಗಿ ಕೊಟ್ಟು ಕೆಲಸ ಮಾಡಿಸಿಕೊಳ್ಳುತ್ತಾನೆ. ಇಲ್ಲಿ ಸಾಮೂಹಿಕ ಒಂದು ರೀತಿಯ ಆರ್ಥಿಕ ಅತ್ಯಾಚಾರ ಸಾಮೂಹಿಕ ಭದ್ರತೆಯಕ ಅತ್ಯಾಚಾರ ಮಾಡಲಿಕ್ಕಾಗಿ ಅವಕಾಶ ಮಾಡಿಕೊಡುವಂತಹ ವ್ಯವಸ್ಥಿತ ಕೆಲಸವನ್ನು ಇದರೊಳಗೆ ಮಾಡಿದೆ. ಅವರ ಬಗ್ಗೆ ಲೋಕಾಯುಕ್ತಕ್ಕೆ ಕಡತ ಹೋದರೆ ಕಾರ್ಮಿಕ ಮಂತ್ರಿಗಳ ಕೈ ಬಿಟ್ಟು ಮುಖ್ಯ ಮಂತ್ರಿಗಳ ಗಮನಕ್ಕೆ ಹೋಗಿ ಬಂದರೆ ಅವನು ಸಸ್ಪಂಡ್ ಆಗಬೇಕು. ಅಂತಹ ವ್ಯಕ್ತಿ ಏನಾದಾರೂ? ಇನ್ನೂ ನಮ್ಮ ಹೊಸ ಸರಕಾರ ಬರುತ್ತಿದ್ದ ಹಾಗೆ ಬಹಳ ದೊಡ್ಡ ಸಾಧಿಸಿದಂತಹ ವ್ಯಕ್ತಿ ಕಾರ್ಮಿಕ ಮಂತ್ರಿಗಳ ಹತ್ತಿರ ಸುಮಾರು 15-20 ದಿವಸಗಳ ಕಾಲ ಪಿ.ಎಸ್. ಆಗಿ ಕೆಲಸ ಮಾಡಿದ. ಅನಧಿಕೃತವಾಗಿ ಕೆಲಸವನ್ನು ಮಾಡುತ್ತಾನೆ. ಅವರಿದ್ದದ್ದು ಎಲ್ಲರಿಗೂ ಗೊತ್ತು. ಕಾರ್ಮಿಕ ಮಂತ್ರಿಗಳಿಗೆ ಎಷ್ಟು ಜನ ಪಿ.ಎಸ್.ಗಳು ಆಗಿದ್ದಾರೆ ಎಂಬುದು ಎಲ್ಲರಿಗೂ ಗೊತ್ತು. ಬಹುಶಃ ನಮ್ಮ ಈ ಸರಕಾರದಲ್ಲಿ ಅಷ್ಟು ಪಿ.ಎಸ್.ಗಳು ಆಗಲೇ ಇಲ್ಲ.

ಶ್ರೀ ಜೆ.ಹೆಚ್. ಪಟೇಲ್ : ಸರಕಾರದ ಮೇಲೆ ಚಾರ್ಜಸ್ ಇದ್ದರೆ ಹೇಳಲಿ, ಇಲ್ಲವೇ ಕಾರ್ಮಿಕ ಮಂತ್ರಿಗಳ ಮೇಲೆ ಹೇಳಲಿ. ಆದರೆ ಅಧಿಕಾರಿಗಳ ಮೇಲೆ ಹೇಳಿದರೆ ಯಾರು ತಮ್ಮನ್ನು ಡಿಫೆಂಡ್ ಮಾಡಿಕೊಳ್ಳುವುದಕ್ಕಾಗುವುದಿಲ್ಲ. ಅವನು ಕೋಟಿಗಟ್ಟಲೆ ಹೊಡೆದಿದ್ದಾನೆ. ಇವನು ಹಣ ಲಕ್ಷಗಟ್ಟಲೆ ಹಣ ಹೊಡೆದಿದ್ದಾನೆಂದು ಹೇಳುವುದು ಸರಿಯಲ್ಲ. ಸ್ಪೆಸಿಫಿಕ್ ಆಗಿ ಯಾವುದಾದರೂ ಅಧಿಕಾರಿ ಬಗ್ಗೆ ಮಾಹಿತಿ ಇದ್ದರೆ ಮಾನ್ಯ ಸದಸ್ಯರು ರೈಟಿಂಗ್‌ನಲ್ಲಿ ಕೊಡಲಿ. ಇಂತಹ ಅಧಿಕಾರಿ ಇಂತಹ ಕಾರಣಕ್ಕೋಸ್ಕರವೆಂದು ಚಾರ್ಜ್ ಮಾಡಲಿ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಅಥವಾ ಅವನನ್ನು ಸಸ್ಪೆಂಡ್ ಮಾಡಬೇಕೋ ಇಲ್ಲವೇ ಲೋಕಾಯುಕ್ತಕ್ಕೆ ಕಳಿಸಬೇಕೋ ಕಳಿಸುತ್ತೇವೆ. ಏನೂ ಇಲ್ಲದೆ ಯಾರು ಇಲ್ಲಿ ತಮ್ಮನ್ನು ತಾವು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಸಾಧ್ಯ ವಿಲ್ಲವೋ ಅವರನ್ನು ಕುರಿತು ಇಂತಹವನು ಹೀಗೆ ಎಂದು ಹೇಳುವುದು ಸರಿಯಲ್ಲ. ಬೇಕಾದರೆ ಮಂತ್ರಿಗಳ ಬಗ್ಗೆ ಹೇಳಲಿ ನಾವು ಉತ್ತರ ಕೊಡುತ್ತೇವೆ.

ಶ್ರೀ ಅಯಾನೂರು ಮಂಜುನಾಥ್ : ನಾನು ಹೇಳುತ್ತಿರುವುದು ಯಾವುದೂ ಅಪ್ರತ್ಯಕ್ಷಿಕವಾಗಿ ಅಲ್ಲ. ಲೆಕ್ಕ ಪರಿಶೋಧಕರು ಆನ್ ರೆಕಾರ್ಡ್ ಹಿಡಿದಂತಹ ಹಣ ಆ ದಾಖಲೆಯನ್ನು ಸರಕಾರವೇ ಇಷ್ಟು ಹಣ ದುರುಪಯೋಗವಾಗಿದೆ ಎಂದು ಆನ್ ರೆಕಾರ್ಡ್ ಕೊಟ್ಟಿರುವಂಥಾದ್ದು. ನಮ್ಮ ಸರಕಾರದ ಇಲಾಖೆಯಿಂದ ಆಡಿಟರ್‌ರವರು ಇಷ್ಟು ಹಣ ದುರುಪಯೋಗವಾಗಿದೆ,ಇಷ್ಟು ಹಣವನ್ನು ಅವರಿಂದ ವಸೂಲಿ ಮಾಡಬೇಕೆಂದು ನಿಶ್ಚಿತವಾಗಿ ಆಜ್ಞೆ ಮಾಡಿದ್ದಾರೆ. ಆ ಕಡತದ ನಂ. ಎಲ್.ಡಿ. 208 ಎಲ್ ಇ ಡಿ 96 ದಿನಾಂಕ 27-12-94. ನಾನು ಹೇಳುತ್ತಿರುವಂಥದ್ದು ಆಪಾದನೆ ಅಲ್ಲ. ಸರಕಾರದಲ್ಲಿ ಸ್ಥಿರಪಟ್ಟಿದೆ. ತಮ್ಮ ಇಲಾಖೆಯವರೇ ಇಲ್ಲಿ ಭ್ರಷ್ಟಾಚಾರವಾಗಿದೆ ಎಂದು ಹೇಳಿದ್ದಾರೆ. ಆಡಿಟ್ ವರದಿ ಕೊಟ್ಟಿದ್ದಾರೆ. ಅದರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ಆ ಕಡತವನ್ನು ಕೆಳಗೆ ಹಾಕಿಕೊಂಡು ತಮ್ಮ ಖುರ್ಚಿಯನ್ನು ಎತ್ತರ ಮಾಡಿಕೊಂಡಿದ್ದಾರೆಯೇ

ಹೊರತು ಬೇರೆ ಇನ್ನೇನೂ ಇಲ್ಲ. ನಾನು ಜವಾಬ್ದಾರಿಯಿಂದ ಹೇಳುತ್ತಿದ್ದೇನೆ. ಅವಶ್ಯಕತೆ ಬಿದ್ದರೆ ಇದರ ಕಾಪಿಯನ್ನು ತಮ್ಮ ಹತ್ತಿರ ಕೊಡುತ್ತೇನೆ.

ಇದು ತಮ್ಮ ಇಲಾಖೆಯಲ್ಲಿ ಇದೆ. ಇದನ್ನು ಮಾನ್ಯ ಅಧ್ಯಕ್ಷರಿಗೆ ಕೊಡುತ್ತೇನೆ. ಈ ಕ್ಷಣದವರೆಗೆ ಕ್ರಮ ತೆಗೆದುಕೊಂಡಿಲ್ಲ. ನಾನು ಏತಕ್ಕೆ ಸಂಕಟಪಟ್ಟು ಈ ಮಾತನ್ನು ಹೇಳುತ್ತಿದ್ದೇನೆಂದರೆ ಕಾರ್ಮಿಕ ಕಲ್ಯಾಣ ನಿಧಿಗೆ ರಾಜ್ಯದಲ್ಲಿರುವ ಸಹಸ್ರಾರು ಜನ ಕಾರ್ಮಿಕರು ತಮ್ಮ ಬೆವರಿನ ದುಡ್ಡಿನಲ್ಲಿ ಕಾಂಟ್ರಿಬ್ಯೂಷನ್ ಕೊಡುತ್ತಿದ್ದಾರೆ. ಸರ್ಕಾರದ ದುಡ್ಡನ್ನು ಅಧಿಕಾರಿಗಳು ಮಜಾ ಮಾಡುತ್ತಿಲ್ಲ, ಕಾರ್ಮಿಕರ ಬೆವರಿನ ದುಡ್ಡಿನಲ್ಲಿ ಮಜಾ ಮಾಡುತ್ತಿದ್ದಾರೆ. ಇದನ್ನು ನಾನು ಗಮನಕ್ಕೆ ತರುತ್ತಿದ್ದೇನೆ. ಅಂಥ ಅಧಿಕಾರಿಗಳನ್ನು ದಯಮಾಡಿ ನೀವು ರಕ್ಷಣೆ ಮಾಡ ಬೇಡಿ ಅಂಥ ಅಧಿಕಾರಿಗಳನ್ನು ಕೂಡಲೇ ಮನೆಗೆ ಕಳುಹಿಸಿ. ಇದು ಆನ್‌ರೆಕಾರ್ಡ್ ರಿಪೋರ್ಟ್‌ನಲ್ಲಿದೆ. ಪ್ರೊಸೀಡಿಂಗ್ಸ್‌ನ್ನು ಟ್ಯಾಂಪರ್ ಮಾಡಿದ್ದಾರೆ. ಯಾರೋ ಒಬ್ಬ ಆರ್ಡಿನರಿ ಗುಮಾಸ್ತ ಒಂದು ರೆಕಾರ್ಡನ್ನು ಟ್ಯಾಂಪರ್ ಮಾಡಿದರೆ ಇಮ್ಮಿಡಿಯೇಟ್‌ಲಿ ಸಸ್ಪೆಂಡ್ ಆಗಿ ಹೋಗುತ್ತಾನೆ. ಇಲ್ಲಿ ಉನ್ನತ ಮಟ್ಟದ ರೆಕಾರ್ಡ್ ಕಾರ್ಮಿಕ ಮಂತ್ರಿಗಳೇ ಅಧ್ಯಕ್ಷತೆ ವಹಿಸುವ ಆ ಸಮಿತಿಯ ದಾಖಲಾತಿಗಳನ್ನು ಟ್ಯಾಂಪರ್ ಮಾಡಿ ಎಕ್ಸ್‌ಟ್ರಾ ಸೇರಿಸುತ್ತಾರೆ ಅನ್‌ಕ್ಷರ್. ಉದಾಹರಣೆಗೆ ಎರಡು, ಮೂರು, ನಾಲ್ಕು ಪೇಜ್ ಎಂದು ಇದ್ದರೆ ನಾಲ್ಕು ಆದ ಮೇಲೆ ನಾಲ್ಕು ಎ, 4 ಬಿ ಎಂದು ತನಗೇ ಬೇಕಾದ ಹಾಗೆ ಮಾಡಿ ಕೊಂಡು ಕೊಟ್ಟಿದ್ದಾರೆ. ನನ್ನ ಸಂಶಯವಿರುವುದು. ಇದು ಸಂಪೂರ್ಣ ತನಿಖೆಯಾಗಬೇಕು. ಮೇಲುನೋಟಕ್ಕೆ 40 ಲಕ್ಷರೂಪಾಯಿ ಸಿಗುತ್ತದೆ. ಇಲ್ಲಿ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ನಡೆದಿದೆ. ಇದರಲ್ಲಿ ಯಾರ್‍ಯಾರ ಪಾಲು ಎಷ್ಟೆಷ್ಟು ಎಂದು ತನಿಖೆಯಾಗಬೇಕು. ಮೂರನೆಯ ಸಂಗತಿ ಎಂದು ಹೇಳಿದರೆ, ಕಾರ್ಮಿಕ ನ್ಯಾಯಾಲಯಗಳ ಬಗ್ಗೆ ಕಾರ್ಮಿಕರ ಬಗ್ಗೆ ದೀನದಲಿತರ ಬಗ್ಗೆ ಇನ್ನೊಂದರ ಬಗ್ಗೆ ಹೇಳುತ್ತೇವೆ. ಆದರೆ ಕಾರ್ಮಿಕ ನ್ಯಾಯಾಲಯಗಳು ಹೇಗೆ ಇವೆ ಎಂದರೆ ಕಾರ್ಮಿಕ ನ್ಯಾಯಾಲಯಗಳಲ್ಲಿ ಜಡ್ಜ್‌ಸ್‌ಗಳನ್ನು ಇನ್‌ಟೈಮ್ ಪೋಸ್ಟ್ ಮಾಡುವುದಿಲ್ಲ. ಬಂದಂಥ ಜಡ್ಜ್‌ಗಳಿಗೆ ಎಂಥ ಪರಿಸ್ಥಿತಿ ಇರುತ್ತದೆ ಎಂದರೆ ಅಲ್ಲಿ ಕೆಲವು ಟ್ರಿಬ್ಯೂನಲ್‌ಗೆ ಸೆಷನ್ ಜಡ್ಜ್ ಕೇಡರ್‌ನವರನ್ನು ಪೋಸ್ಟ್ ಮಾಡುತ್ತೀರಿ. ಆ ಜಡ್ಜ್‌ಗಳ ಪರಿಸ್ಥಿತಿಯೇನು? ಒಂದು ಸೆಂಟರ್ ಮಾಡಿಕೊಂಡು ಮೂರು ನಾಲ್ಕು ಡಿಸ್ಟ್ರಿಕ್ಟ್‌ಗೆ ಜಡ್ಜ್ ಓಡಾಡುತ್ತಾರೆ.

ಈ ಎಲ್ಲಾ ಕಾರ್ಮಿಕರ ಹಣೆಬರಹ ಇರುವ ಆ ಫೈಲ್‌ಗಳನ್ನು ತಾವೇ ಬಸ್ಸಿನ ಮೇಲೆ ಹಾಕಿಕೊಂಡು ಲಗ್ಗೇಜ್ ಹಾಕಿಕೊಂಡ ಹಾಗೆ ಹಾಕಿಕೊಂಡು ತೆಗೆದುಕೊಂಡು ಬರುತ್ತಾರೆ. ಮಳೆಯಲ್ಲಿ ನೆನೆದು ಹಾಳಾದರೆ ಹೋಯಿತು. ಇನ್ನೊಂದು ಹಾಳಾದರೆ ಹೋಯಿತು. ಹಮಾಲಿಗಳು ಇರುವುದಿಲ್ಲ. ಹೆಚ್ಚು ಕಡಿಮೆಯಾದರೆ ಇದೇ ಜಡ್ಜ್‌ಗಳು ತಲೆಯಮೇಲೆ ಇಟ್ಟುಕೊಂಡು ಬರಬೇಕಾಗುತ್ತದೆ. ಅವರುಗಳಿಗೆ ವಾಹನಗಳು ಇಲ್ಲ. ಕೋರ್ಟ್ ನಡೆಸುವುದಕ್ಕೆ ಜಾಗ ಇಲ್ಲ. ಅವರಿಗೆ ಅಟೆಂಡರ್ ಇಲ್ಲ. ಮೊಬೈಲ್ ಕೋರ್ಟಿಗೆ ತಾವು ಕೊಟ್ಟಿದ್ದೀರಿ. ಒಂದೊಂದು ಕೇಸ್ ತಾವು ಅಡ್‌ಜುಡಿಕೇಷನ್ ಮಾಡಬೇಕಾದರೆ ಸರ್ಕಾರದಿಂದ ತಾವು ಹೇಳುತ್ತೀರಿ, within six months it should be disposed ಎಂದು. ಯಾವುದಾದರೂ ಕೇಸ್ within six months dispose ಆಗಿದೆಯೇ? ಹತ್ತತ್ತು ವರ್ಷ, ಹದಿನೈದು ವರ್ಷದಿಂದ ಕಾರ್ಮಿಕರಿಗೆ ನ್ಯಾಯ ಸಿಕ್ಕಿಲ್ಲ. ನ್ಯಾಯ ಸಿಗದಿದ್ದರೆ ಅಂಥ ಕಾರ್ಮಿಕರ ಪರಿಸ್ಥಿತಿ ಅವನು ಉಪವಾಸ ವನವಾಸ ಇರುವ ಅವನ ಸಂಸಾರಗಳ ಬಗ್ಗೆ ಯಾವ ಭರವಸೆ ಇಟ್ಟುಕೊಂಡು ಅವನು ಬದುಕಬೇಕಾಗುತ್ತದೆ? ಲೇಬರ್ ಕೋರ್ಟ್‌ಗಳ ಬಗ್ಗೆ ನಾನು ಹೇಳುವ ಮಾತಿರಲಿ. ಈ ದೇಶದಲ್ಲಿರುವ ಉನ್ನತ ನ್ಯಾಯಾಲಯಗಳು ಕೂಡ ಕಾಮೆಂಟ್ ಮಾಡಿವೆ. ಆ ಕಾಮೆಂಟ್ ಮಾಡಿದ ಮೇಲೂ ಕೂಡ ಯಾವುದೇ ಸರ್ಕಾರಗಳು ಕಾರ್ಮಿಕ

ನ್ಯಾಯಾಲಯಗಳನ್ನು ಸರಿಪಡಿಸುವ ದೃಷ್ಟಿಯಿಂದ ಆ ದಿಕ್ಕಿನಲ್ಲಿ ಕೆಲಸವನ್ನೇ ಮಾಡಲಿಲ್ಲ. ಕರ್ನಾಟಕ ಹೈಕೋರ್ಟ್ Modi Printers V/s. Workmen ಅದರಲ್ಲೆ ಅವರು ಏನು ಹೇಳುತ್ತಾರೆ ಎಂದರೆ, ಜಡ್ಜ್‌ಮೆಂಟ್. ಲೇಬರ್ ಕೋರ್ಟ್‌ಗಳ ಬಗ್ಗೆ ನಡೆಯುವ ಕಾರ್ಯವೈಖರಿಗಳ ಬಗ್ಗೆ.

"Before parting with these cases we have to observe with deep regret that even though more than 10 years have elapsed the workmen have not been able to get any relief."

ಇದನ್ನು ಯಾರು ಹೇಳಿದ್ದುದು ಎಂದರೆ ಕರ್ನಾಟಕ ಹೈಕೋರ್ಟ್. ನಮ್ಮ ಕಾರ್ಮಿಕ ನ್ಯಾಯಾಲಯಗಳ ಬಗ್ಗೆ ಹೇಳಿದಂಥ ಒಂದು ತೀರ್ಪಿನಲ್ಲಿರುವ ಪದಗಳು ಇವು.

"We hope that at least the authorities concerned will take immediate steps to secure the benefit." ಅದೇ ಹೈಕೋರ್ಟ್ ಇನ್ನೊಂದರಲ್ಲಿ ಹೇಳುತ್ತದೆ.

"The menacing problem of the delay in court that has assumed menacing proportions in almost every court could be tackled and solved. Pattern of disposal of cases by Labour Courts and Tribunals : what Wide charges should be made to avoid agonising delay before the Labour Court and Tribunals which are expected to dispose off the cases expeditiously. This is the matter before the Central and State Government to examine in some depth and take steps to remedy the situation."

ಕಾರ್ಮಿಕ ನ್ಯಾಯಾಲಯಗಳ ಬಗ್ಗೆ ಇಂಥವು ನೂರಾರು ಜಡ್ಜ್‌ಮೆಂಟ್‌ಗಳು ಸುಪ್ರೀಂ ಕೋರ್ಟಿನಲ್ಲಿ ಹೈಕೋರ್ಟಿನಲ್ಲಿ ಆಗಿವೆ. ಆದರೂ ಇದರ ಬಗ್ಗೆ ಯಾರೂ ನಿಗ ತೆಗೆದುಕೊಂಡಿಲ್ಲ. ಈಗಲಾದರೂ ಕೂಡ ಕಾರ್ಮಿಕ ನ್ಯಾಯಾಲಯಗಳಲ್ಲಿ ಎಷ್ಟು ಕೇಸ್‌ಗಳು ಪೆಂಡಿಂಗ್ ಇವೆ? ಎಷ್ಟು ಜಡ್ಡ್ಸ್ ಕೊಟ್ಟಿದ್ದೀರಿ? ಜಡ್ಜ್‌ಸ್‌ಗಳು ಹೇಗೆ ಫ್ರೀಕ್ವೆಂಟ್ ಆಗಿ ಬದಲಾವಣೆಯಾಗಿದ್ದಾರೆ ಎಂದು ಹೇಳಿ ಡೇಟ್‌ವೈಸ್ ಪಟ್ಟಿ ಓದಬಲ್ಲೆ. ಆದರೆ ಕೊನೆಗೆ ಮತ್ತೆ ಸಮಯದ ಅಭಾವ ಎಂದು ಹೇಳಿ ಬಿಡುತ್ತಿದ್ದೇನೆ. ಡೇಟ್ ವೈಸ್, ಎರಡೆರಡು, ಮೂರು ಮೂರು ತಿಂಗಳಿಗೆ ಬದಲಾವಣೆ ಯಾದಂಥ ಜಡ್ಜ್‌ಸ್‌ಗಳು ಇದ್ದಾರೆ. ಅವರಿಗೆ ಯಾವ ಫೆಸಿಲಿಟೀಸ್ ಇಲ್ಲ. ಅದೇ ಒಬ್ಬ ಸೆಷನ್ ಜಡ್ಜ್ ಆದರೆ ಮನೆಗೆ ಬಾಗಿಲಿಗೆ ಒಬ್ಬ ಪೋಲೀಸ್, ಹಿಂದೆ ಮುಂದೆ ಓಡಾಡುವುದಕ್ಕೆ ಕಾರು, ಎತ್ತಿಕೊಂಡು ಓಡಾಡುವುದಕ್ಕೆ ಒಂಜು ಡೋಲು ಏನೆಲ್ಲಾ ಕೊಡುತ್ತೀರಿ. ಅದೇ ಸೆಷನ್‌ಜಡ್ಜ್ ಇಲ್ಲಿ ಬಂದರೆ ಕಾರ್ಮಿಕ ನ್ಯಾಯಾಲಯಕ್ಕೆ ಬಂದರೆ ಅವರೂ ಒಬ್ಬ ಕಾರ್ಮಿಕರ ಹಾಗೆ ಇರಬೇಕೇನು? ಅವರು ಒಬ್ಬ ಹಮಾಲರ ರೀತಿಯಲ್ಲಿ ಹೊತ್ತುಕೊಂಡು ಓಡಾಡಬೇಕೇನು ನ್ಯಾಯಾಧೀಶರು. ಅವರಿಗೆ ತಾವು ಏನು ಫೆಸಿಲಿಟೀಸ್ ಕೊಟ್ಟಿದ್ದೀರಿ, ಕಾರ್ಮಿಕರ ನ್ಯಾಯಾಲಯದ ಬಗ್ಗೆ ಕಿಂಚಿತ್ ಗೌರವ ಇರುವುದಾದರೆ.....

ಅಧ್ಯಕ್ಷರು : ಆಯಿತು. ಮುಗಿಸಿಬಿಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಮಂಜುನಾಥ್‌ರವರೇ, ನಾನು ಮಾನ್ಯ ಅಧ್ಯಕ್ಷರು ಹೇಳಿದಂತೆ ನಾಲ್ಕೈದು ಜನರು ಮಾತನಾಡುವುದಕ್ಕೆ ಸಮಯ ನಿಗದಿ ಮಾಡಿದೆ. ಇನ್ನು ಮೂರು ನಾಲ್ಕು ನಿಮಿಷದಲ್ಲಿ ಮುಗಿಸಿದರೆ ಬೇರೆಯವರು ಮಾತನಾಡುವುದಕ್ಕೆ ಅನುಕೂಲವಾಗುತ್ತದೆ. ನಾವು ಸಮಯವನ್ನು ಹಂಚಿಕೊಂಡಿದ್ದೇವೆ. ಅದಕ್ಕೋಸ್ಕರ ಇನ್ನು ನಾಲ್ಕೈದು ನಿಮಿಷದಲ್ಲಿ ತಾವು ಮುಗಿಸಿ.

ಶ್ರೀ ಆಯನೂರು ಮಂಜುನಾಥ್ : ಇನ್ನು ಸಬ್‌ಮಿಟ್ ಮಾಡುವಂಥದ್ದು ಏನಿದೆ? Because it is a Labour Department's Problem. ಲೇಬರ್ ಪೆಯಿನ್ ಲೇಬರ್ ಪೇಯಿನ್ ಎನ್ನುವುದು ಇರುತ್ತದಲ್ಲಾ, ಆದರೆ ಆ ಲೇಬರ್ ಪೇಯಿನ್‌ಗೆ ಡೆಲಿವರಿ ಯಾವತ್ತಾದರೂ ಆಗುತ್ತದೆ. ಆದರೆ ಈ ಲೇಬರ್ ಪೇಯಿನ್‌ಗೆ ಯಾವತ್ತು ಡೆಲಿವರಿಯೇ ಆಗುವುದಿಲ್ಲ. ಹಾಗೆಯೇ ಈ ಸದನದಲ್ಲೂ ನಮ್ಮ ಪೇಯಿನ್‌ನ್ನು ಅಟ್‌ಲೀಸ್ಟ್ ಹೇಳಿಕೊಂಡು ರಿಲೀಫ್ ಮಾಡುವುದಕ್ಕೆ ಅವಕಾಶ ಸಿಕ್ಕುವುದಿಲ್ಲ ಎಂದರೆ I will sit. ಬೇರೆ ಇನ್ನೇನು ಮಾತನಾಡುವುದಿಲ್ಲ.

Mr. Speaker : It amounts to a reflection on the Chair. The Chair will view it very seriously. I am not responsible for it. You cannot air such views on the Chair. Let your party donate all the time to you. you can deliver all your pains. I am not coming in your way. Let your party even now decide and donate all the time to you. I am prepared to sit and listen to you. No reflection will be allowed to be passed on the Chair. I am judicious in my approach. I will spell out each minute that I have allotted to every one in this House.

ಶ್ರೀ ಬಿ.ಎಸ್. ಯಡಿಯೂರಪ್ಪ :ಇನ್ನು ಐದು ನಿಮಿಷದಲ್ಲಿ ನಿಮ್ಮ ಭಾಷಣ ಮುಗಿಸಿ ಅಷ್ಟೆ.

ಶ್ರೀ ಆಯನೂರು ಮಂಜುನಾಥ್ : ನನ್ನ ಉದ್ದೇಶ ಇರುವಂಥದ್ದು ಸಭಾಧ್ಯಕ್ಷರ ಘನತೆಗೆ ಗೌರವಕ್ಕೆ ಧಕ್ಕೆ ತರಬೇಕು ಎಂದಲ್ಲ. ಇದರ ಸಲುವಾಗಿ ಕಳೆದ ಎಂಟು ದಿನಗಳಿಂದ ಅಡ್ಡಾಡಿಕೊಂಡು ಬಂದು ಹೊತ್ತುಕೊಂಡು ಕುಳಿತುಕೊಳ್ಳುತ್ತಿದ್ದೇನೆ. Everyday I am sitting. ನನ್ನ ಎದುರಿಗೇ ಸಿಂಗಲ್ ಪಾರ್ಟಿ ಮೆಂಬರ್ಸ್ ಗಂಟೆಗಟ್ಟಲೆ ಮಾತನಾಡಿದರು. ಸಣ್ಣ ಸಣ್ಣ ವಿಚಾರಕ್ಕೆ ಆಯಿತು. ನಾನು ನನ್ನ ನೋವನ್ನು ಹೇಳಿಕೊಳ್ಳುವುದಕ್ಕೆ ಒಂದು ಅವಕಾಶ ಸಿಗುವುದಿಲ್ಲ ಎಂದಾದರೆ ನಾನು ಈ ಸದನದಲ್ಲಿ ಇನ್ನೇನು ಹೇಳುವುದಕ್ಕೆ ಇಷ್ಟ ಪಡುವುದಿಲ್ಲ. ಸಮಯ ಅನಾವಶ್ಯಕವಾಗಿ ವ್ಯಯ ಆಗಿದೆ. ನನಗೆ ನೋವಾಗಿದೆ. ಮಾನ್ಯ ಅಧ್ಯಕ್ಷರಲ್ಲಿ ನನ್ನ ನೋವನ್ನು ಮಾತ್ರ ನಾನು ಎಕ್ಸ್‌ಪ್ರೆಸ್ ಮಾಡುತ್ತಿದ್ದೇನೆ. ನನ್ನಿಂದ ತಪ್ಪಾದರೆ ಸಭಾಧ್ಯಕ್ಷರು ದಯಮಾಡಿ ನನ್ನನ್ನು ಕ್ಷಮಿಸಬೇಕು.

+ ಶ್ರೀ ಕುಂಬ್ಳೆ ಸುಂದರರಾವ್ (ಸೂರತ್‌ಕಲ್) : ಮಾನ್ಯ ಅಧ್ಯಕ್ಷರೇ, ನಾನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಸಂಬಂಧಪಟ್ಟಂಥ ವಿಷಯಗಳನ್ನು ಮಾತ್ರ ಸ್ಪರ್ಶಿಸುವುದಕ್ಕೆ ಇಷ್ಟಪಡುತ್ತೇನೆ. ಈ ಸ್ಪರ್ಶ ನಾನು ಮಾಡುವುದಕ್ಕಿಂತ ಮೊದಲು ಕನ್ನಡ ಅಥವಾ ಕರ್ನಾಟಕದ ಒಂದು ಸಮಗ್ರತೆಯ ಕುರಿತು ಎರಡು ಮಾತುಗಳನ್ನು ಹೇಳುವುದು ಉಚಿತ ಎಂದು ಗ್ರಹಿಸುತ್ತೇನೆ. ಸದನದಲ್ಲಿ ಕಾಸರಗೋಡಿನ ಬಗ್ಗೆ ಅನ್ಯಾನ್ಯ ಸಂದರ್ಭಗಳಲ್ಲಿ ಪ್ರಸ್ತಾಪ ಬಂದಿತ್ತು. ಬೆಳಗಾವಿಯಲ್ಲಿ ಏನಾದರೂ ಹೆಚ್ಚುಕಡಿಮೆಯಾದಾಗ ಬೆಳಗಾವಿಯನ್ನು ಉಳಿಸಿಕೊಳ್ಳುವಂಥ ಪ್ರಯತ್ನ ಸರ್ಕಾರ ಮಾಡುವ ಹೊತ್ತಿಗೆ ಕಾಸರಗೋಡಿನ ಪ್ರಸ್ತಾಪ ಬಂದರೆ ಇದ್ದದ್ದು ಇದ್ದ ಹಾಗೆ ಇರಲಿ ಎಂಬ ಧ್ವನಿ ಬರುತ್ತಿರುವುದನ್ನು ನಾನು ಬಹಳ ಸಲ ಗಮನಿಸಿದ್ದೇನೆ. ನನಗೊಂದು ದುಃಖ ಇದೆ. ಪ್ರಾಂತೀಕರಣ ಆದ ಆ ದಿನಗಳಲ್ಲಿ ಕಾಸರಗೋಡಿನಲ್ಲಿ ಕನ್ನಡಿಗರು ಯಾರಿದ್ದಾರೆ, ಅವರು ತಮ್ಮ ಹೃದಯದ ಆಳಲನ್ನು ಅನ್ಯಾನ್ಯ ರೀತಿಗಳಲ್ಲಿ ತೋಡಿಕೊಂಡಿದ್ದಾರೆ. ಆಗ ಅಲ್ಲಿ ಮಲೆಯಾಳದ ವಾಸನೆಯೇ ಇರಲಿಲ್ಲ. ಅನ್ಯಾಯವಾಗಿ ಮಹಾಜನ್ ವರದಿಯ ಪ್ರಕಾರವಲ್ಲ, ಪಣಿಕರ್ ವರದಿಯ ಪ್ರಕಾರ ನಾವು ಆ ಕಡೆಗೆ ಸೇರಿದ್ದೇವೆ.

ಮಹಾಜನ್ ವರದಿ ಕರ್ನಾಟಕವನ್ನು ಸಮಗ್ರಗೊಳಿಸುವ ದೃಷ್ಟಿಯಲ್ಲಿ ಕಾಸರಗೋಡನ್ನು ಕರ್ನಾಟಕ್ಕೆ ಸೇರಿಸಿಕೊಳ್ಳಬೇಕು ಎಂದು ಹೇಳಿದ ಮೇಲೂ ಅದನ್ನು ಈ ಕಡೆ ಪಡೆಯುವಂಥ ಒಂದೇ ಒಂದು ಹೆಜ್ಜೆಯನ್ನೂ ಸರ್ಕಾರ, ಆಗಿನ ಸರ್ಕಾರದಿಂದ ಈಗಿನ ಸರ್ಕಾರದವರೆಗೂ ಯಾರೂ ಮಾಡದೇ ಇದ್ದದ್ದರ ಪರಿಣಾಮವಾಗಿ ನಾವು ಅನಾಥರಾಗಿದ್ದೇವೆ, ಕರ್ನಾಟಕ ಅನಾಥರಾಗಿದ್ದೇವೆ, ಕರ್ನಾಟಕ ಅನಾಥವಾಗುತ್ತಿದೆ. ಅಲ್ಲಿನ ಕರ್ನಾಟಕ ಅರ್ಥಾತ್ ಕನ್ನಡ ಭಾಷೆ ಸಾಯುತ್ತಾ ಇದೆ. ಎಲ್ಲಿಯವರೆಗೆ ಸಾಯುತ್ತಾ ಇದೆ ಎಂದು ಕೇಳಿದರೆ ನನ್ನ ಬಂಧು ಬಳಗ ಎಲ್ಲಾ ಕಾಸರಗೋಡು ತಾಲ್ಲೂಕಿನಲ್ಲೇ ಇರುವುದು. ಆ ಮನೆಗೆ ನಾನು ಹೋದಾಗ ನನ್ನ ಹೆಂಡತಿ ಮನೆ ಇರಬಹುದು, ಮಕ್ಕಳನ್ನು ಕೊಟ್ಟ ಮನೆ ಇರಬಹುದು, ಅಲ್ಲಿಗೆ ಹೋದಾಗ ಮಕ್ಕಳು ಪಾಠಪುಸ್ತಕ ಬಿಡಿಸಿ "ಇದ್ ವಿಂದ, ಇದು ಎಂದಾಪರಯ್ಯ" ಎಂದು ಕೇಳಿದರೆ ನಾನು ಕನ್ನಡದಲ್ಲಿ ಓದಿದ ವ್ಯಕ್ತಿ, ಕನ್ನಡದ ಮಣ್ಣಿನ ಮಗ ಎಂದು ತಿಳಿದುಕೊಂಡಂಥ ವ್ಯಕ್ತಿ, ಅವರಿಗೆ ಉತ್ತರ ಕೊಡಲಾರದೆ ಚಡಪಡಿಸುವಂಥ ಸ್ಥಿತಿ ಇದೆ.

ಕನ್ನಡವನ್ನು ಈ ರೀತಿ ಕೈ ಬಿಟ್ಟದಂಥ ಸ್ಥಿತಿಯಲ್ಲಿ ಅಲ್ಲಿ ಮಲೆಯಾಳೀಕರಣ ನಡೆದದ್ದರ ಮೂಲಕವಾಗಿ ಕನ್ನಡಿಗರು ಬದುಕಬೇಕಾದರೆ ನಾವು ಕನ್ನಡ ಕಲಿಯಬೇಕು ಎಂಬ ಸ್ಥಿತಿಗೆ ಬಂದು ಮುಟ್ಟಿದ್ದೇವೆ. ಈ ರೀತಿಯಲ್ಲಿ ನಾವು ಸಮಗ್ರ ಕರ್ನಾಟಕದ ಯೋಚನೆಯನ್ನು ಮಾಡುವಾಗ ಕಾಸರಗೋಡು ನಮ್ಮದು ಎಂದು ಯೋಚಿಸುವ ದಾರಿಯಲ್ಲಿ ಮುಂದೆ ಹೋಗಬೇಕಾದ್ದು ಅಗತ್ಯವಲ್ಲವೇ? ಈ ದೃಷ್ಟಿಯಲ್ಲಿ ಸರ್ಕಾರದ ಗಮನವನ್ನು ನಾನು ಮೊದಲಿಗೆ ಸೆಳೆಯುತ್ತಿದ್ದೇನೆ. ಇನ್ನು ಕನ್ನಡ ಸಂಸ್ಕೃತಿಯ ಕುರಿತು ಮಾತನಾಡುವ ಹೊತ್ತಿಗೆ ಸಂಸ್ಕೃತಿ ಎಂದರೆ ಯಾವುದೋ ಒಂದು ಪ್ರದೇಶಕ್ಕೆ ಸಂಬಂಧಪಟ್ಟಂಥ ಯಾವುದೋ ಒಂದು ಅಂಶವಲ್ಲ. ಹಲವು ಸುಂದರವಾದ ಹೂಗಿಡಗಳಿಂದ ಕೂಡಿದಂಥ ತೋಟ ಯಾವ ರೀತಿ ಇರುತ್ತದೆಯೋ ಹಾಗೆ ಸಂಸ್ಕೃತಿಗೆ ಸಂಬಂಧಪಟ್ಟಂಥ ಅನ್ಯಾನ್ಯ ಕಲೆಗಳೆಲ್ಲವೂ ಸೇರಿ ಅದೊಂದು ಸುಂದರವಾದ ಉದ್ಯಾನವನದ ವಾತಾವರಣವನ್ನು ನಿರ್ಮಾಣ ಮಾಡುವಂಥದ್ದು ಆಗುತ್ತದೆ. ಈ ದೃಷ್ಟಿಯಿಂದ ಕಾರಸಗೋಡಿನಲ್ಲಿ ಗುಂಬಳೇ ಪ್ರದೇಶವು ಯಕ್ಷಗಾನದ ಗಂಡುಸೀಮೆ, ಯಕ್ಷಗಾನದ ಸೀಮಾ ಪುರುಷ ಪಾರ್ತಿಸುಬ್ಬ ಹುಟ್ಟಿದಂಥ ಪ್ರದೇಶದಲ್ಲಿ ಯಾವ ಯಕ್ಷಗಾನದ ಕಲೆ ಇತ್ತೋ ಅದು ಅಲ್ಲಿಂದಲೇ ಹೊರಟು ಇಲ್ಲಿಯವರೆಗೆ ಬಂತು ಎಂದಲ್ಲವಾದರೂ ಆ ಯಕ್ಷಗಾನ ಕಲೆಯು ಇಲ್ಲಿ,ಅಲ್ಲಿ ಎಲ್ಲಾ ಕಡೆಗಳಲ್ಲೂ ಇದ್ದು ಅದು ವಿಶಾಲವಾದಂಥ ವ್ಯಾಪ್ತಿಯನ್ನು ಪಡೆದಿರುವಾಗ ಅದಕ್ಕೆ ಸಂಬಂಧಪಟ್ಟಂತಹ ರೀತಿಯಲ್ಲಿ ಆ ಮಹಾನ್ ಯಕ್ಷಗಾನದ ಕಲೆಯ ಉಳಿವಿಗೆ ಬೇಕಾದ ಕೆಲಸವನ್ನು ಕನ್ನಡ ಸಂಸ್ಕೃತಿ ಇಲಾಖೆಯು ಮಾಡಬೇಕಾದುದು ಅಗತ್ಯವೆಂದು ನಾನು ತಿಳಿಯುತ್ತೇನೆ. ಈವತ್ತಿನ ವಾತಾವರಣದಲ್ಲಿ ಯಕ್ಷಗಾನವನ್ನು ನೋಡಿ ಆದರಿಂದ ಸಂಸ್ಕಾರವನ್ನು ಪಡೆಯಬೇಕೆಂದಿರುವ ಜನರ ಮಧ್ಯದಲ್ಲಿ ಯಕ್ಷಗಾನಕ್ಕೆ ಸಾಂಪ್ರದಾಯಿಕವಾದಂಥಕ ರಂಗಭೂಮಿಯಿದ್ದು, ಅದರಲ್ಲಿ ಸಮಗ್ರತೆ ಇದ್ದು ಅದು ನಷ್ಟವಾಗುತ್ತಿರುವುದರಿಂದ ಯಕ್ಷಗಾನದ ಕಲಾವಿದರಾದ ನಾವುಗಳು ದುಃಖವನ್ನು ಅನುಭವಿಸುತ್ತಿದ್ದೇವೆ. ನಾನು 42ವರ್ಷಗಳ ಕಾಲ ಯಕ್ಷಗಾನದಲ್ಲಿ ಬಣ್ಣದ ಬದುಕನ್ನು ಮಾಡಿದವನು. ನನ್ನ ದೀರ್ಘಕಾಲದ ಅನುಭವದಿಂದ ಹೇಳುತ್ತಿದ್ದೇನೆ, ದಿನದಿಂದ ದಿನಕ್ಕೆ ಯಕ್ಷಗಾನ ರಂಗಭೂಮಿ ಶಿಥಿಲವಾಗುತ್ತಿದೆ, ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತಿರುವುದು ಮಾತ್ರವಲ್ಲದೆ ಅದು ವ್ಯಾಪಾರಿಗಳ ಕೈಗೆ ಸಿಕ್ಕುವುದರ ಮೂಲಕ ತನ್ನ ಸರ್ವಾಂಗ ಸುಂದರವಾದಂಥ ಯೋಗ್ಯತೆಯೇನಿದೆಯೋ ಆದರಿಂದ ದೂರ ದೂರ ಸರಿಯುತ್ತಿದೆ. ಒಂದು ಕಡೆ ಕನ್ನಡದ ನಾಶವನ್ನು ನಾವು ನೋಡುತ್ತಿದ್ದೇವೆ.

ಮತ್ತೊಂದು ಕಡೆ ಕನ್ನಡದ ಕಲೆಗಳಿಗೆ ಉಂಟಾಗುತ್ತಿರುವ ಆಘಾತವನ್ನು ನೋಡುತ್ತಿದ್ದೇವೆ. ಇದೊಂದು ವಿಪರ್ಯಾಸವೆಂದು ನನಗನ್ನಿಸುತ್ತಿದೆ. ಇದು ನಮ್ಮ

ದೌರ್ಭಾಗ್ಯವಲ್ಲದೆ ಮತ್ತಿನ್ನೇನು ಮಂಗಳೂರಿನಿಂದ ಬೆಂಗಳೂರಿನವರೆಗೆ ಕನ್ನಡದ ಮೂಲಭೂತವಾದ ಸ್ಥಿತಿಗೆ ಹೊಡೆತ ಬಿದ್ದದನ್ನು ಆಂಗ್ಲ ಮಾಧ್ಯಮ ಶಾಲೆಗಳ ಮೂಲಕವಾಗಿ ನಮ್ಮ ಮಕ್ಕಳು ಕನ್ನಡದಿಂದ ದೂರವಾಗುತ್ತಿರುವ ಪರಿಸ್ಥಿತಿಯನ್ನು ಅನುಭವಿಸುತ್ತಿರುವ ಸಮಯದಲ್ಲಿ ಕನ್ನಡದ ಕಲೆಗಳು, ಸಾಂಪ್ರದಾಯಿಕ ರಂಗಭೂಮಿಗಳು ಆದರಿಂದ ದೂರವಾಗಿ ವ್ಯಾಪಾರೀಕರಣಗೊಳ್ಳುತ್ತಿರುವುದನ್ನು ನಾವು ಇಂದು ನೋಡುತ್ತಿರುವಾಗ ಮುಂದೆ ಈ ನಾಡಿನ ಮತ್ತು ಕಲೆಗಳ ಪರಿಸ್ಥಿತಿಯೇನು ಎನ್ನುವ ಬಗ್ಗೆ ಗಂಭೀರವಾಗಿ ಯೋಚನೆ ಮಾಡಬೇಕಾಗಿದೆ. ನಾವು ಒಂದು ಮಾತನ್ನು ಹೇಳುತ್ತೇವೆ. ಆದೇನೆಂದರೆ ಕನ್ನಡ ಉಳಿಯ ಬೇಕಾದರೆ ಕನ್ನಡದಲ್ಲಿಯೇ ಶಿಕ್ಷಣ, ಕನ್ನಡದಲ್ಲಿಯೇ ಆಡಳಿತವೆಂದು. ಇದು ಎಷ್ಟರಮಟ್ಟಿಗೆ ಜಾರಿಗೆ ಬಂದಿದೆಯೆಂದರೆ ಅದು ಏನೇನೂ ಜಾರಿಗೆ ಬಂದಿಲ್ಲವೆಂದು ನಮಗನ್ನಿಸುತ್ತದೆ. ಮುನ್ನೂರರಷ್ಟು ಕನ್ನಡದಲ್ಲಿಯೇ ಆಡಳಿತ ಮಾಡಬೇಕೆಂದು ಇರತಕ್ಕ ಸರ್ಕಾರ ಆಜ್ಞೆಯಲ್ಲಿ ನೂರೈವತ್ತರಷ್ಟು ಇಂಗ್ಲಿಷ್‌ನಲ್ಲಿಯೇ ಇತ್ತು ಎಂದು ಕೇಳಿ ನನಗೆ ದುಃಖವಾಯಿತು. ಇದು ಏನನ್ನು ಸೂಚಿಸುತ್ತಿದೆಯೋ ಅದೇ ರೀತಿ ಯಕ್ಷಗಾನದ ಅವಸ್ಥೆ ಸಹ ಆಗಿದೆ. ಉರ್ದು ಭಾಷೆಯಿಂದಾಗಿ ಕಾಶ್ಮೀರಿ ಭಾಷೆ ನಾಶವಾಯಿತೆಂದು ನಾವು ಕೇಳಿದ್ದೇವೆ. ಬಂಗಾಳಿ ಭಾಷೆಯಿಂದಾಗಿ ಅಸ್ಸಾಮಿ ಭಾಷೆ ನಾಶವಾಯಿತೆಂದು ನಾವು ಕೇಳುತ್ತಿದ್ಧೇವೆ. ಅದೇ ರೀತಿಯಲ್ಲಿ ನಮ್ಮಲ್ಲಿನ ಇಂಗ್ಲೀಷ್ ವ್ಯಾಮೋಹವೇನಿದೆಯೋ ಅದರಿಂದ ನಾವು ಕನ್ನಡವನ್ನು ಸಹ ನಾಶ ಮಾಡಿಕೊಳ್ಳುತ್ತಿದ್ದೆವೆಯೋ ಎಂದು ಅನ್ನಿಸುತ್ತಿದೆ. ಅದೇ ರೀತಿ ಕಲೆಯ ಬಗ್ಗೆ ಇದನ್ನು ಸಮಿಕರಿಸಿ ಹೇಳುತ್ತಿದ್ದೇನೆ.

ಯಕ್ಷಗಾನದಂಥ ರಂಗಭೂಮಿ, ಯಕ್ಷಗಾನದಂಥ ವಿಶಾಲವಾದಂಥ ಕಲೆಯ ಬಗ್ಗೆ ಸರ್ಕಾರವೇನಾದರೂ ಲಕ್ಷ್ಯ ಹರಿಸದಿದ್ದರೆ ಅದು ನಾಟಕವಾಗಿ ಮಾರ್ಪಡುವುದರಲ್ಲಿ ಅನುಮಾನವಿಲ್ಲ. ರಂಗಭೂಮಿಯಲ್ಲಿ ಯಕ್ಷಗಾನ ಬಯಲಾಟವೆಂದು ಕರೆದೆವ್ರೋ ಸಮಗ್ರವಾಗಿ ಉಳಿದ ಯಾವ ಕಲೆಗೂ ಇಲ್ಲದಿರುವಂಥ ಯೋಗ್ಯತೆ, ಸಾಮರ್ಥ್ಯ ಇದಕ್ಕೆ ಇದೆ. ಪ್ರಪಂಚದ ಯಾವುದೇ ಕಲೆಯಾದರೂ ಸಹ ರಾತ್ರಿ ಒಂಭತ್ತು ಗಂಟೆಯಿಂದ ಬೆಳಿಗ್ಗೆ ಆರು ಗಂಟೆವರೆಗೆ ಜನರನ್ನು ಮತ್ತು ಅವರ ಮನಸ್ಸನ್ನು ಹಿಡಿದಿರುವುದಕ್ಕೆ ಸಮರ್ಥವಾಗುವುದಿಲ್ಲ. ಆದರೆ ಯಕ್ಷಗಾನ ಅದಕ್ಕೆ ಸಮರ್ಥವಾಗಿದೆ. ಧಕ್ಷಿಣೋತ್ತರ ಕನ್ನಡ ಜಿಲ್ಲೆಗಳಲ್ಲಿ ಮೂವತ್ತೆರಡು, ವೃತ್ತಿಮೇಳಗಳಿವೆ, ಇನ್ನೂರೈವತ್ತಕ್ಕಿಂತ ಹೆಚ್ಚು ಹವ್ಯಾಸಿ ಮಂಡಳಿಗಳು ಇದೆ ಈ ವೃತ್ತಿಮೇಳಗಳಿಗೆ ಸಂಬಂಧಪಟ್ಟಂತೆ, ಹವ್ಯಾಸಿ ಮಂಡಳಿಗೆ ಸಂಬಂಧಪಟ್ಟಂತೆ ಒಂದೊಂದು ಮಂಡಳಿಗಳಲ್ಲಿರುವ ಕಲಾವಿದರನ್ನು ಲೆಕ್ಕ ಮಾಡಿದರೆ ಸುಮಾರು ಸಾವಿರದ ಐದುನೂರು ಕುಟುಂಬಗಳು ಯಕ್ಷಗಾನದಿಂದ ಜೀವನ ಮಾಡುತ್ತಿದ್ದಾರೆ. ಒಂದು ಕುಟುಂಬಕ್ಕೆ ನಾಲ್ಕು ಜನರಂತೆ ಲೆಕ್ಕ ಮಾಡಿದರೆ ಆರು ಸಾವಿರ ಜನರಿಗೆ ಯಕ್ಷಗಾನವು ಅನ್ನದಾನ ಮಾಡುತ್ತಿದೆ, ಜೀವನದ ಭದ್ರತೆಯನ್ನು ಕೊಡುತ್ತಿದೆ.

ಈ ವೃತ್ತಿಮೇಳಗಳು, ಹವ್ಯಾಸಿ ತಂಡಗಳೇನಿದೆಯೋ ಇವರು ವರ್ಷಕ್ಕೆ ಹತ್ತು ಸಾವಿರ ಪ್ರದರ್ಶನ ಮಾಡುತ್ತಿದ್ದಾರೆ. ವಾಟಾಳ್ ನಾಗರಾಜ್‌ರವರು ಮಾತನಾಡುತ್ತ ಕರ್ನಾಟಕದ ನಾಟಕ ರಂಗಭೂಮಿಯೇನಿದೆ ಅದು ಶಿಥಿಲವಾಗುತ್ತಿದೆ, ಸತ್ತು ಹೋಗುತ್ತಿದೆಯೆಂದು ಹೇಳಿದರು. ಅವರ ದುಃಖ ನನಗೆ ಅರ್ಥವಾಗಿದೆ. ನನಗೂ ಅದೇ ರೀತಿಯ ದುಃಖವಾಗುತ್ತಿದೆ. ಯಕ್ಷಗಾನ ಶಿಥಿಲವಾಗುತ್ತಿದೆಯೋನೊ, ಸತ್ತು ಹೋಗುತ್ತಿದೆಯೇನೋ ಎನ್ನುವ ಭಯ ಬರುತ್ತಿದೆ. ಏಕೆಂದರೆ : ಇದು ವ್ಯಾಪಾರಿಗಳ ಕೈಯಲ್ಲಿ ಸಿಕ್ಕಿ, ಹಣಮಾಡುವವರ ಕೈಯಲ್ಲಿ ಸಿಕ್ಕಿ ಯಕ್ಷಗಾನ ಮೂಲಭೂತವಾಗಿ ನಾಶವಾಗುತ್ತಿದೆ. ಈ ರೀತಿಯ ನಷ್ಟ ಕೇವಲ ದಕ್ಷಿಣ ಕನ್ನಡ ಜಿಲ್ಲೆ ಉತ್ತರ ಕನ್ನಡ ಜಿಲ್ಲೆಗೆ ಮಾತ್ರ ವಾಗುವುದಿಲ್ಲ. ಬಹಳ ಜನರಲ್ಲಿ ತಪ್ಪು ಅಭಿಪ್ರಾಯವಿದೆ. ಯಕ್ಷಗಾನವೆಂದರೇ ಮಂಗಳೂರಿನವರದ್ದು, ಶಿರಸಿಯವರದ್ದು ಎಂದು. ಇದು ತಪ್ಪು.

ಮಲೆನಾಡಿನಿಂದ ಹಿಡಿದು ಅನೇಕ ಜಿಲ್ಲೆಗಳಲ್ಲಿ ಯಕ್ಷಗಾನದ ಪ್ರಕಾರಗಳನ್ನು ನಾವು ನೋಡುತ್ತೇವೆ. ಒಂದಕ್ಕೊಂದು ಅಲ್ಪಸ್ವಲ್ಪ ಭಿನ್ನತೆ ಇರಬಹುದು. ಆ ರೀತಿ ಎಲ್ಲವನ್ನು ಯಕ್ಷಗಾನವೆಂದು ನಾವು ತಿಳಿದುಕೊಂಡು ಅದನ್ನು ಉಳಿಸಿಕೊಳ್ಳಲು ಸರ್ಕಾರ ಲಕ್ಷ್ಯ ಹರಿಸಬೇಕಾಗಿದೆ. ನಾನು ಏಕೆ ಹೇಳುತ್ತಿದ್ದೇನೆಂದರೆ, ಯಕ್ಷಗಾನಕ್ಕೆ ಒಂದು ಪ್ರತ್ಯೇಕವಾದ ಅಕಾಡಮಿಯ ಅಗತ್ಯವಿದೆ. ಇಷ್ಟು ಜನರು ನೋಡುವಂಥ ಕಲೆ, ಇಷ್ಟು ಜನರು ಜೀವನ ಸಾಗಿಸುವಂಥ ಕಲೆಯಾಗಿರುವ ಇದು ಜಾನಪದ ಅಕಾಡಮಿಯ ಜೊತೆ ಸೇರಿಕೊಂಡು ಇರಬೇಕಾದುದರ ಔಚಿತ್ಯವೆಷ್ಟು ಎಂದು ಕೇಳುತ್ತಿದ್ದೇನೆ. ಇನ್ನು ನಾನು ಯಕ್ಷಗಾನದ ಎರಡು ಪ್ರಕಾರಗಳ ಬಗ್ಗೆ ತಮ್ಮ ಲಕ್ಷ್ಯವನ್ನು ಹರಿಸಬಯಸುತ್ತೇನೆ. ಯಕ್ಷಗಾನ ಕಲಾವಿದರ್‍ಯಾರು ಇದ್ದಾರೆ ಅವರು ಬಣ್ಣವನ್ನು ಹಚ್ಚಿಕೊಂಡು ಕುಣಿಯುವುದರಲ್ಲಿ ಮಾತ್ರವಲ್ಲ, ಮಳೆಗಾಲದ ದಿವಸಗಳ್ಲಿ ಯಕ್ಷಗಾನ ತಾಳಮದ್ದಳೆಯೆಂದು ಆಗುತ್ತಿದೆ, ಅದರಲ್ಲೂ ಭಾಗವಹಿಸುತ್ತಾರೆ. ನಮ್ಮ ಶಾಸಕ ಮಿತ್ರರು ಇಲ್ಲಿ ಮಾತನಾಡುವಾಗ, ಜಗಳ ಮಾಡುವಾಗ ನನಗನ್ನಿಸುತ್ತದೆ ಇವರಿಗೆ ನಾಲ್ಕು ತಾಳಮದ್ದಳೆಯನ್ನು ಕೇಳಿಸಬೇಕೆಂದು. ತಾಳಮದ್ದಳೆ ಯಾವ ರೀತಿ ಇರುತ್ತದೆಂದರೆ ಪೌರಾಣಿಕದ ಯಾವುದೋ ಭಾಗವನ್ನು ಆಧಾರವಾಗಿಟ್ಟುಕೊಂಡು ಎರಡುಮೂರು ಗಂಟೆಗಳ ಕಾಲ ಅಥವಾ ಇಡೀ ರಾತ್ರಿ ಕಾರ್ಯಕ್ರಮವಾಗುತ್ತದೆ. ರಾಮ ಮತ್ತು ರಾವಣರು ವಾದ ಮಾಡುತ್ತಾರೆ. ಕೃಷ್ಣನು ಮತ್ತು ಕೌರವನು ವಾದ ಮಾಡುತ್ತಾರೆ. ಆದರೆ ಇಲ್ಲಿ ಏನಾಗುತ್ತದೆಂದರೆ ರಾಮ, ಕೃಷ್ಣರ ವ್ಯತ್ಯಾಸ ಪತ್ತೆಯಾಗುವುದಿಲ್ಲ, ಎಲ್ಲರೂ ಕೌರವರೇ ಆಗಿಬಿಡುತ್ತೇವೆ. ಈ ರೀತಿಯಿಂದ ನಾವು ಕೌರವವನ್ನು ತರುವುದಿಲ್ಲ, ತಾಳಮದ್ದಲೆಯನ್ನು ಕೇಳಿದಾಗ, ವಾದದ ಗತಿ, ಪರಸ್ಪರ ಚರ್ಚೆ ಮಾಡುವ ರೀತಿಯ ಬಗ್ಗೆ ಇಲ್ಲಿ ಸ್ಪಷ್ಟ ಕಲ್ಪನೆ ಸಿಗಲು ಸಾಧ್ಯ. ಮಾನ್ಯ ಅಧ್ಯಕ್ಷರು ಒಪ್ಪಿಗೆ ಕೊಟ್ಟರೆ ಸದನದ ಸದಸ್ಯರಿಗೆ ಒಂದು ತಾಳಮದ್ದಲೆ ಕೇಳಿಸುವ ಕೆಲಸವನ್ನು ನಾನು ಅವಶ್ಯಕವಾಗಿ ಮಾಡಬಲ್ಲೆ, ಅದನ್ನು ಮಾಡಬೇಕಾದ ಅಗತ್ಯವಿದೆಯೆಂದು ನಾನು ಗ್ರಹಿಸುತ್ತೇನೆ. ಯಕ್ಷಗಾನ ಅಕಾಡಮಿಯೆಂದು ಏನಿದೆಯೋ ಇದರ ಜೊತೆಯಲ್ಲಿಯೇ ಜಾನಪದ ಅಕಾಡಮಿ ಇರುವುದು ಅಥವಾ ಜಾನಪದ ಅಕಾಡಮಿಯ ಜೊತೆಯಲ್ಲಿಯೇ ಯಕ್ಷಗಾನ ಅಕಾಡಮಿ ಇರುವುದು ಖಂಡಿತ ಸಮಂಜಸವಲ್ಲ. ಇಂಥ ವಿಶಾಲ'ವಾದಂಥ ರಂಗಭೂಮಿ ಯಕ್ಷಗಾನಕ್ಕೇನಿದೆಯೋ ಇದಕ್ಕೆ ಸಂಬಂಧಪಟ್ಟಂತೆ ಪ್ರತ್ಯೇಕವಾದ ಅಕಾಡಮಿ ಇದ್ದರೆ ಯಕ್ಷಗಾನದ ಭವಿಷ್ಯವನ್ನು ರೂಪಿಸಲು, ಅದರ ಕುಂದುಕೊರೆಯನ್ನು ನಿವಾರಿಸಲು ಸಾಧ್ಯವಾಗುವುದು. ಸರ್ಕಾರ ಯಕ್ಷಗಾನ ಇದೇ ರೀತಿ ಇರಬೇಕೆಂದು ಹೇಳುವುದಕ್ಕಾಗುತ್ತದೆ. ಯಕ್ಷಗಾನ ಹೀಗೆ ಇರಬೇಕೆಂದು ಸರ್ಕಾರ ಹೇಳಬೇಕು ಎಂದು ನಾನೇಕೆ ಹೇಳುತ್ತಿದ್ದೇನೆಂದರೆ, ಜಾನಪದ ಅಕಾಡಮಿಯೆಂದು ಏನಿದೆಯೋ ಇದರ ಜೊತೆಯಲ್ಲಿ ಯಕ್ಷಗಾನವನ್ನು ಸೇರಿಸಿದರೆ ಏನು ದುಷ್ಪರಿಣಾಮವಾಗುತ್ತದೆ ಎಂಬ ಬಗ್ಗೆ ನನಗೆ ಅನುಭವವಾಗಿದೆ. ಮಾನ್ಯ ಕನ್ನಡ ಸಂಸ್ಕೃತಿ ಇಲಾಖೆಗಳ ಸಚಿವರನ್ನು ನಾನೂ ಭೇಟಿ ಮಾಡಿ ಯಕ್ಷಗಾನ ಅಕಾಡಮಿಗೆ, ಜಾನಪದ ಅಕಾಡಮಿಗೆ ಸಂಬಂಧಪಟ್ಟಂತೆ ಇಂಥಿಂಥವರ ಹೆಸರನ್ನು ಸೂಚಿದರೆ ಉಚಿತವಾಗುತ್ತದೆಂದು ಹೇಳಿದ್ದೆ. ಅದನ್ನು ಅವರು ಒಪ್ಪಿಕೊಂಡಿದ್ದು ಮಾತ್ರವಲ್ಲ ನಿಮ್ಮ ಸೂಚನೆಯನ್ನು ಅಂಗೀಕರಿಸಲು ಸಾಧ್ಯ ಅದನ್ನು ನಾನು ನೆನಪಿನಲ್ಲಿ ಇಟ್ಟುಕೊಳ್ಳುತ್ತೇನೆಂದು ನನಗೆ ಪತ್ರವನ್ನೂ ಸಹ ಬರೆದರು. ನನಗೆ ಬಹಳ ಸಂತೋಷವಾಯಿತು.

ಜಾನಪದ ರಂಗಭೂಮಿಯ ಜೊತೆಯಲ್ಲಿ ಯಕ್ಷಗಾನ ರಂಗಭೂಮಿಯನ್ನು ಬೆಳೆಸಬೇಕಾದ ಕರ್ತವ್ಯವನ್ನು ಹೊಂದಿರುವವರು ನಾನು ಯಾವ ಹೆಸರನ್ನು ಸೂಚಿಸಿದ್ದೆನೋ ಆ ಹೆಸರು ನನ್ನ ಪಕ್ಷದವರ ಹೆಸರಾಗಿರಲಿಲ್ಲ, ಕಲಾವದರ ಹೆಸರಾಗಿತ್ತು, ತಜ್ಞರ ಹೆಸರಾಗಿತ್ತು, ಪ್ರಸಂಗಕರ್ತರ ಹೆಸರಾಗಿತ್ತು. ಕೊನೆಗೆ ಪಟ್ಟಿ ಬರುವಾಗ ಆ ಎಲ್ಲ ಹೆಸರು ಬಿಟ್ಟುಹೋಗಿತ್ತು. ಎಲ್ಲಬಿಟ್ಟು ನನ್ನ ಹೆಸರು ಅದರಲ್ಲಿ ಸೇರಿ ಹೋಗಿತ್ತು.

ಇದು ಹೇಗೆ ಬಂತು ಎಂದು ನನಗೆ ಆಶ್ಚರ್ಯವಾಯಿತು. ನಾನು ಶಾಸಕನಾಗಿ ಏನು ಮಾಡಬೇಕೋ ಅದನ್ನೇ ಮಾಡಲು ನನಗೆ ಕಷ್ಟವಾಗಿದೆ. ಅದರ ಜೊತೆಗೆ ಈ ಸದಸ್ಯತ್ವವನ್ನು ಕಟ್ಟಿಕೊಂಡು. ಒಂದು ಮಹಾನ್ ಕಲೆಗೆ ಏನು ಸೇವೆ ಮಾಡಬಲ್ಲೆ ನನಗೆ ಒಂದು ಪ್ರಸಂಗ ನೆನಪಿಗೆ ಬರುತ್ತಿದೆ. ಭಗವಾನ್‌ಬುದ್ಧನು ವಿಗ್ರಹಾರಾಧನೆ ಮಾಡಬೇಡಿ, ಅದರಿಂದ ಪ್ರಯೋಜನವಾಗುವುದಿಲ್ಲ, ನಿಮ್ಮ ಉದ್ಧಾರವಾಗುವುದಿಲ್ಲವೆಂದು ಹೇಳಿದನಂತೆ. ಆದರೆ ಜನರು ಬುದ್ಧ ಹೋದಮೇಲೆ ಬುದ್ಧನದ್ದೇ ಮೂರ್ತಿಯನ್ನಿಟ್ಟು ಪೂಜೆ ಮಾಡಿದರಂತೆ. ಆ ರೀತಿ ನಾನು ಬೇರೆಯವರ ಹೆಸರನ್ನು ಹೇಳಿದರೆ ಅವರ ಹೆಸರನ್ನು ಬಿಟ್ಟು ನೀನೇ ಸದಸ್ಯನಾಗಿಬಿಡು ಎಂದು ಹೇಳಿದರೆ ಯಾವ ನ್ಯಾಯ? ಈ ಜಾನಪದ ಅಕಾಡಮಿಯಲ್ಲಿ ನೀವು ಯಾರ್‍ಯಾರನ್ನು ಸೇರಿಸಿಕೊಂಡಿದ್ದೀರೋ ಅವರ ಆಯ್ಕೆ ಬಗ್ಗೆ ಮಾನದಂಡ ಯಾವುದು ಎಂದು ನನಗೆ ಅರ್ಥವಾಗಿಲ್ಲ. ಒಬ್ಬರು ಮಹಾನ್ ಕಲಾವಿದರ ಮಗನನ್ನು ಹಾಕಿಕೊಂಡಿದ್ದೀರಿ. ಅವರು ನನ್ನ ಸ್ನೇಹಿತರು ಸಹ. ಉತ್ತರ ಕನ್ನಡ ಜಿಲ್ಲೆಯ ಪ್ರತಿನಿಧಿಯಾಗಿ ಒಬ್ಬರು ಕಲಾವಿದರ ಮಗನನ್ನು ಹಾಕಿದ್ದೀರಿ ಅವರ ಅನುಭವ ಏನು? ನನ್ನ ಸ್ನೇಹಿತರ ಮಗನಿಗೆ ಸದಸ್ಯತ್ವ ಸಿಕ್ಕಿತು, ಖರ್ಚಿಗೆ ಸಿಕ್ಕಿತು, ಟಿ.ಎ, ಡಿ.ಎ ಸಿಕ್ಕಿತು ಎಂಬುದು ವಿಷಯವಲ್ಲ, ಅವರು ಈ ಕಲೆಗೆ ಏನು ಕೊಡುಗೆ ಕೊಡಲು ಸಾಧ್ಯ? ಇನ್ನೊಬ್ಬರು ಸದಸ್ಯರಾಗಿ ಕುಂಶಿ ಹರಿದಾಸ್‌ಭಟ್ಟರನ್ನು ಹಾಕಿದ್ದೀರಿ. ಅಂಥ ಮಹಾನ್ ವಿದ್ವಾಂಸ ಸದಸ್ಯರಾಗಿ ಇದ್ದುಕೊಂಡು ಅಲ್ಲಿ ಏನು ಮಾಡಲು ಸಾಧ್ಯ? ಜಾನಪದ ಅಕಾಡಮಿಯೇನಿದೆ ಅದಕ್ಕೆ ಸಂಬಂಧಪಟ್ಟಂಥ ಅವರ ಅನುಭವದ ವ್ಯಾಪ್ತಿಯೆಷ್ಟು ಇದಕ್ಕೆ ಮಾನದಂಡವೇನು? ಕಾಸರಗೋಡಿನ ಕಡೆಯಿಂದ ಕಳೆದ ವರ್ಷದವರೆಗೆ ಒಬ್ಬರು ಸದಸ್ಯರು ಇರುತ್ತಿದ್ದರು.

ಈ ಸಲ ಗಡಿನಾಡಿನ ಭಾಗದಿಂದ, ಕಾಸರಗೋಡಿನಿಂದ ಈ ಅಕಾಡಮಿಯಲ್ಲಿ ಸದಸ್ಯರೇ ಇಲ್ಲ, ಆದ್ದರಿಂದ ನನಗೆ ಕೊಟ್ಟಿರುವ ಸೀಮಿತ ಸಮಯದಲ್ಲಿ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಬೇಕಾದ ಅಗತ್ಯವಿತ್ತು, ನಾನು ಶಿಸ್ತಿಗೆ ಒಳಪಟ್ಟು ಬದುಕಿದವನು ಮಾತ್ರವಲ್ಲ ಶಿಸ್ತನ್ನು ಪಾಲಿಸಬೇಕಾದ ಕರ್ತವ್ಯ ಪ್ರಜ್ಞೆಯುಳ್ಳವನು, ಆದ್ದರಿಂದ ಈ ಎಲ್ಲಾ ವಿಚಾರಗಳನ್ನು ಸರ್ಕಾರದ ಲಕ್ಷಕ್ಕೆ ತರುತ್ತಾ ಸರ್ಕಾರವು ಯಕ್ಷಗಾನಕ್ಕೆ ಪ್ರತ್ಯೇಕವಾದ ಒಂದು ಅಕಾಡಮಿ ಮಾಡಬೇಕೆಂದು ಗಮನಸೆಳೆಯುತ್ತಿದ್ದೇನೆ. ಶಾಸಕರ ದಿನಾಚರಣೆಯ ದಿವಸ ಮಂತ್ರಿಗಳ ವೇಶವನ್ನು ನೋಡಿದರೆ ಸಾಲದು. ಎಲ್ಲಾ ಕಲಾವಿದರ ವೇಶವನ್ನು ಇಡೀ ಕರ್ನಾಟಕದ ಜನರು ನೋಡುವಂತಾಗಬೇಕು, ದೂರದರ್ಶನದಲ್ಲಿ ವೃತ್ತಿಕಲಾವಿದರಿಗೂ ಸಹ ಅವಕಾಶ ಸಿಗಬೇಕು. ಈಗ ಹವ್ಯಾಸಿ ಕಲಾವಿದರೇನು ಪ್ರದರ್ಶನ ಕೊಡುತ್ತಿದ್ದಾರೆ ಆ ಬಗ್ಗೆ ಸಹ ಲಕ್ಷ್ಯ ಹರಿಸಬೇಕೆಂದು ಹೇಳುತ್ತಾ, ಇಷ್ಟು ಮಾತನ್ನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸುತ್ತೇನೆ. ಇನ್ನು ತುಳು ಅಕಾಡಮಿಯ ಬಗ್ಗೆ ಅಧ್ಯಕ್ಷರ ಅಪ್ಪಣೆ ಕೇಳಿ ಎರಡೇ ಮಾತನ್ನು ಹೇಳುತ್ತೇನೆ. ತುಳು ಅಕಾಡಮಿ ಚೆನ್ನಾಗಿ ಕೆಲಸ ಮಾಡುತ್ತಿದ್ದಾಗ ರಾಜಕೀಯ ಪ್ರೇರಿತ ಅಲ್ಲದಿದ್ದಂಥ ಅಕಾಡಮಿಗಳನ್ನು ರದ್ದುಮಾಡುವಂಥ ಅವಸರವನ್ನೇಕೆ ತಾವು ಮಾಡಿದಿರೋ ಎಂದು ಗೊತ್ತಾಗಲಿಲ್ಲ. ಸಚಿವೆಯವರು ತುಳು ಅಕಾಡಮಿಯನ್ನು ಮಾಡುತ್ತೇವೆ ಎಂದು ಹೇಳಿರುವ ಹೇಳಿಕೆಯನ್ನು ಓದಿದ್ದೇನೆ, ಆ ರೀತಿ ಮಾಡುವುದಿದ್ದರೆ ಎಂದು ತುಳು ಅಕಾಡಮಿಯನ್ನು ಮಾಡುತ್ತೀರಿ ಒಳ್ಳೆಯ ಕೆಲಸ ಮಾಡುವವರಿಗೆ ಒಳ್ಳೆಯ ಆಶೀರ್ವಾದ ಮಾಡಿ, ಕೆಲಸ ಮಾಡದೆ ನಿದ್ದೆ ಮಾಡುವವರನ್ನು ಬಿಟ್ಟು ಹೋಗುವಂತೆ ಎತ್ತಿ ಹಾಕಬೇಕು, ಅದಕ್ಕೆ ನಮ್ಮ ಆಕ್ಷೇಪವೇನಿಲ್ಲ. ಆದ್ದರಿಂದ ತುಳು ಅಕಾಡಮಿಯನ್ನು ಮಾಡುವ ಬಗ್ಗೆ ಮಾನ್ಯ ಸಚಿವೆಯರ ಗಮನವನ್ನು ಸೆಳೆಯುತ್ತ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

1.30 ಪಿ.ಎಂ.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಸನ್ಮಾನ್ಯ ಅಧ್ಯಕ್ಷರೆ, ವಿದ್ಯುಚ್ಛಕ್ತಿ ಬಳಕೆ ಎಷ್ಟಿದೆ ಎನ್ನುವುದರ ಮೇಲೆ ಒಂದು ದೇಶದ, ಒಂದು ಪ್ರಾಂತ್ಯದ ಜನರ ಆರ್ಥಿಕ ಚಟುವಟಿಕೆಯ ಮಾನದಂಡ ನಿರ್ಧಾರಿತವಾಗುತ್ತದೆ. ಈ ಹಿನ್ನೆಲೆಯಲ್ಲಿ ಅವಲೋಕಿಸುವಾಗ ನಾವು ತೀರಾ ನಿಕೃಷ್ಟರಾಗಿದ್ದೇವೆಂದು ನನಗನ್ನಿಸುತ್ತದೆ. ಉದಾಹರಣೆಗೆ ವಿದೇಶಗಳಲ್ಲಿ ತಲಾ ಒಬ್ಬರ ವಿದ್ಯುತ್ ಬಳಕೆ ಎಷ್ಟಿದೆಯೆಂದರೆ ಅಮೆರಿಕಾದಲ್ಲಿ 12,300 ಕಿಲೋವ್ಯಾಟ್ ಇದ್ದರೆ ಆಸ್ಟ್ರೇಲಿಯಾದಲ್ಲಿ 9043, ಬ್ರಿಟನ್‌ನಲ್ಲಿ 6000, ಇಟಲಿಯಲ್ಲಿ 4600 ಇದ್ದರೆ ಭಾರತದ ಕರ್ನಾಟಕದಲ್ಲಿ ಮಾತ್ರ 320 ಕಿಲೋವ್ಯಾಟ್. ಹೀಗಾಗಿ ನಾವು ಯಾವ ರೀತಿಯಾದ ಆರ್ಥಿಕ ಚಟುವಟಿಕೆಯಲ್ಲಿದ್ದೇವೆ ನಮ್ಮಲ್ಲಿ ಇದರ ಬಳಕೆ ಎಷ್ಟಿದೆ ಇದರ ಉತ್ಪಾದನೆ ಎಷ್ಟು ಹಾಗೂ ಇದರ ಬಗ್ಗೆ ಎಷ್ಟು ಗಮನಹರಿಸಿದ್ದೇವೆ ಎಂಬುದನ್ನು ಪರ್ಯಾಲೋಚಿಸುವುದು ತುಂಬಾ ಸೂಕ್ತವಾಗುತ್ತದೆ. ಈ ರಾಜ್ಯ ಅಭಿವೃದ್ಧಿ ಪಥದಲ್ಲಿ ಸಾಗಬೇಕು ಮತ್ತು ನಮ್ಮೆಲ್ಲರ ತಲಾ ಆದಾಯ ಜಾಸ್ತಿಯಾಗಬೇಕೆಂದರೆ ವಿದ್ಯುತ್ ಉತ್ಪಾದನೆ ಕಡೆಗೆ ನಮ್ಮ ಸರ್ಕಾರ ಅತ್ಯಂತ ಹೆಚ್ಚು ಗಮನ ಕೊಡುವುದು ತೀರಾ ಅವಶ್ಯಕತೆಯಿದೆ. ವಿದ್ಯುತ್ ಬರ ನಿನ್ನೆ ಮೊನ್ನೆಯದಲ್ಲ, 1983ರಲ್ಲಿ ಇದೇ ಸರ್ಕಾರದ ಆಗಿನ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರು ಇಂದಿರಾಗಾಂಧಿಯವರಿಗೆ ಒಂದು ಪತ್ರ ಬರೆದು ರಾಜ್ಯದಲ್ಲಿ ಪವರ್ ಶಾರ್ಟೇಜ್ ಇರುವುದರಿಂದ ಸೆಂಟ್ರಲ್ ಗ್ರಿಡ್‌ನಿಂದ ನಮಗೆ ಇಂತಿಷ್ಟು ಕಿಲೋವ್ಯಾಟ್‌ಗಳಷ್ಟು ವಿದ್ಯುತ್ತನ್ನು ಸರಬರಾಜು ಮಾಡುವುದಕ್ಕೆ ಅವಕಾಶ ಮಾಡಿಕೊಡಿ ಎಂದು ತಿಳಿಸಿದ್ದರು. ಆವೊತ್ತು ನಾವು ಆಲೋಚಿಸ ಬೇಕಾಗಿತ್ತು. ಇದರ ನಂತರವೂ ಕೂಡ 1985ನೇ ಇಸವಿಯಲ್ಲಿ ಮಾನ್ಯ ಶ್ರೀ ಹೆಚ್.ಜಿ. ರಾಮಚಂದ್ರರವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚಿಸಲಾಗಿದ್ದು, ಆ ಸಮಿತಿಯಲ್ಲಿ ಆರ್ಥಿಕ ತಜ್ಞರಾದ ಮಾನ್ಯ ಡಿ.ಎಂ. ನಂಜುಂಡಪ್ಪನವರಂಥ ದೊಡ್ಡ ದೊಡ್ಡ ವ್ಯಕ್ತಿಗಳನ್ನು ನೇಮಿಸಲಾಗಿತ್ತು. Report on Planning of Power Project in Karnataka 1987 to 2000 AD.

ಎಂಬ ಒಂದು ಪುಸ್ತಕವನ್ನು ಹೊರ ತಂದಿರುವರಲ್ಲದೆ ಒಂದು ದೊಡ್ಡ ವರದಿಯನ್ನು ಕೂಡ ನಮಗೆ ಕೊಟ್ಟಿದ್ದಾರೆ. ಈ ವರದಿಯನ್ನು ಎಷ್ಟು ಜನ ಮಂತ್ರಿಗಳು, ಅಧಿಕಾರಿಗಳು ಓದಿದ್ದಾರೆ ಎಂಬ ಬಗ್ಗೆ ನನಗೆ ಸಂಶಯವಿದೆ. ಏಕೆಂದರೆ ವರದಿಯಲ್ಲಿ ಬಹಳ ಪ್ರಾಮುಖ್ಯವಾದ ಒಂದು ಅಂಶವನ್ನು ಉಲ್ಲೇಖಿಸಿದ್ದಾರೆ. ಏನೆಂದರೆ ಪ್ರತಿ ವರ್ಷವೂ 500ಮೆಗಾವ್ಯಾಟ್‌ಗಳಷ್ಟು ವಿದ್ಯುತ್ತನ್ನು ಹೆಚ್ಚಿಗೆ ಸೇರಿಸುತ್ತಾ ಹೋಗಬೇಕು, ಇಲ್ಲದಿದ್ದರೆ ನಾವು ವಿದ್ಯುತ್ ಬರವನ್ನು ನೀಗಿಸುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳಿದ್ದಾರೆ. ವಿದ್ಯುತ್ ಯೋಜನೆಗಳನ್ನು ಎಲ್ಲೆಲ್ಲಿ, ಹೇಗೆ ಮಾಡಬಹುದು, ಅದಕ್ಕೆ ವೆಚ್ಚ ಎಷ್ಟಾಗುತ್ತದೆ, ಎನ್ನುವುದನ್ನು ಇವೊತ್ತು ಹೇಳುತ್ತಾಹೋಗಿದ್ದಾರೆ. ಅದರ ವಿವರಗಳಿಗೆ ನಾನು ಹೋಗುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಪೀಠವನ್ನಲಂಕರಿಸಿದರು)

ಕಾರಣ, ಸಮಯಾವಕಾಶ ಕಡಿಮೆ ಇರುವುದರಿಂದ ಇದರ ಕುರಿತು ಹೇಳಲು ಹೋಗುವುದಿಲ್ಲ. ಆದರೆ, ಇಡೀ ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ ಅಮೂಲ್ಯವಾಗಿರುವ ಸಲಹೆಗಳನ್ನು ಆ ವರದಿಯಲ್ಲಿ ಕೊಟ್ಟಿದ್ದಾರೆ. ನಾನು ಮಾನ್ಯತೆ ಉಪ ಮುಖ್ಯಮಂತ್ರಿಗಳಿಗೆ ಹೇಳುವುದೇನೆಂದರೆ ನಿಮ್ಮ ಇಲಾಖಾಧಿಕಾರಿಗಳನ್ನು ಕೂರಿಸಿ, ಈ ವರದಿಯನ್ನು ಓದಿಸಿ ಮತ್ತು ವರದಿಯಲ್ಲಿ ತಿಳಿಸಿರುವಂತೆ ಜಾರಿಗೊಳಿಸುವಂಥ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುವುದಕ್ಕೆ ದಯಮಾಡಿ ಸೂಚನೆ ಕೊಡಬೇಕು, ಇಲ್ಲದಿದ್ದರೆ ಇದು ಕಾರ್ಯಗತವಾಗುವುದಕ್ಕೆ ಸಾಧ್ಯವಾಗುವುದಿಲ್ಲ. 'ಎಕನಾಮಿಕ್ ಟೈಮ್ಸ್'

ಎಂಬ ಪತ್ರಿಕೆಯನ್ನು ಒಂದು ದಿವಸ ನಾನು ಓದುತ್ತಿದ್ದೆ. ಆ ಪತ್ರಿಕೆಯಲ್ಲಿ ಎರಡು ಸುದ್ದಿಗಳು ಪ್ರಕಟವಾಗಿದ್ದವು. ಏನೆಂದರೆ ನಮ್ಮ ಮಾನ್ಯ ಮುಖ್ಯಮಂತ್ರಿಗಳಾಗಿರುವ ಶ್ರೀ ಹೆಚ್.ಡಿ. ದೇವೇಗೌಡರು ಸದನದಲ್ಲಿ ಮಾತನಾಡುತ್ತಾ ಸೆಂಟ್ರಲ್ ಗ್ರಿಡ್‌ನಿಂದ 300 ಮೆಗಾವ್ಯಾಟ್‌ಗಳಷ್ಟು ವಿದ್ಯುತ್ತನ್ನು ನಾವು ಕೇಳುತ್ತಿದ್ದೇವೆ ಎನ್ನುವಂಥ ಒಂದು ಸುದ್ದಿ ಪ್ರಕಟವಾಗಿದ್ದರೆ ಒರಿಸ್ಸಾದ ಮುಖ್ಯಮಂತ್ರಿಯವರು ಒಂದು ಪತ್ರಿಕಾ ಹೇಳಿಕೆ ಕೊಟ್ಟಿರುವ ಮತ್ತೊಂದು ಸುದ್ದಿ. ಏನೆಂದರೆ, ನಮ್ಮಲ್ಲಿ 300 ಮೆಗಾವ್ಯಾಟ್‌ಗಳಷ್ಟು ವಿದ್ಯುತ್ ಜಾಸ್ತಿ ಇದ್ದು, ವೀಕ್ ಗ್ರಿಡ್‌ನ ತೊಂದರೆಯಿಂದಾಗಿ ನಾವು ಅದನ್ನು ಸಾಗಾಣಿಕೆ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿರುವುದರ ಜೊತೆಗೆ Orissa invite tenders to 10000 MWtt..

ಟೆಂಡರ್ ಮಾಡುತ್ತಿದ್ದಾರೆ, ಅವರಿಗೆ ದೂರಾಲೋಚನೆ ಇದೆ. ಅವರಿಗೆ 300 ಮೆಗಾವ್ಯಾಟ್‌ಗಳಷ್ಟು ವಿದ್ಯುತ್ ಅಧಿಕವಾಗಿದ್ದಾಗ್ಯೂ ಸಹ 10,000 ಮೆಗಾವ್ಯಾಟ್‌ಗಳಷ್ಟು ವಿದ್ಯುತ್ ಉತ್ಪಾದಿಸುವುದಕ್ಕೆ ಬೇಕಾಗಿರುವ ಟೆಂಡರ್ ಅನ್ನು ಆಹ್ವಾನಿಸತಕ್ಕಂಥ ಒಂದು ಸುದ್ದಿ. ಒಂದೇ ದಿವಸದ ಪತ್ರಿಕೆಯಲ್ಲಿ ಈ ಎರಡು ಸುದ್ದಿಗಳು ಪ್ರಕಟವಾಗಿವೆ. ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಬಂದು ಹೋದ ಎಲ್ಲಾ ಸರ್ಕಾರಗಳೂ ಕೂಡ ಆಗಿನಿಂದಲೇ ಇದನ್ನು ಮಾಡುತ್ತಾ ಬಂದಿದ್ದರೆ ತುಂಬಾ ಚೆನ್ನಾಗಿರುತ್ತಿತ್ತು. ಮಾನ್ಯ ಉಪಾಧ್ಯಕ್ಷರೆ, ಮೊನ್ನೆ ದಿವಸ ನಾನು ಸದನದಲ್ಲಿ ವಿಂಡ್ ಮಿಲ್ ಬಗ್ಗೆ ಪ್ರಶ್ನೆ ಮೂಲಕ ಪ್ರಸ್ತಾಪಿಸಿದಾಗ, ಅದಕ್ಕಾಗಿ ಈಗಾಗಲೇ ಅನೇಕ ಜಾಗಗಳನ್ನು ಆಯ್ಕೆ ಮಾಡಿದ್ದೇವೆಂದು ಮಾನ್ಯ ಉಪ ಮುಖ್ಯಮಂತ್ರಿಗಳು ಉತ್ತರಿಸಿದ್ದಾರೆ. ಬರೀ ಜಾಗಗಳನ್ನು ಆಯ್ಕೆ ಮಾಡತಕ್ಕಂಥಾದ್ದಲ್ಲ, ಅದಕ್ಕೆ ಮಂಜೂರಾತಿ ಕೊಡತಕ್ಕಂಥಾದ್ದರಲ್ಲಿ ಹಿಂಜರಿಕೆ ಇದೆ. ನಿಮ್ಮಲ್ಲಿ ಯಾವುದೇ ದಾಖಲೆ ಒಂದು ಟೇಬಲ್‌ನಿಂದ ಮತ್ತೊಂದು ಟೇಬಲ್‌ಗೆ ಚಲಿಸಲು ಬಹಳ ಕಷ್ಟವಾಗುತ್ತದೆ. ಆದುದರಿಂದ ಯಾವುದೇ ಖಾಸಗಿ ಉದ್ಯಮಶೀಲರು ಕೂಡ ಯೋಜನೆ ಕೈಗೊಳ್ಳಲು ಮುಂದೆ ಬರುವುದಕ್ಕೆ ಹಿಂಜರಿಯುತ್ತಿದ್ದಾರೆ. ಸರ್ಕಾರಿ ಯಂತ್ರ ನಿಮ್ಮ ಜೊತೆ ಸಹಕರಿಸುತ್ತಿಲ್ಲ. ಆದರೆ, ತಮಿಳುನಾಡಿನಲ್ಲಿ ವಿಂಡ್ ಮಿಲ್ ಯೋಜನೆ ಕೈಗೊಳ್ಳಲು ಮುಂದೆ ಬರುವ ಉದ್ಯಮಿಶೀಲರಿಗೆ ಜಾಗ ಆಯ್ಕೆ ಮಾಡಿ, ಅಲ್ಲಿ ಶಂಕುಸ್ಥಾಪನೆ ನೆರವೇರಿಸಿ ಅವರಿಗೆ ಮಂಜೂರಾತಿಯ ಆದೇಶ ಕೊಡುತ್ತಾರೆ. ಹಣ ಹೂಡಲು ಬರುವವರಿಗೆ ಇಷ್ಟೊಂದು ಸುಲಭವಾದ ವಿಧಾನವಿರಬೇಕು.

ಆದರೆ ನಮ್ಮ ರಾಜ್ಯದಲ್ಲಿ ನೀವು ವಿಂಡ್ ಮಿಲ್ ಮಾಡುವುದಕ್ಕೆ ಜಾಗಗಳನ್ನು ಆಯ್ಕೆ ಮಾಡಿದ ನಂತರ ಕೇಂದ್ರಕ್ಕೆ ಹೋಗಿ ಆ ಬಗ್ಗೆ ಅಭಿಪ್ರಾಯ ತೆಗೆದುಕೊಂಡು ಬರುವುದು ಬೇಡ. ಚಿಕ್ಕ ಚಿಕ್ಕ ಯೋಜನೆಗಳಿರಬಹುದು. ಇವೊತ್ತು ಮಿನಿ ಹೈಡೆಲ್ ಪ್ರಾಜೆಕ್ಟ್‌ಗಳ ಬಗ್ಗೆ ಹೇಳುವುದಾದರೆ, ನಾನು ಓದಿರುವಂತೆ ಚೈನಾದಲ್ಲಿ ಒಂದು ಲಕ್ಷದಷ್ಟು ಮಿನಿ ಹೈಡೆಲ್ ಪ್ರಾಜೆಕ್ಟ್‌ಗಳ ಮೂಲಕ ಅಲ್ಲಿ ವಿದ್ಯುತ್ ಉತ್ಪಾದನೆ ಮಾಡುತ್ತಿದ್ದಾರೆ. ಇದರಿಂದ ಪರಿಸರದ ಮೇಲೆ ಯಾವುದೇ ರೀತಿಯಲ್ಲೂ ಹಾನಿಯಾಗುವುದಿಲ್ಲ. ಅಲ್ಲದೆ ಇದರ ಉತ್ಪಾದನಾ ವೆಚ್ಚ ಕೂಡ ವರ್ಷೇ ವರ್ಷೇ ಜಾಸ್ತಿಯಾಗುವುದಿಲ್ಲ. ಪುಕ್ಕಟೆಯಾಗಿ ನಮಗೆ ಸಿಗುತ್ತದೆ ಇಂತಹ ಯೋಜನೆಗಳಿಗೆ ನಾವು ಹೆಚ್ಚು ಆದ್ಯತೆ ಕೊಡಬೇಕು ಮತ್ತು ವಿದ್ಯುತ್ ಉತ್ಪಾದನೆಗೆ ಜರೂರಾಗಿ ಕಾರ್ಯಪ್ರವೃತ್ತರಾಗುವಂತೆ ಸರ್ಕಾರಿ ಯಂತ್ರದಲ್ಲಿ ವ್ಯವಸ್ಥೆ ಮಾಡಬೇಕಾಗುತ್ತದೆ. 1992ರಲ್ಲಿ ಈ ಯೋಜನೆಯನ್ನು ಕೈ ಗೊಳ್ಳಲು ಮುಂದೆ ಬಂದ ಹನ್ನೊಂದು ಜನರಿಗೆ ಸರ್ಕಾರ ಆಗ ಮಂಜೂರಾತಿ ಕೊಟ್ಟಿತು. 1993ರಲ್ಲಿ ಅವರೊಂದಿಗೆ ಒಪ್ಪಂದ ಸಹ ಮಾಡಿ ಕೊಳ್ಳಲಾಯಿತು. ಆಧರೆ 1994ನೇ ಇಸವಿಯಲ್ಲಿ ಚುನಾವಣೆಗಿಂತ ಒಂದು ತಿಂಗಳ ಮುಂಚೆ ಸರ್ಕಾರ ಯಾವ ಮಿನಿ ಹೈಡೆಲ್ ಪ್ರಾಜೆಕ್ಟ್‌ಗಳನ್ನು ಕೈಗೊಳ್ಳುವ ಕಂಪನಿಗಳ ಜೊತೆ ಒಪ್ಪಂದ

ಮಾಡಿಕೊಂಡಿತ್ತೋ ಆ ಒಪ್ಪಂದಗಳೆಲ್ಲವನ್ನೂ ರದ್ದುಗೊಳಿಸಲಾಯಿತೆಂದು ಪತ್ರಿಕೆಗಳಲ್ಲಿ ಪ್ರಕಟವಾಗುತ್ತದೆ. ಒಪ್ಪಂದವನ್ನು ರದ್ದುಗೊಳಿಸಿರುವ ಬಗ್ಗೆ ಕೂಡ ಅವರಿಗೆ ನೋಟೀಸ್ ಕೊಡಲಿಲ್ಲವಾದ್ದರಿಂದ ಅವರು ನ್ಯಾಯಾಲಯಕ್ಕೆ ಹೋಗಿ ಇವೊತ್ತು ತಡೆಯಾಜ್ಞೆ ತಂದಿದ್ದಾರೆ. ಯಾವ ಕಾರಣಕ್ಕೋಸ್ಕರ ಅವರಿಗೆ ಅನುಮತಿ ಕೊಡಲಿಲ್ಲವೆಂದು ನಾನು ಕೇಳುತ್ತಿದ್ದೇನೆ. ನಮ್ಮಲ್ಲೇನಾದರೂ ವಿದ್ಯುತ್ ಉತ್ಪಾದನೆ ಜಾಸ್ತಿ ಇತ್ತೇ? ಏಕೆ ಆ ರೀತಿ ರದ್ದುಗೊಳಿಸಿದರು? ನಮ್ಮ ರಾಜಕಾರಣ ಜಾಸ್ತಿಯಾಗುತ್ತಿದೆ, ಈ ರಾಜ್ಯದ ಅಭಿವೃದ್ಧಿಗಿಂತಲೂ ಹೆಚ್ಚಾದ ನಮ್ಮ ವೈಯಕ್ತಿಕ ತೀಟೆಗಳಿಂದ ಈ ಎಲ್ಲಾ ಯೋಜನೆಗಳು ಕೂಡ ನನೆಗುದಿಗೆ ಬಿದ್ದಿವೆ. ಇವೊತ್ತು ನಾವು ಖಾಸಗೀಕರಣದತ್ತ ಹೊರಟಿದ್ದೇವೆ. ಆದರೆ, ಹಣ ಹೂಡುವ ಜನರು ಮುಂದೆ ಬರದೇ ಹೆದರುತ್ತಾರೆ. ನಮ್ಮ ಜೊತೆ ಅವರಿಗೆ ಏಗುವುದಕ್ಕೆ ಆಗುವುದಿಲ್ಲ ನಮ್ಮ ಅಧಿಕಾರಿಗಳ ಜೊತೆ ಅವರಿಗೆ ಏಗುವುದಕ್ಕೆ ಸಾಧ್ಯವಾಗುತ್ತಿಲ್ಲ. ನಾನು ಕೇಳುತ್ತಿದ್ದೇನೆ. ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದು ಎಂಟು ತಿಂಗಳುಗಳಾದವು, ಯಾರು ಸುಮಾರು ಹನ್ನೊಂದು ಜನರು ನ್ಯಾಯಾಲಯಕ್ಕೆ ಹೋಗಿ ತಡೆಯಾಜ್ಞೆ ಆದೇಶ ತಂದಿದ್ದಾರೋ ಅವರಿಗೆ ಏಕೆ ನೀವು ಮಂಜೂರಾತಿಯ ಆದೇಶ ಕೊಡಲಿಲ್ಲ? ಅವರು ಯೋಜನೆ ಕೈಗೊಳ್ಳಲು ಸ್ಥಳವನ್ನು ಮಂಜೂರಾತಿ ಮಾಡಿ ಅವರಿಂದ ಆ ಸಂಬಂಧಿತವಾದ ಎಲ್ಲಾ ಮಾಹಿತಿಗಳನ್ನು ಪಡೆದುಕೊಂಡಿದ್ದರೂ ಸಹ ಮಂಜೂರಾತಿ ಕೊಡುವುದಕ್ಕೆ ತೊಂದರೆ ಏನು? ಆದುದರಿಂದ ನಿಮ್ಮ ಇಂಧನ ಇಲಾಖೆಯ ಕಾರ್ಯದರ್ಶಿಯವರನ್ನು ಅಥವಾ ಇನ್ನೊಬ್ಬರನ್ನು ಕರೆಸಿ ತಕ್ಷಣ ಅವರಿಗೆ ಮಂಜೂರಾತಿ ಕೊಡಬೇಕೆಂದು ತಿಳಿಸಬೇಕು. ಈ ರೀತಿಯಲ್ಲಿ ಸ್ಪೀಡ್-ಅಪ್ ಆಗದೆ ಹೋದರೆ ಬಹಳ ಕಷ್ಟವಾಗುತ್ತದೆ. ಇನ್ನು ವಿದ್ಯುತ್ ಸಾಗಾಣಿಕೆ ಮತ್ತು ವಿತರಣೆಯ ನಷ್ಟದ ಕುರಿತು ಹೇಳುವುದಾದರೆ ನಾವು ಇವೊತ್ತು ಬೆಳಕಿಗಾಗಿ ವಿದ್ಯುತ್ ಸರಬರಾಜು ಮಾಡುತ್ತಿರುವುದು ಶೇಕಡ ಏಳೂವರೆಯಷ್ಟಾದರೆ, ಸರ್ವಗೃಹ ವಿದ್ಯುತ್‌ಗೆ ಶೇಕಡ ಎಂಟೂವರೆಯಷ್ಟು ಒಟ್ಟು ಶೇಕಟ 16 ರಷ್ಟಾಗುತ್ತದೆ. ಆದರೆ, ನಮ್ಮ ವಿದ್ಯುತ್‌ನ ಸಾಗಾಣಿಕೆ ಮತ್ತು ವಿತರಣೆಯ ನಷ್ಟ ಶೇಕಡ 18ರಷ್ಟಿದೆ. ಇದನ್ನು ತಪ್ಪಿಸುವುದಕ್ಕೆ ಏನು ಕಾರ್ಯ ಯೋಜನೆ ಹಾಕಿಕೊಂಡಿದ್ದೀರಿ? ಈ ಬಗ್ಗೆ ನಿಮ್ಮ ಇಲಾಖೆಯಲ್ಲಿ ವಿಶೇಷವಾದ ತರಬೇತಿ ಕೊಡತಕ್ಕಂಥ ವ್ಯವಸ್ಥೆಯಾಗಲಿಲ್ಲ. ಪಕ್ಕದ ರಾಜ್ಯವಾದ ಮಹಾರಾಷ್ಟ್ರದ ಟಾಟಾ ಗ್ರಿಡ್‌ನಲ್ಲಿ ವಿದ್ಯುತ್ ಸಾಗಾಣಿಕೆ ಮತ್ತು ವಿತರಣೆಯ ನಷ್ಟ ಶೇಕಡ 9 ರಷ್ಟಾಗಿದ್ದರೆ., ನಮ್ಮಲ್ಲಿ ಶೇಕಡ 18ರಷ್ಟಾಗುವುದಕ್ಕೆ ಕಾರಣವೇನು? ಎಲ್ಲಿ ಲೋಪವಾಗಿದೆಯೆಂಬುದನ್ನು ದಯಮಾಡಿ ಕಂಡುಹಿಡಿಯಬೇಕಾಗದೆ. ಇನ್ನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಕುರಿತು ಹೇಳುವುದಾದರೆ, ಇದೊಂದು ದೊಡ್ಡ ಬಿಳಿ ಆನೆಯಾಗಿದೆ. ಇದರ ಬಗ್ಗೆ ಬಹಳ ಹೇಳಲು ಹೋಗುವುದಿಲ್ಲ. ನನ್ನ ಕ್ಷೇತ್ರದಲ್ಲಿ ಒಂದು ತಿಂಗಳಲ್ಲಿ ಒಂಭತ್ತು ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟುಹೋದವು. ಇದರ ನಷ್ಟವನ್ನು ನೀವು ಯಾರ ಮೇಲೆ ಹಾಕುತ್ತೀರಿ? ಈಗ ಎರಡೂವರೆ ತಿಂಗಳಾಯಿತು, ಆದರೂ ಸಹ ಬೇರೆ ಟ್ರಾನ್ಸ್‌ಫಾರ್ಮರ್‌ಗಳನ್ನು ಹಾಕಲಿಲ್ಲ. ವಿದ್ಯುಚ್ಛಕ್ತಿಯನ್ನು ನಂಬಿಕೊಂಡು ನೀರೆತ್ತುವಂಥ ರೈತರು ಹಾಳಾಗುತ್ತಿದ್ದಾರೆ. ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಲ್ಲಿ 50,000ಕ್ಕೂ ಮಿಕ್ಕಿ ನೌಕರರಿದ್ದಾರೆ, ಕೋಟಿಗಟ್ಟಳೆ ಹಣ ಇದಕ್ಕೋಸ್ಕರ ವಿತರಣೆಯಾಗುತ್ತಿದೆ. ಮಂಡಳಿಯಲ್ಲಿರುವ ಕೆಲವು ಭ್ರಷ್ಟ ಅಧಿಕಾರಿಗಳು, ನೌಕರರುಗಳ ಮೇಲೆ ತಾವು ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳದೆ ಹೋದರೆ.......

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ವಸತಿ ಮತ್ತು ನಗರಾಭಿವೃದ್ಧಿ ಕಾರ್ಯದರ್ಶಿಯವರಾದ ಜೆ. ವಾಸುದೇವನ್‌ರವರು ಇಂದು ಬೆಳಗ್ಗೆ 10.30 ಗಂಟೆಗೆ ಪೋಲೀಸ್ ಕಮೀಷನ್‌ರವರ ಮುಂದೆ ಶರಣಾಗಿದ್ದು ಅವರನ್ನು

ಕೇಂದ್ರೀಯ ಕಾರಾಗೃಹಕ್ಕ ಕರೆದು ಕೊಂಡು ಹೋಗಿದ್ದಾರೆ. ಇದರ ಬಗ್ಗೆ ಸರ್ಕಾರದ ಬಳಿ ಮಾಹಿತಿ ಇದ್ದರೆ ನೀಡಬೇಕೆಂದು ಕೇಳುತ್ತಿದ್ದೇನೆ. ಇದು ತುರ್ತು ವಿಷಯವಾಗಿರುವುದರಿಂದ ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ತುಂಬಾ ಪ್ರಾಮುಖ್ಯವಾದ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ವಿರೋಧ ಪಕ್ಷದ ನಾಯಕನಾದ ನನಗೆ ಈ ಬಗ್ಗೆ ಸುದ್ದಿ ಬಂದಿದ್ದರೂ ಸಹ ಈ ಕುರಿತು ಪ್ರಸ್ತಾಪಿಸಲು ಮಧ್ಯೆ ಪ್ರವೇಶಿಸಿದರೆ ತಾವು ಸಿಟ್ಟಿಗೇಳಬಹುದೆಂದು ತಿಳಿದು ಮಾತನಾಡಲಿಲ್ಲ. ಇದು ಅತ್ಯಂತ ಪ್ರಮುಖವಾಗಿರುವುದರಿಂದ ಈ ಬಗ್ಗೆ ಮುಖ್ಯಮಂತ್ರಿಗಳು ದೆಹಲಿಗೆ ಹೋಗಿರುವಂಥ ಸಮಯದಲ್ಲಿ ವಾಸುದೇವನ್‌ರವರು ಪೋಲೀಸ್ ಅಧಿಕಾರಿಗಳ ಮುಂದೆ ಶರಣಾಗಿರುವುದರಿಂದ ಗೃಹ ಸಚಿವರು ಸದನಕ್ಕೆ ಬಂದು ಈ ವಿಷಯವಾಗಿ ಹೇಳಿಕೆ ಕೊಡಬೇಕಾಗುತ್ತದೆ. ಮುಖ್ಯಮಂತ್ರಿಗಳು ಅದಕ್ಕಾಗಿಯೇ ದೆಹಲಿಯಲ್ಲಿರುವಂಥ ಕಾಲದಲ್ಲಿ ಈ ವಿಷಯ ಏನಾಗಿದೆ ಎಂಬುದರ ಕುರಿತು ಹೇಳಿಕೆ ಕೊಡಿಸಬೇಕು. ಏಕೆದರೆ ಇಡೀ ರಾಜ್ಯದ ಜನರು ಈ ಪ್ರಕರಣವನ್ನು ಬಹಳ ಕುತೂಹಲದಿಂದ ನೋಡುತ್ತಿದ್ದಾರಲ್ಲದೆ, ಇಡೀ ದೇಶದ ಜನರೂ ಕೂಡ ನೋಡುತ್ತಿರುವುದರಿಂದ ಇದು ಅಪಮಾನದಿಂದ ತಲೆ ತಗ್ಗಿಸುವಂಥ ಘಟನೆಯಾಗಬಹುದಾದ್ದರಿಂದ ಇದನ್ನು ತಿಳಿಸುವುದು ತುಂಬಾ ಅಗತ್ಯವಾಗಿರುವುದರಿಂದ ದಯಮಾಡಿ ಒಂದು ಹೇಳಿಕೆ ಕೊಡಿಸಬೇಕು. ಸದನದಲ್ಲಿ ಉಪ ಮುಖ್ಯಮಂತ್ರಿಗಳಿದ್ದಾರೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ನಾನು ಒಂದು ವಿಚಾರ ಹೇಳುತ್ತಿದ್ದೇನೆ. ಏನೆಂದರೆ, ವಾರಾಹಿ ಯೋಜನಾ ಪ್ರದೇಶದಿಂದ ನಾನು ಬಂದಿರುವವನಾಗಿರುವುದರಿಂದ ಅದನ್ನು ಪ್ರತಿನಿಧಿಸುತ್ತಿದ್ದೇನೆ. ಇವೊತ್ತು ಅಲ್ಲಿಗೆ ಹೋಗಿ ನೋಡಿ, ಜಲ ವಿದ್ಯುತ್ ಯೋಜನೆಗಳನ್ನು ಎಲ್ಲೆಲ್ಲಿ ಮಾಡಬೇಕೆಂದು ಹೇಳಿದ್ದಾರೋ, ಬಹುಶಃ ವಾರಾಹಿಗೆ ಯಾರಾದರೂ, ಯಾವುದೇ ರೈತರು ಕೂಡ ಬಂದು ಅಲ್ಲಿ ಹಮ್ಮಿಕೊಂಡಿರುವ ಯೋಜನೆಯನ್ನು ವೀಕ್ಷಿಸಿ ಹೋದರೆ ಅದನ್ನು ಒಪ್ಪುವುದಿಲ್ಲ.

ನಮ್ಮ ರೈತರ ಸಂಕಷ್ಟವನ್ನು ಎಷ್ಟು ಬೇಗ ನಿವಾರಣೆ ಮಾಡುತ್ತೀರಿ? ಈ ರೀತಿಯಾಗಿ ಜಲವಿದ್ಯುತ್ ಯೋಜನೆಗಳನ್ನು ನಿರ್ಮಾಣ ಮಾಡಿ ಅಲ್ಲಿ ಜಮೀನನ್ನು ಕಳೆದುಕೊಂಡವರಿಗೆ ಎಸ್.ಆರ್. ರೇಟ್‌ನಲ್ಲಿ ಅಥವಾ ಹೈ-ಪವರ್ ಕಮಿಟಿಯ ಸಭೆಯಾದರೆ ನಾಲ್ಕೈದು ವರ್ಷಗಳಾದರೂ ಸಹ ಸರ್ಕಾರದಿಂದ ಅದರ ಬಗ್ಗೆ ಆದೇಶವಾಗುವುದಿಲ್ಲ. ಇದು ನಮಗೆ ಮರ್ಯಾದೆ ತರತಕ್ಕ ಸಂಗತಿಯಲ್ಲ. ಆ ಜನರು ಸತ್ತು ಹೋಗುತ್ತಿದ್ದಾರೆ, ನೀರಿನಲ್ಲಿ ಮುಳುಗಡೆಯಾಗಿರುವ ಜಮೀನುಗಳನ್ನು ಕಳೆದುಕೊಂಡವರಿಗೆ ಯಾವುದೇ ರೀತಿಯಾದ ಉತ್ಪಾದನೆಯಿಲ್ಲ, ಕೂಲಿನಾಲಿ ಮಾಡಿ, ಭಿಕ್ಷಬೇಡತಕ್ಕ ಪರಿಸ್ಥಿತಿ ಇದೆ. ದಯಮಾಡಿ ವಾರಾಹಿ ಯೋಜನೆಯಲ್ಲಿ ಭೂಮಿಯನ್ನು ಕಳೆದುಕೊಂಡವರಿಗೆ ಪರಿಹಾರ ಕೊಡಬೇಕು.

ಇಲ್ಲದಿದ್ದರೆ ಇಡೀ ರಾಜ್ಯದಲ್ಲಿ ಎಲ್ಲೂ ಸಹ ಜಲವಿದ್ಯುತ್ ಯೋನೆಗಳನ್ನು ಮಾಡಲು ಖಂಡಿತವಾಗಿ ಅವಕಾಶ ಕೊಡುವುದಿಲ್ಲ. ಜನರು ಅದರ ವಿರುದ್ಧವಾಗಿ ಪ್ರತಿಭಟನೆ ಮಾಡುತ್ತಾರೆ ಎನ್ನುವ ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಅನೇಕ ವಿಚಾರಗಳು ಮಾತನಾಡಬೇಕಾಗಿದ್ದರೂ ಸಹ ಸಮಯದ ಅಭಾವದಿಂದ ಇವೆಲ್ಲವುಗಳನ್ನು ಹೇಳಲು ಸಾಧ್ಯವಾಗುತ್ತಿಲ್ಲ, ಈ ಸಮಸ್ಯೆಗಳನ್ನು ಅರ್ಥಮಾಡಿಕೊಂಡಿರುವ ಮಂತ್ರಿಯವರು ದಯಮಾಡಿ ಉತ್ತರವನ್ನು ಹೇಳುವ ಸಮಯದಲ್ಲಿ ಈ ತೊಂದರೆಯನ್ನು ನಿವಾರಣೆ ಮಾಡುವ ಬಗ್ಗೆ ಹೇಳಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ : ವಾಸುದೇವನ್ ಬಗ್ಗೆ ಸ್ಟೇಟ್‌ಮೆಂಟ್ ಮಾಡುತ್ತೀರ?

ಶ್ರೀ ಜೆ.ಹೆಚ್. ಪಟೇಲ್ : ಅಧಿಕೃತವಾಗಿ ಯಾವುದೇ ವಿಷಯವು ಅದರ ಬಗ್ಗೆ ಬಂದಿಲ್ಲ, ಬಂದತಕ್ಷಣವೇ ಸ್ಟೇಟ್‌ಮೆಂಟ್ ಮಾಡುತ್ತೇನೆ

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ಅತ್ಯಂತ ಜವಾಬ್ದಾರಿಯುತವಾದ ಸ್ಥಾನದಲ್ಲಿ ಕುಳಿತುಕೊಂಡು ಈ ಭಾಗದಿಂದ ಹೇಳುವುದೇನೆಂದರೆ ನಮಗೆ ಬಂದ ಸುದ್ದಿಯ ಪ್ರಕಾರ ಅದು ಬಹಳ ಮುಖ್ಯವಾಗಿದೆ. ಆದ್ದರಿಂದ ಅದರ ಬಗ್ಗೆ ಮಾಹಿತಿಯನ್ನು ತರಿಸಿಕೊಂಡು ಸ್ಟೇಟ್‌ಮೆಂಟ್ ಮಾಡಬೇಕು.

+ ಶ್ರೀ ಕೆ. ಜಯರಾಮ್‌ಶೆಟ್ಟಿ (ಉಳ್ಳಾಲ) : ಸನ್ಮಾನ್ಯ ಉಪಾಧ್ಯಕ್ಷರೆ, ನಾನು ಮೀನುಗಾರಿಕೆ ಇಲಾಖೆಯ ಬೇಡಿಕೆಯ ಮೇಲೆ ಮಾತನಾಡ ಬಯಸುತ್ತಿದ್ದೇನೆ. ನಮ್ಮ ದೇಶವು ಸುಮಾರು 2500 ಕ್ಕಿಂತ ಹೆಚ್ಚು ಕಿ.ಮೀ. ಉದ್ದದ ಕರಾವಳಿಯ ಪ್ರದೇಶವನ್ನು ಹೊಂದಿದೆ. ಅದರಲ್ಲಿ ನಮ್ಮ ರಾಜ್ಯವು ಸುಮಾರು 300 ಕಿ.ಮಿ.ಗಿಂತಲೂ ಜಾಸ್ತಿ ಕರಾವಳಿ ಪ್ರದೇಶವನ್ನು ಹೊಂದಿದೆ. ನಮ್ಮ ರಾಜ್ಯದಲ್ಲಿ ಸುಮಾರು 4-5 ಲಕ್ಷ ಮಂದಿ ಮೀನುಗಾರಿಕೆಯನ್ನು ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಆದರೆ ದುರಾದೃಷ್ಟವಶಾತ್, ಹೊಸ ಸರ್ಕಾರವು ಬಂದ ಮೇಲೆ, ರಾಜ್ಯಪಾಲರ ಭಾಷಣದಲ್ಲಾಗಲಿ, ಆಯವ್ಯಯದಲ್ಲಾಗಲಿ ಮೀನುಗಾರಿಕೆಯ ಬಗ್ಗೆ ಯಾವುದೇ ರೀತಿಯಾದ ಉಲ್ಲೇಖವಿಲ್ಲ. ಇವತ್ತು ನಮ್ಮ ರಾಜ್ಯದಲ್ಲಿ ಕನಿಷ್ಟ ಒಂದು ವರ್ಷಕ್ಕೆ 500 ಕೋಟಿ ಆದಾಯವು ಸರ್ಕಾರದ ಬೊಕ್ಕಸಕ್ಕೆ ಮೀನುಗಾರಿಕೆಯಿಂದ ಬರುತ್ತಿದೆ. ಇಂಥ ಪ್ರಧಾನವಾದ ವಿಷಯದ ಬಗ್ಗೆ ತಮ್ಮ ಸರ್ಕಾರ ಯಾವುದೇ ರೀತಿಯಾದ ಆದ್ಯತೆಯನ್ನು ಕೊಡದಿರುವುದು ತುಂಬಾ ವಿಷಾದನೀಯ. ಮೀನು ಇಂದು ಎಲ್ಲಾ ಜನಾಂಗದವರಿಗೂ ಬೇಕಾದುದು.

ಇಂದು ಬ್ರಾಹ್ಮಣರಿಂದ ಹಿಡಿದು ಶೂದ್ರರವರೆಗೆ ಮೀನನ್ನು ಪೌಷ್ಠಿಕ ಆಹಾರವಾಗಿ ತೆಗೆದುಕೊಳ್ಳುವ ಇಚ್ಛೆಯನ್ನು ವ್ಯಕ್ತಪಡಿಸುತ್ತಿದ್ದಾರೆ. ಮೀನನ್ನು ಇಂದು ಯಾರೂ ಸಹ ಮಾಂಸಾಹಾರಿಯೆಂದು ಪರಿಗಣಿಸಲು ಹೋಗುತ್ತಿಲ್ಲ. ಅಂಥ ಉತ್ತಮವಾದ ಪೌಷ್ಠಿಕ ಆಹಾರವಾಗಿ ಮತ್ತು ಆರ್ಥಿಕವಾಗಿ ಅನುಕೂಲವಾಗಿರುವ ಈ ಮೀನುಗಾರಿಕೆಯ ಬಗ್ಗೆ ಸರ್ಕಾರಿ ಆದ್ಯ ಗಮನ ಕೊಡಬೇಕು, ನಮ್ಮ ಆಡಳಿತ ಯಂತ್ರ ಇದರ ಬಗ್ಗೆ ಹೆಚ್ಚು ಆಸಕ್ತಿಯನ್ನು ಕೊಡಬೇಕೆಂದು ವಿನಂತಿಸುತ್ತಿದ್ದೇನೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಂ.ಆರ್.ಪಿ.ಎಲ್. ಸಂಸ್ಥೆ ಬಹಳ ದೊಡ್ಡ ಸಂಸ್ಥೆಯಾಗಿ ಮೀನು ಹಿಡಿಯುವ ಕೆಲಸವನ್ನು ಪ್ರಾರಂಭ ಮಾಡುತ್ತಿದೆ. ಇದಲ್ಲದೆ ಇನ್ನೂ ಹತ್ತಿಪ್ಪತ್ತು ದೊಡ್ಡ ದೊಡ್ಡ ಸಂಸ್ಥೆಗಳು ಆ ಕೆಲಸವನ್ನು ಪ್ರಾರಂಭ ಮಾಡುತ್ತಿದೆ. ಎಂ.ಆರ್.ಪಿ.ಎಲ್. ನವರು ಸುಮಾರು ನಾಲ್ಕು ಸಾವಿರ ಕೋಟಿ ಬಂಡವಾಳವನ್ನು ಹಾಕಿ ಅಲ್ಲಿ ಉದ್ಯಮವನ್ನು ನಡೆಸುತ್ತಿದ್ದಾರೆ. ಆದರೆ ಈ ಎಂ.ಆರ್.ಪಿ.ಎಲ್.ನಲ್ಲಿ ನಾಲ್ಕು ಸಾವಿರ ಕೋಟಿ ಬಂಡವಾಳವನ್ನು ಹೂಡಿ ಎಷ್ಟು ಜನರಿಗೆ ಉದ್ಯೋಗವನ್ನು ಒದಗಿಸುತ್ತಿದ್ದಾರೆ? ನಮ್ಮ ಮಂಗಳೂರಿನ ಸಂಸತ್ ಸದಸ್ಯರು, ನನ್ನ ಜಿಲ್ಲೆಯ ನನ್ನ ಪಕ್ಷದ ಏಳು ಜನ ಶಾಸಕರು ಸೇರಿ ಒಮ್ಮೆ ಎಂ.ಆರ್.ಪಿ.ಎಲ್.ನವರ ಜೊತೆ ವಿಚಾರವಿನಿಮಯ ಮಾಡಿದಾಗ, ಅವರು ಸ್ಥಳೀಯರಿಗೆ ಉದ್ಯೋಗವನ್ನು ಒದಗಿಸುವ ಬಗ್ಗೆ ಕೇಳಿದಾಗ ಕೇವಲ 600 ಜನರಿಗೆ ಮಾತ್ರ ಉದ್ಯೋಗ ಅವಕಾಶವನ್ನು ಕಲ್ಪಿಸಲಾಗಿದೆಯೆಂದು ಅವರದ್ದೇ ಆದ ಮಾತಿನಲ್ಲಿ ಹೇಳಿದರು. ಈ ಪ್ರಾಕೃತಿಕ ಸಂಪತ್ತೇನಿದೆ ಈ ಸಮುದ್ರದ ತೀರವೇನಿದೆ ಇದರಿಂದ ನಮ್ಮ ದಕ್ಷಿಣ ಮತ್ತು ಉತ್ತರ ಜಿಲ್ಲೆಯ ಸುಮಾರು 4-5 ಲಕ್ಷ ಮಂದಿಗೆ ಉದ್ಯೋಗಾವಕಾಶವನ್ನು ಮಾಡಿಕೊಡುತ್ತಿದೆ. ಆದ್ದರಿಂದ ಇಲ್ಲಿ ಬೃಹತ್ ಪ್ರಮಾಣದ ಉದ್ದಿಮೆ ಮತ್ತು ಸಾಂಪ್ರದಾಯಿಕ ಮೀನುಗಾರಿಕೆಗೂ ಅಜಗಜಾಂತರ

ವ್ಯತ್ಯಾಸವಿದೆ. ನಾಲ್ಕೂವರೆ ಲಕ್ಷ ಮಂದಿ ಮೀನುಗಾರಿಕೆಯನ್ನು ಮಾಡುತ್ತಿರಬೇಕಾದರೆ ನಾವು ಇಲ್ಲಿ ಬೃಹತ್ ಉದ್ದಿಮೆಗಿಂತ ಸಾಂಪ್ರದಾಯಿಕ ಮೀನುಗಾರಿಕೆಗೆ ಹೆಚ್ಚು ಗಮನವನ್ನು ಕೊಡಬೇಕಾಗುತ್ತದೆ. ಈ ದೃಷ್ಟಿಯಿಂದ ಸರ್ಕಾರ ಹೆಚ್ಚು ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು.

ಇವತ್ತು ಈ ಕಡಲ ಮೀನುಗಾರಿಕೆಯಲ್ಲಿ 250 ಮಧ್ಯ ಟ್ರಾಲರ್ ದೋಣಿಗಳು, 378 ಪರ್ಸಿನ್ ದೋಣಿಗಳು, 1200 ಸಣ್ಣ ಟ್ರಾಲರ್ ದೋಣಿಗಳು, ಸುಮಾರು ಹನ್ನೆರಡು ಸಾವಿರಕ್ಕಿಂತ ಜಾಸ್ತಿ ನಾಡ ದೋಣಿಗಳು ದಿನವಹಿ ಕೆಲಸ ಮಾಡುತ್ತಿವೆ. ಆದರೆ ಈ ಬೃಹತ್ ಉದ್ದಿಮೆಯಿಂದ ತೊಂದರೆಯಾಗಿದೆ. ತಮಗೆ ಅಂಕಿಅಂಶವನ್ನು ಕೊಡುವುದಾದರೆ, 1993-94ರಲ್ಲಿ 1,74,522ಮೆಟ್ರಿಕ್ ಟನ್ ಮೀನುಗಳ ಉತ್ಪಾದನೆಯಾಗಿತ್ತು, ಅದರಲ್ಲಿ ವಿದೇಶಿ ವಿನಿಮಯ 144.43 ಕೋಟಿಯಾಗಿತ್ತು, 1994-95ರಲ್ಲಿ 1,68,996 ಮೆಟ್ರಿಕ್ ಟನ್ ಮೀನು ಉತ್ಪಾದನೆಯಾಯಿತು, ಆ ವರ್ಷದಲ್ಲಿ ವಿದೇಶಿ ವಿನಿಮಯ 160.09 ಕೋಟಿ ಬಂತು. ಇದನ್ನು ತುಲನೆ ಮಾಡಿದಾಗ 1993-94ರಲ್ಲಿ ಮೀನಿನ ಉತ್ಪಾದನೆಯಲ್ಲಿ ಏನು ಆಗಿತ್ತು ಅದು 1994-95ರಲ್ಲಿ ಸುಮಾರು 20 ಲಕ್ಷ ಮೆಟ್ರಿಕ್ ಟನ್ ಕಡಿಮೆಯಾಗಿದೆ. ಕಾರಣ ಅಲ್ಲಿ ಬೃಹತ್ ಉದ್ದಮೆಗಳಿಂದ ಬರುವ ಕಲುಶಿತ ನೀರನ್ನು ಸಮುದ್ರಕ್ಕೆ ಬಿಡುವುದರಿಂದ, ಮೀನು ಹಿಡಿಯುವ ತೆಪ್ಪಗಳ ತೊಂದರೆಯಿಂದ ಇನ್ನು ಬೇರೆ ಬೇರೆ ಸಮಸ್ಯೆಗಳಿಂದ ಮೀನುಗಳನ್ನು ಹಿಡಿಯಲು ಸಾಧ್ಯವಾಗುತ್ತಿಲ್ಲವೆಂದು ಮೀನುಗಾರರು ಅನುಭವದ ಮಾತಿನಲ್ಲಿ ಹೇಳುತ್ತಿದ್ದಾರೆ. ಈ ವಿಚಾರವನ್ನು ತಾವು ಬಹಳ ಗಂಭೀರವಾಗಿ ಪರಿಗಣಿಸಬೇಕೆಂದು ಹೇಳುತ್ತಿದ್ದೇನೆ. 1993-94ರಲ್ಲಿ ಸೀಗಡಿಯ ಉತ್ಪಾದನೆ 8,127 ಮೆಟ್ರಿಕ್ ಟನ್ ಆಗಿತ್ತು. ಅದರಿಂದ 76.01 ಕೋಟಿ ಆದಾಯ ಬಂದಿದೆ. 1994Ë95ರಲ್ಲಿ 9,099 ಮೆಟ್ರಿಕ್ ಟನ್ ಸೀಗಡಿ ಉತ್ಪಾದನೆಯಾಗಿದ್ದು ಆದಾಯ 113 ಕೋಟಿ ವಿದೇಶಿ ವಿನಿಮಯ ಗಳಿಸಿಕೊಟ್ಟಿದೆ.

ನಮ್ಮ ರಾಜ್ಯದಲ್ಲಿ ಕೃಷಿ ಯಾವ ರೀತಿಯಲ್ಲಿ ಕಷ್ಟ ಸಾಧ್ಯವಾದ ಉದ್ಯಮವಾಗಿದೆಯೋ, ಕೃಷಿಯಲ್ಲಿ ರೈತರು ಎಷ್ಟರ ಮಟ್ಟಿಗೆ ಕಷ್ಟಪಡುತ್ತಿದ್ದಾರೋ, ಕೃಷಿಕರಿಗೆ ಸರ್ಕಾರ ಬೇರೆ ಬೇರೆ ರೀತಿಯಾದ ಸೌಲಭ್ಯಗಳನ್ನು ಯಾವ ರೀತಿಯಲ್ಲಿ ಕೊಡುತ್ತಿದ್ದಾರೋ ಅದೇ ರೀತಿ ಮೀನುಗಾರಿಕೆಯನ್ನು ಸಹ ಕೃಷಿ ಉದ್ಯಮವಾಗಿ ಪರಿಗಣನೆ ಮಾಡಬೇಕೆಂದು ಸರ್ಕಾರದಲ್ಲಿ ಒತ್ತಾಯ ಮಾಡುತ್ತಿದ್ದೇನೆ. ಮೀನುಗಾರರು ಬೆಳಿಗ್ಗೆ ನಾಲ್ಕು ಗಂಟೆಗೆ ಸಮುದ್ರಕ್ಕೆ ಹೋಗಿ ಮೀನನ್ನು ಹಿಡಿದು ತಂದು ಆನಂತರ ಅವರ ಮಹಿಳೆಯರು ಮೀನನ್ನು ತೆಗೆದುಕೊಂಡು ಹೋಗಿ ಮಾರಾಟ ಮಾಡಿ ಜೀವನ ಸಾಗಿಸುತ್ತಿರುವ ಪರಿಸ್ಥಿತಿ ಇದೆ. ರೈತನೂ ಸಹ ಬೆಳಗಿನ ಸಮಯದಲ್ಲಿ ಎದ್ದು ಭೂಮಿಯನ್ನು ಉತ್ತು ಬೆಳೆಯನ್ನು ಬೆಳೆದು ಅವನ ಹೆಂಡತಿ ಮಕ್ಕಳು ಅದೇ ಕೆಲಸದಲ್ಲಿ ತೊಡಗುತ್ತಿರುವುದರಿಂದ ಮೀನುಗಾರಿಕೆ ಮತ್ತು ಕೃಷಿಯನ್ನು ಒಂದೇ ಉದ್ಯಮವನ್ನಾಗಿ ಪರಿಗಣನೆ ಮಾಡಬೇಕು. ಮೀನುಗಾರಿಕೆಯನ್ನು ಕೃಷಿಯೆಂದು ಘೋಷಣೆ ಮಾಡಬೇಕೆಂದು ನಾನು ರಾಜ್ಯ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಅದರ ಜೊತೆಗೆ ರೈತರಿಗೆ ಸಿಗತಕ್ಕಂಥ ಬಡ್ಡಿ ಮನ್ನಾ, ಸಾಲ ಮನ್ನ, ಬೀಜದ ಸೌಲಭ್ಯ ಮತ್ತು ಇತರೆ ಸೌಲಭ್ಯಗಳೇನು ಕೊಡುತ್ತಿದ್ದೀರಿ ಅದೇ ರೀತಿಯಲ್ಲಿ ಮೀನುಗಾರರಿಗೆ ಸೌಲಭ್ಯಗಳನ್ನು ಒದಗಿಸಿಕೊಡಬೇಕಾಗಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಮಾನ್ಯ ಕರ್ಕಿಯವರು ಬೆಳಿಗ್ಗೆ ಮಲೆನಾಡು ಅಭಿವೃದ್ಧಿ ಮಂಡಳಿಯ ಬಗ್ಗೆ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರು. ಇವತ್ತು ಮೂರನೇ ಒಂದು ಭಾಗ ಅಂದರೆ ಸುಮಾರು 72 ಶಾಸಕರ ಕ್ಷೇತ್ರವು ಮಲೆನಾಡು ಅಭಿವೃದ್ಧಿ ಯೋಜನೆಯಲ್ಲಿ ಸೇರಿದೆ.

ಇವತ್ತು ಕರಾವಳಿ ಪ್ರದೇಶದ ಅಭಿವೃದ್ಧಿಯಾಗಬೇಕು, ಮೀನುಗಾರರ ಅಭಿವೃದ್ಧಿಯಾಗಬೇಕು, ಅವರ ಜೀವನಮಟ್ಟ ಹೆಚ್ಚಬೇಕು, ಅದಕ್ಕಿಂತ ಮುಖ್ಯವಾಗಿ ದಕ್ಷಿಣ ಕನ್ನಡ ಮತ್ತು

ಉತ್ತರ ಕನ್ನಡದ ಜನರ ಜೀವನಮಟ್ಟವು ಬದಲಾವಣೆಯಾಗಬೇಕಾದರೆ ಪ್ರತ್ಯೇಕವಾಗಿ ಕರಾವಳಿ ಅಭಿವೃದ್ಧಿ ಮಂಡಳಿಯನ್ನು ರಚನೆ ಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ. ಆ ರೀತಿ ಕರಾವಳಿ ಅಭಿವೃದ್ಧಿ ಮಂಡಳಿಯನ್ನು ಪ್ರತ್ಯೇಕವಾಗಿ ರಚನೆ ಮಾಡಿದ್ದೇ ಆದರೆ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡದ ಎರಡೂ ಜಿಲ್ಲೆಗಳ ಜನರಿಗೆ ವಿಶೇಷವಾಗಿ ಬೀಡಿಯನ್ನು ಕಟ್ಟುವವರಿಗೆ, ಮೂರ್ತೆದಾರರಿಗೆ, ನೇಕಾರರಿಗೆ, ರೈತರಿಗೆ ಸ್ಥಳೀಯ ಕೂಲಿಕಾರ್ಮಿಕರನ್ನೆಲ್ಲ ಒಳಗೊಂಡಂಥ ಒಂದು ವ್ಯವಸ್ಥೆಯನ್ನು ಮಾಡಿಕೊಂಡರೆ ಒಂದು ವರ್ಷಕ್ಕೆ ಸುಮಾರು ನೂರು ಕೋಟಿ ಅನುದಾನವನ್ನು ಕೊಟ್ಟರೆ ಈ ಎರಡೂ ಜಿಲ್ಲೆಗಳ ಸಮಗ್ರ ಅಭಿವೃದ್ಧಿಯನ್ನು ವಿಶೇಷವಾಗಿ ಮೀನುಗಾರರ ಅಭಿವೃದ್ಧಿಯನ್ನು ಮಾಡಲು ಸಾಧ್ಯವಾಗುತ್ತದೆ. ಮೀನುಗಾರರ ಹಿತರಕ್ಷಣೆಯ ದೃಷ್ಟಿಯಿಂದ ಕರಾವಳಿ ಪ್ರದೇಶದ ಉದ್ದಕ್ಕೂ ಮೀನುಗಾರರೇನು ಮೀನನ್ನು ತರುತ್ತಾರೆ ಆ ಮೀನನ್ನು ಪೇಟೆಗೆ ಮತ್ತು ದೂರಕ್ಕೆ ಸಾಗಿಸಬೇಕಾದರೆ ಅವರಿಗೆ ರಸ್ತೆಯ ವ್ಯವಸ್ಥೆಯಿಲ್ಲ. ನಮ್ಮ ಕರಾವಳಿಯ ಮುನ್ನಾರು ಕಿಲೋಮೀಟರ್ ಉದ್ದವೂ ಮೀನುಗಾರರು ಹಿಡಿದ ಮೀನನ್ನು ಸಾಗಾಟ ಮಾಡಲು ರಸ್ತೆಯ ಸೌಲಭ್ಯವನ್ನು ಮಾಡಿಕೊಡಬೇಕಾಗಿ ವಿನಂತಿ ಮಾಡುತ್ತಿದ್ದೇನೆ. ಅದರ ಜೊತೆಗೆ ಆಳ ಸಮುದ್ರದ ಮೀನುಗಾರಿಕೆಯ ಬಗ್ಗೆ ಹೇಳುವುದಾದರೆ, ನಮ್ಮ ಸಾಂಪ್ರದಾಯಿಕ ಮೀನುಗಾರರಿಗೆ ವಿದೇಶಿಯ ಆಳ ಸಮುದ್ರದ ಮೀನುಗಾರಿಕೆಯು ಬಹಳ ದೊಡ್ಡ ಹೊಡೆತವಾಗಿದೆ. ನಾನು ಸರ್ಕಾರದ ಬಗ್ಗೆ ಟೀಕೆ ಮಾಡುತ್ತಿಲ್ಲ. ಆದರೆ ಆಳ ಮೀನುಗಾರಿಕೆ ವ್ಯವಸ್ಥೆಯನ್ನು ನಮ್ಮ ಸಾಂಪ್ರದಾಯಿಕ ಮೀನುಗಾರರಿಗೂ ಸಹ ಮಾಡಿಕೊಡಬೇಕು. ಅದಕ್ಕೆ ಬೇಕಾದಂಥ ನಮ್ಮ ಹೊಸ ಕಾಯಕಲ್ಪಗಳನ್ನು ಮಾಡಿಕೊಡಬೇಕು. ಅತ್ಯಾಧುನಿಕ ತಂತ್ರಜ್ಞಾನ, ಆಳ ಸಮುದ್ರದ ಮೀನುಗಾರಿಕೆಯ ಬಗ್ಗೆ ಸ್ಯಾಟಲೈಟ್ ಕಾರ್ಯಕ್ರಮದ ಮೂಲಕ ಅಥವಾ ವಾಕಿಟಾಕಿಯ ಮೂಲಕ, ಮೀನಿನ ತೆಪ್ಪವನ್ನು ಕಂಡು ಹಿಡಿಯುವ ಬಗ್ಗೆ ಅವರಿಗೆ ಸೆಮಿನಾರ್‌ಗಳನ್ನು ಮಾಡಿ ಅವರಲ್ಲಿ ಅದರ ಬಗ್ಗೆ ಜ್ಞಾನವನ್ನು ಮೂಡಿಸಬೇಕು. ಆ ರೀತಿ ಮಾಡಿದ್ದೇ ಆದರೆ ನಮ್ಮ ಮೀನುಗಾರರನ್ನು ಬೇರೆ ಬೇರೆ ರೀತಿಯಲ್ಲಿ ಅಭಿವೃದ್ಧಿ ಪಡಿಸಲು ಸಾಧ್ಯವಾಗುತ್ತದೆ. ಅದರ ಜೊತೆಗೆ ಮೀನುಗಾರಿಕೆಯ ಬಗ್ಗೆ ತಿಳುವಳಿಕೆ, ಕಾಯಕಲ್ಪಗಳನ್ನು, ಹೊಸ ಮಾಹಿತಿಯನ್ನು ತೆಗೆದುಕೊಳ್ಳಲು ಪ್ರದರ್ಶನವನ್ನು ಏರ್ಪಾಡು ಮಾಡಬೇಕೆಂದು ವಿನಂತಿ ಮಾಡುತ್ತಿದ್ದೇನೆ.

ಇನ್ನು ವಿಶೇಷವಾಗಿ ಮೀನುಗಾರರಿಗೆ ತಾವು ಉಳಿತಾಯ ಮತ್ತು ಪರಿಹಾರ ಯೋಜನೆಯನ್ನು ತೆಗೆದುಕೊಳ್ಳಬೇಕು. ಜೂನ್‌ನಿಂದ ಸೆಪ್ಟೆಂಬರ್ ತಿಂಗಳವರೆಗೆ ಮೀನುಗಾರಿಕೆ ನಿಷೇಧ. ಆ ಸಮಯದಲ್ಲಿ ನಮ್ಮ ಸಾಂಪ್ರದಾಯಿಕ ಮೀನುಗಾರರಿಗೆ ಬಡ ಮೀನುಗಾರರಿಗೆ ಯಾವುದೇ ಆದಯ ಇರುವುದಿಲ್ಲ. ಆದ್ದರಿಂದ ಈ ಸಂದರ್ಭದಲ್ಲಿ ಸರ್ಕಾರ ಅವರಿಗೆ ಬೇರೆ ಕಾರ್ಯಕ್ರಮಗಳನ್ನು ಹಾಕಿ ಉಳಿತಾಯ ವ್ಯವಸ್ಥೆಯನ್ನು ಮಾಡಿಕೊಂಡು ಹೋದರೆ ಮುಂದೆ ಬರುವಂತಹ ಸೀಸನ್‌ನಲ್ಲಿ ಅವರಿಗೆ ಬಂದ ಹಣದಲ್ಲಿ ಅವರು ಹೊಂದಾಣಿಕೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅದರ ಜೊತೆಗೆ ಮೀನುಗಳ ಅಸ್ವಾಭಾವಿಕ ಸಾವುಗಳ ತನಿಖೆ ಮಾಡಬೇಕು. ಬಂದರು ಅಭಿವೃದ್ಧಿ ಮಾಡಬೇಕು. ವಿಶೇಷವಾಗಿ ಸಮುದ್ರ ತಡೆ ಗೋಡೆಯನ್ನು ವ್ಯವಸ್ಥೆ ಮಾಡಬೇಕು. ವಿಶೇಷವಾಗಿ ಸಮುದ್ರ ತಡೆಗೋಡೆಯನ್ನು ವ್ಯವಸ್ಥೆ ಮಾಡಬೇಕು. ನಮ್ಮ ಕಿರು ನೀರಾವರಿ ಮಂತ್ರಿಗಳು ಮತ್ತು ನಮ್ಮ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಈ ಕಡೆ ಬಂದಿದ್ದರು. ಎರಡು ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೇವೆ ಎಂದು ಹೇಳಿದ್ದರು. ಆದರೆ ನಾನು ಜಿಲ್ಲಾಧಿಕಾರಿಗಳಿಗೆ ವಿಚಾರಿಸಿದಾಗ ಕೇವಲ ಐದು ಲಕ್ಷ ರೂಪಾಯಿ ಮಾತ್ರ ಬಿಡುಗಡೆ ಆಗಿದೆ. ಬಾಕಿ ಹಣವನ್ನು ಹಿಂದಿನ ಸಲದ ಸಾಲ ಬಟವಾಡೆಗೋಸ್ಕರ ವಿನಿಯೋಗಿಸಿದ್ದಾರೆ ಎಂದು ತಿಳಿದು ಬಂದಿದೆ. ಸಮುದ್ರ ಮೀನುಗಾರಿಕೆ ಎಂದರೆ ಸಮುದ್ರದ ಬದಿಯಲ್ಲಿಯೇ ಅವರು ಜೀವನ ಮಾಡಬೇಕು. ಸಮುದ್ರ ಕರಾವಳಿಯ ಬದಿಯಲ್ಲಿಯೇ ಅವರು

ಜೀವನ ಮಾಡಬೇಕಾಗಿರುವುದರಿಂದ ಬೆಳಕಾದರೆ ಅವರಿಗೆ ಬೇರೆ ಪ್ರಶ್ನೆ ಇಲ್ಲ. ಸಮುದ್ರ ಕೊರೆತಕ್ಕೆ ಯಾವತ್ತು ಅವರ ಮನೆಗಳು ನುಚ್ಚು ನೂರಾಗಿ ಹೋಗುವ ಸಾಧ್ಯತೆ ಇರುವುದರಿಂದ ಸರ್ಕಾರ ತೀವ್ರ ಗಮನ ಕೊಟ್ಟು ಈ ಕ್ಷೇತ್ರದಲ್ಲಿ ಸಮುದ್ರ ತಡೆ ಗೋಡೆಗಳನ್ನು ಅತ್ಯಂತ ಅವಶ್ಯಕವಾಗಿ ಜರೂರಾಗಿ ನಿರ್ಮಿಸಬೇಕೆಂದು ನಾನು ಒತ್ತಾಯ ಮಾಡುತ್ತಾ ಬಹುಶಃ ಬಹಳಷ್ಟು ವಿಚಾರಗಳು ಉಂಟು. ತಾವು ಕೊಟ್ಟ ಸಮಯಕ್ಕೆ ಸರಿಯಾಗಿ ನಾನು ಮುಗಿಸುತ್ತಿದ್ದೇನೆ. ಮೀನುಗಾರಿಕಾ ನಿಗಮವನ್ನು ಪುನಃಶ್ಚೇತನ ಮಾಡಿ ಮೀನುಗಾರರ ಮಹಿಳೆಯರಿಗೆ ಬೇರೆ ಬೇರೆ ವಿಧದ ಸವಲತ್ತು ಕಾರ್ಯಕ್ರಮಗಳನ್ನು ಶಾಲೆ ಅಥವಾ ತಿಳುವಳಿಕೆಗಳನ್ನು ಕೊಟ್ಟು ಅವರು ಸಮಾಜವನ್ನು ಅಥವಾ ಅವರ ಜೀವನ ಪದ್ಧತಿಯನ್ನು ಮೇಲಕ್ಕೆ ತರಬೇಕಾದಲ್ಲಿ ಕರ್ನಾಟಕ ರಾಜ್ಯಸರ್ಕಾರ ಒತ್ತು ಕೊಡಬೇಕೆಂದು ವಿನಂತಿ ಮಾಡಿ ನನಗೆ ತಾವು ಅನುಮತಿ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

ಶ್ರೀ ವಾಸುದೇವನ್‌ರವರು ಜೈಲಿಗೆ ಹೋಗಿರುವ ಬಗ್ಗೆ

+ ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನನಗೆ ಸಿಕ್ಕಿರುವಂತಹ ಸರಿಯಾದ ಮಾಹಿತಿ ಪ್ರಕಾರ 10.45ಕ್ಕೆ ವಿಮಾನ ನಿಲ್ದಾಣಕ್ಕೆ ಬರುತ್ತಿದ್ದ ಹಾಗೆ ಪೋಲೀಸ್ ಕಮೀಷನರ್ ಅವರನ್ನು ಅರೆಸ್ಟ್ ಮಾಡಿ ವಾಸುದೇವನ್‌ರವರು ಸೆಂಟ್ರಲ್ ಜೈಲಿಗೆ ಹೋಗಿದ್ದಾರೆ. ಇದು ನಮಗೆ ಬಂದಿರುವ ಮಾಹಿತಿ. ಮಾನ್ಯ ಉಪ ಮುಖ್ಯಮಂತ್ರಿಗಳು ಇಲ್ಲಿ ಕುಳಿತಾಗ 10.45ಕ್ಕೆ ಈ ಘಟನೆ ನಡೆದಿದ್ದರೆ ಈ ಸದನವನ್ನು ತಾವು ಕಾನ್‌ಫಿಡೆನ್ಸ್‌ಗೆ ತೆಗೆದುಕೊಳ್ಳಬೇಕಾಗಿತ್ತು. ಸತ್ಯ ಸಂಗತಿಯನ್ನು ತಾವು ತಿಳಿಸಬೇಕಾಗಿತ್ತು. ನಮಗೆಲ್ಲರಿಗೂ ಆತಂಕ ತಂದಿರುವಂತಹ ಸಂಗತಿ ಎಂದರೆ, ಒಬ್ಬ ಪ್ರಾಮಾಣಿಕ ಅಧಿಕಾರಿ ಯಾವುದೇ ಅಪರಾಧ ಮಾಡದೆ ಅವರು ಜೈಲಿಗೆ ಹೋಗುವಂತಹ ಪರಿಸ್ಥಿತಿ ಏನಿದೆ, ಬಹುಶಃ ಈ ನಾಡಿನ ಜನ ತಲೆ ತಗ್ಗಿಸುವಂಥದ್ದು ಮಾಡಿದ್ದೀರಿ. ಇಡೀ ದೇಶದ ಜನ ನಮಗೆ ಛೀಮಾರಿ ಹಾಕುವಂತಹ ಒಂದು ಪರಿಸ್ಥಿತಿಯನ್ನು ತಂದಿಟ್ಟಿದ್ದೀರಿ. ಇವತ್ತು ನೈತಿಕ ಹೊಣೆ ಹೊತ್ತು ನಿಮ್ಮ ಸರ್ಕಾರ ರಾಜೀನಾಮೆ ಕೊಡಬೇಕಾಗುತ್ತದೆ. ಅವರು ಜೈಲಿಗೆ ಹೋಗಿದ್ದರೆ. ಅದು ವಾಸುದೇವನ್ ಅಲ್ಲ ಜೈಲಿಗೆ ಹೋಗಬೇಕಾಗಿರುವುದು. ಮುಖ್ಯ ಮಂತ್ರಿಗಳು ಹೋಗುತ್ತೀರೋ, ಉಪ ಮುಖ್ಯಮಂತ್ರಿಗಳು ಹೋಗುತ್ತೀರೋ, ಅಥವಾ ನೈತಿಕ ಹೊಣೆ ಹೊತ್ತು ರಾಜೀನಾಮೆ ಕೊಟ್ಟು ಮನೆಗೆ ಹೋಗುತ್ತೀರೋ, ನಮಗೆ ಗೊತ್ತಿಲ್ಲ. ಮತ್ತು ಈ ಒಂದು ಹಿನ್ನೆಲೆಯಲ್ಲಿ ಏನೆಲ್ಲಾ ಹೇಳಬೇಕೋ ಮುಂಚೆಯೇ ಹೇಳಿದ್ದೇವೆ.

15 ದಿವಸಗಳ ಮುಂಚೆ ನಾನು ಕಾಲಿಂಗ್ ಅಟೆನ್‌ಷನ್ ಕಳುಹಿಸಿಕೊಟ್ಟಿದ್ದೆ. ಸರ್ಕಾರದ ಗಮನವನ್ನು ಸೆಳೆಯುವಂತಹ ಪ್ರಯತ್ನ ಮಾಡಿದ್ದೆ. ಅವತ್ತು ಸದನ ಮುಂದೂಡಿ ಮುಖ್ಯಮಂತ್ರಿಗಳು ಮಾಡುವಂತಹ ಎಲ್ಲಾ ಪ್ರಯತ್ನಕ್ಕೆ ನಮ್ಮ ಸಹಕಾರ ಇದೆ ಎಂದು ಹೇಳಿ ನಮ್ಮೆಲ್ಲರ ಸಹಕಾರವನ್ನು ಕೊಟ್ಟಿದ್ದೇವೆ. ಆದರೆ ಇವತ್ತು ನಿಮ್ಮ ದೌರ್ಬಲ್ಯದಿಂದ ಯಾರಿಗೋ ಒಂದು ಪ್ರಮೋಷನ್ ಕೊಡಬೇಕು ಎನ್ನುವ ಕಾರಣಕ್ಕೋಸ್ಕರ ಸುಪ್ರೀಂ ಕೋರ್ಟ್ ಆದೇಶವನ್ನು ನಿರ್ಲಕ್ಷ್ಯ ಮಾಡಿ ಇಡೀ ದೇಶದಲ್ಲಿ ಈ ತರಹ ಘಟನೆ ಮೊದಲ ಬಾರಿಗೆ ಆಗಿದೆ. ಒಬ್ಬ ಅಧಿಕಾರಿ ಜೈಲಿಗೆ ಹೋಗುವಂತಹ ಒಂದು ಅಕ್ಷಮ್ಯ ಅಪರಾಧ ತಮ್ಮ ಸರ್ಕಾರದಿಂದ ಆಗಿರುವುದರಿಂದ ದಯಮಾಡಿ ತಾವು ಹೇಳಿಕೆಯನ್ನು ಕೊಡಬೇಕು. ಅಲ್ಲಿಯವರೆಗೆ ನಾವು ಕಾರ್ಯಕ್ರಮದಲ್ಲಿ ಭಾಗವಹಿಸುವುದಕ್ಕೆ ಆಗುವುದಿಲ್ಲ. ಇಲ್ಲದೆ ಹೋದರೆ ನಾವು ಸದನದಿಂದ ಹೊರಗಡೆ ಹೋಗುತ್ತೇವೆ. ವಾಸ್ತವಿಕ ಸತ್ಯಾ ಸತ್ಯತೆಯ ಬಗ್ಗೆ ಉಪ ಮುಖ್ಯಮಂತ್ರಿಗಳು